ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ ಮಾಲಿಕೆ

# ರತ್ನತ್ರಯರು ಮತ್ತು ಜಾನಪದ

ಡಾ. ಸರಸ್ವತಿ ವಿಜಯಕುಮಾರ್



ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ ಬೆಂಗಳೂರು ೫೬೦ ೦೦೨

ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ-೨

# ರತ್ನತ್ರಯರು ಮತ್ತು ಜಾನಪದ

ಡಾ. ಸರಸ್ವತಿ ವಿಜಯಕುಮಾರ್

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು - ೫೬೦ ೦೦೨

*RATNATRAYARU MATTU JANAPADA* (Classic Literature & Folklore Series-2) : *Written By. Dr. Saraswathi Vijayakumar Pub. M.S. Siddegowda Registrar, Janapada and Yakshagana Academy, Nrupatunga Road, Bangalore - 560 002.*

Pages XIII + 68 Price : Rs. 25/

© Publisher

***ಪ್ರಧಾನ ಸಂಪಾದಕರು :***

ಪ್ರೊ. ಎಚ್. ಜೆ. ಲಕ್ಕಪ್ಪಗೌಡ

***ಸಂಪಾದಕರು :***

ಪ್ರೊ. ಹಂಪ. ನಾಗರಾಜಯ್ಯ

ಮೊದಲ ಮುದ್ರಣ : ೧೯೯೭

ಬೆಲೆ : ರೂ. ೨೫/-

**ಛಾಯಾಕ್ಷರ ಜೋಡಣೆ:**

ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು - ೪೦ ✆ : 3402575

**ಮುದ್ರಕರು :**

ಸ್ನೇಹಾ ಪ್ರಿಂಟರ್ಸ್

೨೨, ೨ನೇ ಮೈನ್, ಅತ್ತಿಗುಪ್ಪೆ

ವಿಜಯನಗರ ೨ನೇ ಹಂತ

ಬೆಂಗಳೂರು - ೪೦ ✆ : 3302417

## ಪ್ರಧಾನ ಸಂಪಾದಕರ ಮಾತು

೧

ಲೋಕದ ಜ್ಞಾನ - ವಿಜ್ಞಾನಗಳ ತಾಯಿಬೇರು ಜಾನಪದ ಎಂಬುದು ಈಗಾಗಲೇ ಎಲ್ಲರಿಗೂ ಗೊತ್ತಿರುವ ಸಂಗತಿ. ಎಲ್ಲಾ ಸಾಹಿತ್ಯ, ಕಲೆ, ಸಮಾಜ ವಿಜ್ಞಾನಗಳು ಹಾಗೂ ಕೆಲಮಟ್ಟಿಗೆ ಎಲ್ಲಾ ಜೀವ ವಿಜ್ಞಾನಗಳು ಜಾನಪದದ ಪ್ರೇರಣೆಯಿಂದ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ, ಮುಖ್ಯ ಉದ್ದೇಶವನ್ನು ಎತ್ತರಿಸಿಕೊಂಡಿವೆ, ಸತ್ವವನ್ನು ಸಮೃದ್ಧಿಸಿಕೊಂಡಿವೆ ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ ಇದು ನಮ್ಮ ಸಾಹಿತ್ಯದ ಎಲ್ಲಾ ಸ್ತರಗಳಲ್ಲಿಯೂ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಉಸಿರನ್ನು ಬೆರೆಸಿದೆ ಎಂಬುದು ಆಳವಾದ ಸಂಶೋಧನೆಯ ಮೂಲಕ ವಿದಿತವಾಗಿದೆ.

೨

ಶಿಷ್ಟ ಸಾಹಿತ್ಯ ಅಕ್ಷರಸ್ಥರ ಸೃಷ್ಟಿಯಾದರೆ ಜನಪದ ಸಾಹಿತ್ಯ ಅನಕ್ಷರಸ್ಥರ ಸೃಜನಶೀಲ ಪ್ರತಿಭೆಯ ಅತಿ ಸಹಜವಾದ ಶಕ್ತ ಅಭಿವ್ಯಕ್ತಿ. ಆದ್ದರಿಂದ ಶಿಷ್ಟ ಸಾಹಿತ್ಯ ಹುಟ್ಟುವ ಮೊದಲೇ ಆದಿ ಮಾನವರು ತಮ್ಮ ದೈನಂದಿನ ನೋವು - ನಲಿವುಗಳನ್ನು, ಅನಿಸಿಕೆ-ಅನುಭವಗಳನ್ನು, ಕನಸು- ಕಲ್ಪನೆಗಳನ್ನು, ಕ್ರಿಯೆ-ಪ್ರತಿಕ್ರಿಯೆಗಳನ್ನು ಮೌಖಿಕವಾಗಿ ಹಾಡಿನ ಮೂಲಕ, ಕಥೆಯ ಮೂಲಕ, ಗಾದೆ ಒಗಟು ಒಡಪುಗಳ ಮೂಲಕ ತೋಡಿಕೊಂಡರು. ಇದು ಆಡು ಮಾತಿಗಿಂತ ವಿಶೇಷವಾದ ಧ್ವನಿಯನ್ನು, ಬನಿಯನ್ನು, ಶಕ್ತಿಯನ್ನು, ಪರಿಣಾಮವನ್ನು, ಹೊಸ ಹೊಳಹುಗಳನ್ನು ಒಳಗೊಂಡ ಕಾರಣದಿಂದ ಅವುಗಳನ್ನು ಮರೆಯುವುದು ಸುಲಭವಾಗಲಿಲ್ಲ, ಹೀಗಾಗಿ ಅವುಗಳನ್ನು ಮೊದಲು ಕೇಳಿದ ಜನ ಮತ್ತೊಬ್ಬರಿಗೆ,

ಮಗದೊಬ್ಬರಿಗೆ, ಇಡೀ ಸಮುದಾಯಕ್ಕೆ ತಮ್ಮ ಕಂಠ ಮತ್ತು ನಾಲಿಗೆಗಳ ಮೂಲಕ ದಾಟಿಸುತ್ತಾ ಬಂದರು. ಹೀಗಾಗಿ ಅದು ಅಂಬುತೀರ್ಥದಲ್ಲಿ ಹುಟ್ಟುವ ಶರಾವತಿಯಂತೆ ಚಿಕ್ಕದಾಗಿ, ಅಪ್ರಸಿದ್ಧವಾಗಿ ಹುಟ್ಟಿ, ಬರುಬರುತ್ತಾ ತೊರೆಯಾಗಿ ನೆರೆಯಾಗಿ ಮಹಾಪ್ರವಾಹವಾಗಿ ಹರಿಯಿತು. ಈ ಪ್ರವಾಹದಲ್ಲಿ ಜನತೆಯ ಜೀವನದ ಎಲ್ಲಾ ಮಗ್ಗುಲುಗಳು ಬಹುಮಟ್ಟಿಗೆ ಮೈ ತೆರೆದುಕೊಂಡವು. ಲಿಪಿಯ ಉಗಮದೊಡನೆ, ಅಕ್ಷರ ಕಲಿಕೆಯೊಡನೆ, ಶಿಕ್ಷಣ ಸಿಕ್ಕಿದಂತೆಲ್ಲಾ ಈ ಮೌಖಿಕ ಪರಂಪರೆಯ ಅನುಭವಗಳು ಪ್ರತಿಭಾವಂತ ಕವಿಗಳ ಮನಸ್ಸಿನ ಭೂಮಿಯಲ್ಲಿ ನೆಟ್ಟು ಅವರ ಕೃತಿಗಳಿಗೆ ಜೀವಧಾತುವನ್ನು ಒದಗಿಸಿದವು. ಈ ಸಂಗತಿ ಜಗತ್ತಿನ ಎಲ್ಲಾ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಏಕೆಂದರೆ ಸಾಹಿತ್ಯ ಎನ್ನುವುದು ಜನಜೀವನದಿಂದ ಹೊರತಾದುದಲ್ಲ. ಜನರಿಂದಲೇ ಹುಟ್ಟಿ, ಜನರಿಗಾಗಿ ಹುಟ್ಟಿ, ಜನರಿಗೆ ಪ್ರೇರಣೆಯನ್ನು ಕೊಡುವುದು ಈ ಸಾಹಿತ್ಯ. ಆದ್ದರಿಂದ ಒಂದು ಸಾಹಿತ್ಯ ಶಕ್ತವೂ ಉಪಯುಕ್ತವೂ ಪರಿಣಾಮಕಾರಿಯೂ ಪ್ರಾಮಾಣಿಕವೂ ಜೀವನಬದ್ಧವೂ ಮತ್ತು ಚಿರಂತನವೂ ಆಗಬೇಕಾದರೆ ಅದರಲ್ಲಿ ಜಾನಪದ ಜೀವನದ ಮುಖ್ಯಾಂಶಗಳು ಕಣ್ತೆರೆಯಬೇಕು. ಈ ದೃಷ್ಟಿಯಿಂದ ನೋಡಿದಾಗ ಜಾನಪದವನ್ನು ಹೊರತುಪಡಿಸಿದ ಯಾವ ಮಹಾಕೃತಿಯೂ ಸಾಹಿತ್ಯ ಲೋಕದಲ್ಲಿ ಆವಿರ್ಭವಿಸಿಲ್ಲ ಎಂಬ ಸತ್ಯ ಮನದಟ್ಟಾಗುತ್ತದೆ.

ಭಾರತದ ರಾಮಾಯಣ, ಮಹಾಭಾರತಗಳನ್ನೇ ಉದಾಹರಣೆಗೆ ತೆಗೆದುಕೊಂಡರೆ ಈ ಸಂಗತಿ ಸ್ಪಷ್ಟವಾಗುತ್ತದೆ. ರಾಮಾಯಣದ ವಸ್ತು ಮತ್ತು ಅದರ ಪಾತ್ರಗಳು ಇಂದಿಗೂ ಭಾರತೀಯರಿಗೆ ಆದರ್ಶದ ಸೆಲೆಗಳಾಗಿವೆ. ಈ ರಾಮಾಯಣದ ಕತೆ ಕೂಡ ಮೂಲತಃ ಜನಪದ ಗಾಯಕರಿಂದಲೇ ಸೃಷ್ಟಿಗೊಂಡಿದ್ದು ಮತ್ತು ಪ್ರಸಾರಗೊಂಡಿದ್ದು. ರಾಮಾಯಣದ ಬಾಲಕಾಂಡದಲ್ಲಿ ಕ್ರೌಂಚವಧೆಯ ಕಾರಣದಿಂದ ವ್ಯಾಧನಿಗೆ ಶಾಪಕೊಟ್ಟ ವಾಲ್ಮೀಕಿ ತನ್ನ ಎಲೆಮನೆಗೆ ಹೋದಮೇಲೆ ತಾನು ಕೊಟ್ಟ ಶಾಪ ಹೇಗೆ ತಂತ್ರೀಲಯ ಸಮನ್ವಿತವಾಗಿ, ಶ್ಲೋಕವಾಗಿ ಪರಿಣಮಿಸಿದೆ ಎಂಬುದನ್ನು ಕಂಡುಕೊಳ್ಳುತ್ತಾನೆ. ಅದೇ ವೇಳೆಗೆ ನಾರದ ಮಹರ್ಷಿ ಬಂದು ಶ್ರೀರಾಮನ ಕತೆಯನ್ನು ಹೇಳಿ ರಾಮಾಯಣ ಕೃತಿಯನ್ನು ರಚಿಸುವಂತೆ ಆಶೀರ್ವದಿಸುತ್ತಾನೆ. ಅಂದರೆ ಈಗಾಗಲೇ ರಾಮನೆಂಬ ಆದರ್ಶ ನಾಯಕನ, ಸೀತೆ ಎಂಬ ಆದರ್ಶ ಸತಿಯ, ಲಕ್ಷ್ಮಣ-ಭರತರೆಂಬ ಆದರ್ಶ ಸಹೋದರರ,

ಹನುಮಂತನೆಂಬ ಆದರ್ಶ ಸೇವಕನ ಕತೆ ತಲೆಮಾರಿನಿಂದ ತಲೆಮಾರಿಗೆ ಹಬ್ಬಿ ಜನಮನದಲ್ಲಿ ಹರಡಿ ಅತ್ಯಂತ ಪರಿಪಕ್ವ ಸ್ಥಿತಿಗೆ ಬೆಳೆದು ಬಂದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೆ ವಾಸ್ತವವಾಗಿ ವಾಲ್ಮೀಕಿ ನಾರದ ಹೇಳಿದಂಥ ಕತೆಯಿಂದ ಪ್ರಭಾವಿತಗೊಂಡು ನಾಡಿನ ಉದ್ದಗಲಕ್ಕೂ ಕಾಡು, ಹಳ್ಳಿ, ನಗರಗಳೆನ್ನದೆ ಸಂಚರಿಸಿ ಜನಮನದಲ್ಲಿ ಸ್ಥಾಯಿಯಾಗಿದ್ದ ರಾಮ ಕತೆಯ ವಿವಿಧ ರೂಪಗಳನ್ನು ಸಂಗ್ರಹಿಸಿರಬೇಕು. ಹೀಗೆ ತಾನು ಸಂಗ್ರಹಿಸಿದ ರಾಮ ಕತೆಗೆ ಸಂಬಂಧಪಟ್ಟ ವೈವಿಧ್ಯಮಯ ಘಟನೆಗಳಿಗೆ ಒಂದು ಸುಸಾಂಗತ್ಯವನ್ನು ಕಲ್ಪಿಸಿ ಮಹಾಕಾವ್ಯವಾಗಿ ಹೆಣೆದಿರಬೇಕು. ರಾಮಾಯಣದಲ್ಲಿ ಬರುವ ಅಯೋಧ್ಯೆಯ, ಕಿಷ್ಕಿಂಧೆಯ ಮತ್ತು ಲಂಕೆಯ ಜನಜೀವನದ ಚಿತ್ರಗಳು ಆ ಕಾಲದ ಜನರ ಚಿತ್ರಗಳೇ ಆಗಿವೆ. ತಮ್ಮ ವಿವೇಚನೆಗೆ ಮೀರಿದ ಸಂಗತಿಗಳಿಗೆ, ತಮ್ಮ ಅಳತೆಗೆ ದಕ್ಕಲಾರದ ವ್ಯಕ್ತಿಗಳ ಜೀವನಕ್ಕೆ ಅತಿಮಾನುಷತೆಯನ್ನು ಆರೋಪಿಸುವುದು ಜನಪದರ ವಿಶಿಷ್ಟ ಗುಣ. ಅದರಂತೆ ಮಾನವನಾಗಿದ್ದ ರಾಮನನ್ನು ದೈವ ಸಮಾನನನ್ನಾಗಿ, ಅನಂತರ ದೇವತಾ ಅವತಾರವನ್ನಾಗಿ ನಮ್ಮ ಜನ ಕಲ್ಪಿಸಿದರು. ಹಾಗೆಯೇ ಸ್ವಭಾವದಲ್ಲಿ ಪಕ್ವವಾಗಿಲ್ಲದ ಮತ್ತು ಆಚರಣೆಯಲ್ಲಿ ಸ್ವಲ್ಪ ಅನಾಗರಿಕತೆಯನ್ನು ಮೈಗೂಡಿಸಿಕೊಂಡಿದ್ದ ಜನರನ್ನು ವಾನರರೆಂದೂ; ದೈಹಿಕ ಶಕ್ತಿಯಲ್ಲಿ, ಭಾವೋನ್ಮಾದದಲ್ಲಿ ಮತ್ತು ರೂಕ್ಷತನದಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದ ಜನರನ್ನು ರಾಕ್ಷಸರೆಂದೂ ಮತ್ತು ಇತರರೆಲ್ಲರಿಗಿಂತ ಮೇಲ್ಮಟ್ಟದ ಹಾಗೂ ನಿಗ್ರಹಾನುಗ್ರಹ ಸಮರ್ಥರಾಗಿದ್ದ ಜನಾಂಗವನ್ನು ದೇವರೆಂದೂ ನಮ್ಮವರು ಪರಿಭಾವಿಸಿರಬೇಕು. ಈ ಕಲ್ಪನೆಗಳೇ ಮುಂದೆ ವಾಲ್ಮೀಕಿ ರಾಮಾಯಣದಲ್ಲಿ ಪ್ರತಿಭಾಪೂರ್ಣವಾಗಿ ಬೆಳೆದಿರುವುದನ್ನು ಕಾಣಬಹುದು. ಇದಲ್ಲದೆ ಉತ್ತರಕಾಂಡದಲ್ಲಿ ವಾಲ್ಮೀಕಿ ಲವಕುಶರಿಗೆ ರಾಮಾಯಣವನ್ನು ಬಾಯಿಪಾಠ ಮಾಡಿಸಿದನೆಂದೂ, ಅವರಿಬ್ಬರೂ ಮಧುರ ಕಂಠದಿಂದ ಆ ಕಾವ್ಯವನ್ನು ಹಾಡಿದರೆಂದೂ ಉಲ್ಲೇಖವಿದೆ. ವಾಸ್ತವವಾಗಿ ಈ ಉಲ್ಲೇಖ ಭಾರತದ ಮೊತ್ತಮೊದಲ ಜನಪದ ಗಾಯಕರನ್ನು ಕುರಿತದ್ದು ಎಂದು ಊಹಿಸಬಹುದು. ಅಕ್ಷರ ನಾಗರಿಕತೆ ಇಲ್ಲದಿದ್ದ ಅಥವಾ ಕಡಿಮೆ ಇದ್ದ ಕಾಲದಲ್ಲಿ ತನ್ನ ರಾಮಾಯಣವನ್ನು ಜನಪ್ರಿಯಗೊಳಿಸಲು ಈ ಕುಶಲವರೆಂಬ ಗಾಯಕದ್ವಯರನ್ನು ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡಿರಬಹುದು. ಇವರೇ ಮುಂದೆ ರಾಮನ ಮಕ್ಕಳೆಂಬ ಕಲ್ಪನೆಯ ಪರಿವೇಷದಲ್ಲಿ ಸಿಕ್ಕಿಹಾಕಿಕೊಂಡರು. ಇಷ್ಟೇ ಅಲ್ಲ, ವಾಲ್ಮೀಕಿ

ರಾಮಾಯಣದಲ್ಲಿ ಬರುವ ವಿವಿಧ ಜನರ ಸ್ವಭಾವಗಳು, ನಡವಳಿಕೆಗಳು, ಆಚರಣೆಗಳು ಆ ಕಾಲದ ಜನಜೀವನವನ್ನು ಸಾಕಷ್ಟು ಶಕ್ತಿಯುತವಾಗಿ ಪ್ರತಿಬಿಂಬಿಸಿವೆ. ನೇಗಿಲ ತೆರೆಯಲ್ಲಿ ಸೀತೆ ಹುಟ್ಟಿದಳು ಎಂಬ ಕಲ್ಪನೆ, ಅವಳು ಜನಕನಿಗೆ ಯಜ್ಞಭೂಮಿಯಲ್ಲಿ ದೊರೆತಳೆಂಬ ಕಲ್ಪನೆ ಕೂಡ ಯಾವುದೋ ಕಾರಣಕ್ಕಾಗಿ ಭೂಮಿಗೆ ಬಿಸಾಡಲ್ಪಟ್ಟ ಅನಾಥ ಹೆಣ್ಣೊಂದರ ಕತೆಯ ಅತಿಮಾನುಷ ಸ್ವರೂಪ ಮಾತ್ರ ಎಂದು ಊಹಿಸಲಿಕ್ಕೆ ಆಸ್ಪದವಿದೆ. ಬೇಡನಾಗಿ, ದಲಿತನಾಗಿ ಹುಟ್ಟಿ ವಾಲ್ಮೀಕಿಯಾದ ಕವಿ ಈ ಮೂಲಕ ಪರಿತ್ಯಜಿತ ಹೆಣ್ಣು ಮಗುವೊಂದನ್ನು ನಾಯಕಿಯನ್ನಾಗಿ ಮಾಡಿ ಆಕೆ ಸಕಲ ಸ್ತ್ರೀಯರ ಆದರ್ಶ ಮಾತೆಯಾಗಿ ಹೇಗೆ ಬೆಳೆದಳು ಎಂಬ ರೋಚಕ ಚಿತ್ರವನ್ನು ನೀಡಿ ಮತ್ತೊಂದು ರೀತಿಯಲ್ಲಿ ದಲಿತ ಯಶೋಗಾಥೆಯನ್ನು ಹಾಡಿದ್ದಾನೆಂದು ಊಹಿಸಲು ಅವಕಾಶವಿದೆ. ಈ ಕೃತಿಯಲ್ಲಿರುವ ಅತಿಮಾನುಷ ಮುಖವಾಡವನ್ನು ಸರಿಸಿ ಯಾವುದೇ ಸಂಪ್ರದಾಯಶೀಲ ಕನ್ನಡಕವನ್ನು ಹಾಕದೆ ಪರಿಶೀಲಿಸಿದಾಗ ಇಂತಹ ಜಾನಪದೀಯ ತಥ್ಯಗಳು ಹೊಮ್ಮುತ್ತವೆ. ಹಾಗೆಯೇ ಅಣ್ಣನ ಹೆಂಡತಿಯನ್ನು ತಮ್ಮನೂ, ತಮ್ಮನ ಹೆಂಡತಿಯನ್ನು ಅಣ್ಣನೂ ಇಟ್ಟುಕೊಳ್ಳುವ ಅಥವಾ ಮದುವೆ ಮಾಡಿಕೊಳ್ಳುವ ಗುಡ್ಡುಗಾಡು ಜನರ ಸಂಪ್ರದಾಯವನ್ನು ಯಾವುದೇ ಅಶ್ಲೀಲತೆಯ ಅಥವಾ ಜಿಗುಪ್ಸೆಯ ಸೋಂಕಿಲ್ಲದೆ ಅತ್ಯಂತ ಸಹಜವಾಗಿ ವರ್ಣಿಸಿದ್ದಾನೆ. ತಮ್ಮ ರಾಕ್ಷಸ ಬಲದಿಂದ ಮನ ಬಂದವರನ್ನು ಅಪಹರಿಸುವ ಮತ್ತು ಭೋಗಿಸುವ ರಾಕ್ಷಸ ಸಂಸ್ಕೃತಿ ಕೂಡ ಆದಿಮಾನವ ಜನಾಂಗದ್ದೇ ಆಗಿದೆ. ಮಹಾಭಾರತದ ಕತೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಸ್ವಲ್ಪಮಟ್ಟಿಗೆ ಪ್ರಸಿದ್ಧವಾಗಿದ್ದ ಒಂದು ಗುಂಪಿನಲ್ಲಿ ನಡೆದ ದಾಯಾದಿಗಳ ಕಲಹದ ದುರಂತ ಕತೆ ಕರ್ಣಾಕರ್ಣಿಯಾಗಿ ತಲೆಮಾರಿನಿಂದ ತಲೆಮಾರಿಗೆ ಹಾದು ಬಂದು ವ್ಯಾಸ ಎನ್ನುವ ಪ್ರತಿಭಾಶೀಲ ಸಂಯೋಜಕ ಕವಿಯ ಕೈಗೆ ಸಿಕ್ಕಿ ಈಗಿನ ರೂಪವನ್ನು ತಳೆದಿದೆ. ವ್ಯಾಸ ಎಂಬ ಹೆಸರು ಕೂಡ ಜಿಜ್ಞಾಸೆಗೆ ಅರ್ಹವಾಗಿದೆ. ವ್ಯಾಸ ಎಂದರೆ ಸುದೀರ್ಘವಾದುದು ಎಂದು ಅರ್ಥ. ಆದ್ದರಿಂದ ಜನಪದ ಕವಿಗಳ ಒಂದು ಸುದೀರ್ಘ ಸರಣಿಯೇ ಇಷ್ಟು ಬೃಹತ್ ಕತೆಯ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಊಹಿಸುವುದು ತಪ್ಪಲ್ಲ. ಮಹಾಭಾರತ ಕಾಲದ ವಿವಿಧ ಜನಗಳ ಸಂಪ್ರದಾಯಗಳು ಇಲ್ಲಿ ವೈಭವೀಕೃತವಾಗಿದ್ದರೂ ಅವುಗಳ ಮೂಲ ಏನು ಎಂಬುದನ್ನು ಅರಿಯುವುದು ಕಷ್ಟವಲ್ಲ. ಬೆಸ್ತರ ಹೆಣ್ಣಿಗೆ ಋಷಿ

ಮರುಳಾಗುವುದು, ಆ ಕಾಲದಲ್ಲಿ ಮೇಲ್ವರ್ಗದವರು ಕೆಳವರ್ಗದ ಹೆಣ್ಣುಗಳನ್ನು ತಮ್ಮ ಉಪಭೋಗದ ವಸ್ತುಗಳೆಂದು ಭಾವಿಸಿದ್ದರ ಸಂಕೇತ. ಪರಾಶರ ಅವಳನ್ನು ಯೋಜನಗಂಧಿಯನ್ನಾಗಿ ಮಾಡಿದ ಎಂಬುದು ಕೇವಲ ಕಲ್ಪನೆ ಅಥವಾ ಅವಳು ಬೆಸ್ತ ಜೀವನವನ್ನು ತೊರೆದು ಸ್ವಲ್ಪ ಮಟ್ಟಿಗೆ ನಾಗರಿಕ ಜೀವನಕ್ಕೆ ಕಾಲಿಟ್ಟಳು ಎಂಬುದರ ಸಂಕೇತ. ಹಾಗೆಯೇ ಗಂಡಂದಿರಲ್ಲಿ ಮಕ್ಕಳಾಗದಿದ್ದಾಗ ಹಿರಿಯರ ಅನುಮತಿ ಪಡೆದು ಬೇರೊಬ್ಬ ಗಂಡಸಿನಲ್ಲಿ ಮಕ್ಕಳನ್ನು ಪಡೆಯುವ ನಿಯೋಗ ಪದ್ಧತಿ ಆಗಿನ ಕಾಲದ ಜನಜೀವನದಲ್ಲಿದ್ದ ಜಾನಪದ ಪದ್ಧತಿಯೇ ಆಗಿದೆ. ಕುಂತಿಗೆ ದೂರ್ವಾಸರು ಕೊಟ್ಟ ವರಗಳ ಪ್ರಸಂಗವನ್ನು ಹೀಗೆಯೇ ಅರ್ಥೈಸಬೇಕಾಗುತ್ತದೆ. ಪಾಂಡುರಾಜ ಶಾಪಗ್ರಸ್ತನಾದ ಮೇಲೆ ಯಮಧರ್ಮ, ಇಂದ್ರ, ವಾಯು, ಅಶ್ವಿನಿ ದೇವತೆಗಳಿಂದ ಪಾಂಡವರು ಹುಟ್ಟುವ ಕ್ರಿಯೆ ಕೂಡ ಗಂಡನ ಅನುಮತಿಯನ್ನು ಪಡೆದು ಪರಪುರುಷರಲ್ಲಿ ಮಕ್ಕಳನ್ನು ಪಡೆಯುವ ಸಂಪ್ರದಾಯದ ವೈಭವೀಕರಣ. ಹಾಗೆಯೇ ಅಲ್ಲಿ ಬರುವ ಹಿಡಿಂಬೆ, ಘಟೋದ್ಗಜ ಮುಂತಾದ ರಾಕ್ಷಸರು ಎನ್ನಲಾದ ಜನಾಂಗ ಕೂಡ ಕಾಡಿನ ನಾಡಿನ ಅನಾಗರಿಕ ಜನಾಂಗದ ಕಾಲ್ಪನಿಕ ರೂಪ. ಮಹಾಭಾರತದಲ್ಲಿ ಮೊದಲಿನಿಂದ ಕೊನೆಯವರೆಗೂ ಬೇರೆ ಬೇರೆ ಜನಾಂಗಗಳು, ಭಿನ್ನ ಭಿನ್ನವಾದ ಸಂಸ್ಕೃತಿಯ ವಿಧಾನಗಳ ಚಿತ್ರ ಸಾಮಾಜಿಕ ಮಾನವಶಾಸ್ತ್ರದ ದೃಷ್ಟಿಯಿಂದ ಪರಿಶೀಲನಾರ್ಹವಾಗಿದೆ. ಅಲ್ಲಿ ಬರುವ ಬೇಡ ಏಕಲವ್ಯ ಸಮಸಪ್ತಕರೆಂಬ ರಾಕ್ಷಸರು, ಅರಸು ಮನೆತನದ ಕಟ್ಟು ಕಟ್ಟಳೆಗಳು ಮುಂತಾದುವೆಲ್ಲಾ ಜಾನಪದೀಯವೇ. ಸಮಾಜದ ಶ್ರೇಣಿಯಲ್ಲಿ ಅತ್ಯಂತ ಮೇಲ್ದರ್ಜೆಯಲ್ಲಿದ್ದ ಜನರನ್ನು ದೇವತೆಗಳೆಂದು ಕಲ್ಪಿಸಿ, ಸಾಮಾನ್ಯ ಮಾನವರ ಜೀವನದಲ್ಲಿ ಅವರು ನಿರ್ಣಾಯಕ ಪಾತ್ರವನ್ನು ವಹಿಸಿದಂಥ ಚಿತ್ರಣ ಕೂಡ ಜಾನಪದೀಯ ಕಲ್ಪನೆಯೇ. ದ್ರೌಪದಿ ಪಂಚ ಪಾಂಡವರ ಪತ್ನಿಯಾದರೂ ಅವಳಿಗೆ ಪತಿವ್ರತೆ ಎಂಬ ಪಟ್ಟವನ್ನು ಕಟ್ಟಿದ ಬಗೆ ಆ ಕಾಲದಲ್ಲಿದ್ದ ವಿವಾಹ ಪದ್ಧತಿಯನ್ನು ಸಂಕೇತಿಸುತ್ತದೆ. ಕೆಲವು ಗುಡ್ಡಗಾಡು ಜನಾಂಗಗಳಲ್ಲಿ ಅಣ್ಣತಮ್ಮಂದಿರೆಲ್ಲರೂ ಒಬ್ಬಳೇ ಹೆಣ್ಣನ್ನು ಮದುವೆಯಾಗುವ ಸಂಪ್ರದಾಯವಿದೆ. ಅದೇ ಸಂಪ್ರದಾಯದಂತೆ ಪಾಂಡವರು ಬಹುಶಃ ದುರ್ಯೋಧನನನ್ನು ಗೆಲ್ಲಲು ಅವರಿಗೆ ಅನಿವಾರ್ಯವಾಗಿದ್ದ ಐಕ್ಯಮತ್ಯ ದೃಷ್ಟಿಯಿಂದ ಕೂಡ ದ್ರೌಪದಿಯನ್ನು ಎಲ್ಲರೂ ಮದುವೆಯಾದರು. ಮಹಾಭಾರತದಲ್ಲಿ ಬರುವ ಇಂತಹ ಹಲವಾರು ಪ್ರಸಂಗಗಳು ಸಾಹಿತ್ಯದ ಮೂಲವಾಹಿನಿಯಾಗಿ ಜಾನಪದ

ಹೇಗೆ ಹರಿದಿದೆ-ಸಾಹಿತ್ಯ ರೂಪದಲ್ಲಿ ಮಾತ್ರವಲ್ಲ ಜೀವನ ರೂಪದಲ್ಲೂ ಎಂಬುದನ್ನು ತೋರ್ಪಡಿಸುತ್ತದೆ.

ಗ್ರೀಸಿನ ಮಹಾಕಾವ್ಯಗಳಾದ ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳು ಸಹ ಮೂಲತಃ ಜನಪದ ಕಾವ್ಯಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವುಗಳ ಕರ್ತೃ ಹೋಮರನೆಂದು ಹೇಳಲಾಗಿದ್ದರೂ ಹೋಮರ್ ಎಂಬ ಪದ ಹೋಮರಾಯ್ಡ್ ಪದದಿಂದ ನಿಷ್ಪತ್ತಿಯಾಗಿದೆಯೆಂದೂ, ಹೋಮರಾಯ್ಡ್ ಎಂದರೆ ಅಂಧ ಗಾಯಕರ ಗುಂಪು ಎಂದೂ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಗ್ರೀಸ್‌ನಲ್ಲಿ ಪ್ರಚಲಿತವಾಗಿದ್ದ ವೀರರ ಕತೆಗಳನ್ನು ಹಾಡುಗಳನ್ನಾಗಿ ಕಟ್ಟಿ ಅಲ್ಲಿನ ಜನಪದ ಗಾಯಕರು ಹಾಡಿ ರಾಷ್ಟ್ರದ ತುಂಬಾ ಪ್ರಚಾರ ಮಾಡಿದರು. ಆ ಸತ್ಯ ಕತೆಗಳಿಗೆ ಶುದ್ಧ ಜನಪದ ಕಲ್ಪನೆಗಳು ಹೆಣೆದುಕೊಂಡು ಅವರಿಗೆಲ್ಲಾ ಅತಿಮಾನುಷ ಪರಿವೇಷ ಸೃಷ್ಟಿಯಾಯಿತು. ಇವೆರಡೂ ಕಾವ್ಯಗಳನ್ನು ಈಗಲೂ ಓದಿದಾಗ ಇಲ್ಲಿನ ಮಾನವರು, ದೇವತೆಗಳೆಲ್ಲರೂ ಮೂಲತಃ ಜಾನಪದೀಯವಾಗಿ ದೈಹಿಕ ಶಕ್ತಿ ಮತ್ತು ಭಾವ ತೀವ್ರತೆಗಳನ್ನು ಒಳಗೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲಿ ಬರುವ ಎಷ್ಟೋ ಪ್ರಸಂಗಗಳು ಜನಪದ ಕಥೆಗಳು ನೇರವಾಗಿ ಸಾಹಿತ್ಯ ಗರ್ಭವನ್ನು ಪ್ರವೇಶ ಮಾಡಿದುದರ ಕುರುಹಾಗಿದೆ. ವರ್ಜಿಲನ 'ಈನಿಯಡ್' ಕೂಡ ಇಂತಹ ಜನಪದ ಕತೆಯ ಮರು ಸೃಷ್ಟಿಯಾಗಿದೆ. ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್' ಬೈಬಲಿನ ಕತೆಗೆ ಕ್ರಿಸ್ತನ ಸುತ್ತ ಹೆಣೆದ ಜನಪದ ಕಲ್ಪನೆಯ ಸೃಷ್ಟಿಯಾಗಿದೆ. ಇಂತಹ ಉದಾಹರಣೆಗಳನ್ನು ನೂರಾರು ಸಂಖ್ಯೆಯಲ್ಲಿ ಕೊಡುತ್ತಾ ಹೋಗಬಹುದು. ಹೀಗೆ ಜಾನಪದ ನಮ್ಮ ಪ್ರಾಚೀನ ಸಾಹಿತ್ಯದ ಒಂದು ಅವಿಭಾಜ್ಯವೂ ಅನನ್ಯವೂ ಮತ್ತು ಅರ್ಥಪೂರ್ಣವೂ ಆದ ಅಂಗವಾಗಿದೆ.

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಇದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿಯನ್ನು ಒದಗಿಸಿರುವುದನ್ನು ಗುರುತಿಸಬಹುದಾಗಿದೆ. ಪಂಪ, ರನ್ನ, ನಾಗವರ್ಮ, ನಯಸೇನ, ಬಂಧುವರ್ಮ, ಶಿವಕೋಟ್ಯಾಚಾರ್ಯ, ಬ್ರಹ್ಮಶಿವ, ಮುಂತಾದ ಎಲ್ಲಾ ಪ್ರಾಚೀನ ಕವಿಗಳಲ್ಲಿ, ವಚನ ಕೀರ್ತನೆ ರಗಳೆಗಳಲ್ಲಿ; ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ; ಆಧುನಿಕ ಕತೆ, ಕಾದಂಬರಿ, ನಾಟಕ,

ಕವಿತೆಗಳಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಈ ಜಾನಪದ ಅಂಶಗಳು ಜೀವಸತ್ವಗಳಾಗಿರುವುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದಾಗಿದೆ.

೩

ಪ್ರಾಚೀನ ಕನ್ನಡ ಸಾಹಿತ್ಯವೆಲ್ಲ ಬಹುಮಟ್ಟಿಗೆ ಪಂಡಿತ ಸಮ್ಮುಖಿವಾಗಿದ್ದ ಕಾರಣ ಮತ್ತು ಅದರ ವಸ್ತುವಿನ್ಯಾಸ, ಪಾತ್ರ ಚಿತ್ರಣ, ನಿರೂಪಣಾ ವಿಧಾನ, ಭಾಷಾ ಪ್ರಯೋಗ ಮುಂತಾದವುಗಳೆಲ್ಲಾ ಸಂಸ್ಕೃತದ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆದ ಕಾರಣ ಅನಕ್ಷರಸ್ಥ ಗ್ರಾಮೀಣರ ದೈನಂದಿನ ಜೀವನವನ್ನು ಅವರನ್ನಾಳುವ ನಂಬಿಕೆಗಳನ್ನು, ಅವರು ಅನುಸರಿಸುವ ಸಂಪ್ರದಾಯಗಳನ್ನು, ಅವರ ಮನೋಲಹರಿಗಳನ್ನು ಅವುಗಳ ಮೂಲ ಸ್ವರೂಪದಲ್ಲಿ ಹಿಡಿದಿಡುವ ಅಸಲು ಕಸುಬನ್ನು ಈ ಕವಿಗಳು ಮಾಡಲಿಲ್ಲ. ಈ ಕವಿಗಳ ಒಂದು ಕಣ್ಣು ತಮ್ಮ ಆಶ್ರಯದಾತನಾದ ರಾಜನ ಮೇಲೆ, ಮತ್ತೊಂದು ಕಣ್ಣು ಅವರನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸುವ ಕವಿ - ವಿದ್ವಾಂಸರ ಮೇಲೆ ಇದ್ದ ಕಾರಣ ಅವರು ಜನರಿಗಾಗಿ ಜನರದ್ದೇ ಆದ ಜೀವನ ರೇಖೆಗಳನ್ನು ಹೆಚ್ಚಾಗಿ ಕಾವ್ಯ ಗರ್ಭದಲ್ಲಿ ಅಳವಡಿಸಿಕೊಳ್ಳಲಿಲ್ಲ. ಆದರೆ ಸಾಹಿತ್ಯ ಹಿಡಿ ಮಂದಿಗಲ್ಲ, ಬಹುಮಂದಿಗೆ ಮತ್ತು ಬಹುಮಂದಿಯ ಜೀವನ ಸಾಕ್ಷಾತ್ಕಾರಕ್ಕೆ ಎಂಬ ಪ್ರಧಾನ ಕಾಳಜಿಯನ್ನು ವಚನಕಾರರು ಅನನ್ಯವಾಗಿ ತಮ್ಮ ವಚನಗಳಲ್ಲಿ ಪುನರವತಾರ ಮಾಡಿಸಿದ ಕಾರಣದಿಂದಾಗಿ ಸಹಜವಾಗಿ ವಚನ ಸಾಹಿತ್ಯ ಮತ್ತು ಅದರ ಜಾಡನ್ನೇ ಹಿಡಿದ ರಗಳೆ, ತ್ರಿಪದಿ ಸಾಹಿತ್ಯಗಳು ತಮ್ಮ ಸಾಹಿತ್ಯದ ಕೇಂದ್ರ ನೆಲೆಗಳನ್ನಾಗಿ ಜನರ ಭಾಷೆ, ಅನುಭವ ಮತ್ತು ಆಶಯಗಳನ್ನು ಆಶ್ರಯಿಸಿದವು. ಹಾಗೆಯೇ ರಾಜರನ್ನು ರಾಜಾಸ್ಥಾನವನ್ನು ಧಿಕ್ಕರಿಸಿ ಉದ್ದೇಶಪೂರ್ವಕವಾಗಿ ಜನದೆಡೆ ಕಣ್ಣು ತೆರೆದ ಕವಿಗಳು ಪುರಾಣ ಲೋಕಕ್ಕಿಂತ ವಿಶಿಷ್ಟವಾದ ಭಿನ್ನವಾದ ಮತ್ತು ಜೀವಂತವಾದ ಹೊಸ ಅನುಭವ ಲೋಕವನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೀಗಾಗಿ ಸಾಹಿತ್ಯದ ವಸ್ತುವಿನಲ್ಲಿ, ಭಾಷೆಯಲ್ಲಿ, ಛಂದಸ್ಸಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ಆವರಣ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಜಾನಪದ ಆಶಯಗಳನ್ನು ಸಹಜವಾಗಿ ತುಂಬಿಕೊಂಡು ಈ ಸಾಹಿತ್ಯವನ್ನು ಜಡ್ಡು ಕಟ್ಟಿದ ರಾಜಾಸ್ಥಾನ ಸಾಹಿತ್ಯದ ಸಂಕೋಲೆಗಳಿಂದ ಹೊರಗೆಳೆದು ಜನರ ನಡುವೆ ತಂದವು.

೪

ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಮಾತ್ರವಲ್ಲದೆ ಆಧುನಿಕ ಸಾಹಿತ್ಯವೂ ಸಹ ಜಾನಪದದ ಪ್ರೇರಣೆಯಿಂದ ದೂರವಾಗಿಲ್ಲ. ಅಷ್ಟೇ ಅಲ್ಲ, ಹಿಂದಿನ ಸಾಹಿತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲೇ ಜಾನಪದ ಸಂವೇದನೆಯನ್ನು ಇದು ಗರ್ಭೀಕರಿಸಿಕೊಂಡಿದೆ. ಆಧುನಿಕ ಯುಗ ಎಲ್ಲ ವರ್ಗದ ಮತ್ತು ಸ್ತರದ ಜನರಿಗೆ ವಿದ್ಯಾಭ್ಯಾಸದ ಬೆಳಕು ಮುಕ್ತವಾಗಿ ದೊರೆಯಲು ಅನುವು ಮಾಡಿಕೊಟ್ಟ ಕಾರಣ ಮೇಲ್ವರ್ಗದ ಜನ ಮಾತ್ರವಲ್ಲದೆ ಅಕ್ಷರ ವಂಚಿತರಾಗಿದ್ದ ಈ ವರ್ಗದ ಜನ ಸಹ ಸುಪ್ತವಾಗಿದ್ದ ತಮ್ಮ ಜೀವನದ ಅನುಭವಗಳನ್ನು ಮುಕ್ತವಾಗಿ ತೋಡಿಕೊಳ್ಳಲು ಇದು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಗ್ರಾಮೀಣ ಅನುಭವಗಳಿಂದ ಪುಷ್ಟರಾಗಿರುವ ಲೇಖಕರು ಹೊರಹೊಮ್ಮಿ ಜಾನಪದ ಜೀವನವನ್ನೇ ಬೃಹತ್ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವ ಸಾಹಿತ್ಯವನ್ನು ರಚಿಸಲು ತೊಡಗಿದರು. ನವೋದಯ, ಪ್ರಗತಿಶೀಲ, ದಲಿತ ಮತ್ತು ಬಂಡಾಯ ಸಾಹಿತ್ಯ ಪಂಥಗಳು ಮುಖ್ಯವಾಗಿ ಈ ನೆಲೆಯಿಂದಲೇ ಅವಿರ್ಭವಿಸಿವೆ. ತುಂಬಾ ವ್ಯಾಪಕವಾಗಿ ಬೆಳೆದಿರುವ ಆಧುನಿಕ ಸಾಹಿತ್ಯ ಈ ಕಾರಣದಿಂದಲೇ ಜಾನಪದದ ಸಂವೇದನೆಯನ್ನು ಅತ್ಯಂತ ದಟ್ಟವಾಗಿ ಅಭಿವ್ಯಕ್ತಿಸುವ ಮೂಲಕ ಪ್ರಾಚೀನ ಸಾಹಿತ್ಯಕ್ಕಿಂತ ವಿಭಿನ್ನವಾದ ವಿಶಿಷ್ಟ ಅನುಭವಲೋಕಗಳನ್ನು ನಮ್ಮ ಮುಂದೆ ತೆರೆದಿಟ್ಟು, ಸತ್ವಶಾಲಿಯಾಗಿ ಕಂಗೊಳಿಸುತ್ತಿದೆ.

ಹೀಗಾಗಿ ನಮ್ಮ ಸಾವಿರ ವರ್ಷಕ್ಕೂ ಹೆಚ್ಚುಕಾಲ ಬೆಳೆದು ಬಂದಿರುವ ಕನ್ನಡದ ಶಿಷ್ಟ ಸಾಹಿತ್ಯ ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಅತ್ಯಂತ ಫಲಪ್ರದವೆಂದು ಭಾವಿಸಲಾಗಿದೆ. ಆದ್ದರಿಂದ ಆಕಾಡೆಮಿ 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ವಿಶಿಷ್ಟ ಮಾಲಿಕೆಯನ್ನು ಆರಂಭಿಸಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇತ್ತೀಚಿನ ಸಾಹಿತ್ಯವನ್ನು ಜಾನಪದೀಯ ದೃಷ್ಟಿಯಿಂದ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವೊಂದನ್ನು ಮಾಡುತ್ತಿದೆ. ಅದರ ಫಲವೇ ಈಗ ಬೆಳಕು ಕಾಣುತ್ತಿರುವ ಹನ್ನೆರಡು ಪುಸ್ತಕಗಳು. ಸಾಹಿತ್ಯ ಕ್ಷೇತ್ರದಲ್ಲಿ ಈಗಾಗಲೇ ಹೆಸರು ಮಾಡಿರುವ ಹಿರಿ ಕಿರಿಯ ಲೇಖಕರು ಈ ಮಾಲಿಕೆಯ ಗ್ರಂಥಗಳನ್ನು ತುಂಬಾ ಪರಿಶ್ರಮದಿಂದ ರಚಿಸಿಕೊಟ್ಟಿದ್ದಾರೆ. ಇವುಗಳಲ್ಲಿ

ಅವರ ಆಳವಾದ ಅಧ್ಯಯನ, ಸೂಕ್ಷ್ಮವಾದ ವಿಶ್ಲೇಷಣಾ ಶಕ್ತಿ, ಜಾನಪದದ ಬಗೆಗಿನ ದಟ್ಟವಾದ ಪ್ರಜ್ಞೆ ಹಾಗೂ ನಿರೂಪಣೆಯ ಸೊಗಸುಗಳು ಮೇಳಗೊಂಡಿವೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಇವು ತೋರುಗಂಬಗಳಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಅಕಾಡೆಮಿಯ ಕೋರಿಕೆ ಮೇರೆಗೆ ಈ ಕೃತಿಗಳನ್ನು ರಚಿಸಿಕೊಟ್ಟ ಲೇಖಕ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ. ಕನ್ನಡದ ಪ್ರಸಿದ್ಧ ಪ್ರಾಧ್ಯಾಪಕರೂ ವಿದ್ವಾಂಸರೂ ಆದ ಮಾನ್ಯ ಮಿತ್ರರಾದ ಪ್ರೊ. ಹಂಪ. ನಾಗರಾಜಯ್ಯನವರು ಈ ಮಾಲೆಯ ಸಂಪಾದಕರಾಗಿ ತಮ್ಮ ಬಿಡುವಿರದ ಕಾರ್ಯಕ್ರಮಗಳ ನಡುವೆಯೂ ಲೇಖಕರೊಡನೆ ಪತ್ರ ವ್ಯವಹಾರ ಮಾಡಿ ಲೇಖನಗಳನ್ನು ತರಿಸಿಕೊಂಡು ಅವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಸಂಪಾದಿಸಿಕೊಟ್ಟಿದ್ದಾರೆ. ಅವರು ಅಕಾಡೆಮಿಯ ಮೇಲೆ ಹೊರಿಸಿರುವ ಋಣಭಾರ ಕೃತಜ್ಞತೆಗೆ ಮೀರಿದ್ದು. ಅವರನ್ನು ನಾನು ಹೃತ್ಪೂರ್ವಕವಾಗಿ ಇಲ್ಲಿ ನೆನೆಯುತ್ತೇನೆ. ಹಾಗೆಯೇ ಈ ಕೃತಿಗಳನ್ನು ಸುಂದರವಾಗಿ ಅಚ್ಚಿಸಿಕೊಟ್ಟ ಸ್ನೇಹಾ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

೫-೧೨-೯೭ ಡಾ. ಎಚ್. ಜೆ. ಲಕ್ಕಪ್ಪಗೌಡ

# ಸಂಪಾದಕರ ಮಾತು

ಕನ್ನಡ ಸಾಹಿತ್ಯ ಭಾರತೀಯ ಭಾಷೆಗಳಲ್ಲಿ ಪ್ರಾಚೀನವಾದದ್ದು, ಪ್ರೌಢವಾದದ್ದು. ಒಂದೂವರೆ ಸಾವಿರ ವರ್ಷಗಳ ಅಖಂಡತೆ ಹಾಗೂ ಸಾತತ್ಯ ಇರುವ ಈ ಶಿಷ್ಟಪದ ಕನ್ನಡ ಸಾಹಿತ್ಯದಲ್ಲಿ ಸೇರಿಕೊಂಡಿರುವ ಜಾನಪದ ಅಂಶಗಳು ಗಮನಾರ್ಹ ಪ್ರಮಾಣದಲ್ಲಿವೆ. ಶಿಷ್ಟಪದ ಸಾಹಿತ್ಯಾಂತರ್ಗತವಾಗಿರುವ ಜಾನಪದೀಯ ಸತ್ವ-ಸ್ವರೂಪವನ್ನು ಪೃಥಕ್ಕರಿಸಿ ತೋರಿಸುವ ದಿಕ್ಕಿನ ಕೆಲಸ, ಅಲ್ಲೊಂದು ಇಲ್ಲೊಂದು ಪ್ರಾಸಂಗಿಕ ಬಿಡಿ ಬರೆಹದ ಹೊರತು, ವ್ಯವಸ್ಥಿತವಾಗಿಯೂ ವ್ಯಾಪಕವಾಗಿಯೂ ನಡೆದಿರಲಿಲ್ಲ. ಅಂಥ ಅಧ್ಯಯನದ ಅಗತ್ಯವಿತ್ತು. ಬಹುಕಾಲದ ಈ ಕೊರತೆಯನ್ನು ಮನಗಂಡು ಕಾರ್ಯೋನ್ಮುಖರಾದ ಆದ್ಯ ಪುರುಷರು ಕರ್ನಾಟಕ ಜಾನಪದ-ಯಕ್ಷಗಾನ ಅಕಾಡೆಮಿಯ ಈಗಿನ ಹಾಲಿ ಅಧ್ಯಕ್ಷರಾದ ಡಾ.ಎಚ್.ಜೆ. ಲಕ್ಕಪ್ಪಗೌಡರು. ಅವರಿಗೆ ಏಕಕಾಲದಲ್ಲಿ ಅತ್ತ ಜಾನಪದ ಪರಂಪರೆಯ ಹಾಗೂ ಇತ್ತ ಕನ್ನಡ ಸಾಹಿತ್ಯ ಪರಂಪರೆಯ ತಲಸ್ಪರ್ಶಿ ಪಾಂಡಿತ್ಯ ಭಾಗ್ಯವಿದ್ದುದರಿಂದ ಈ ಹೊಸ ಯೋಜನೆಯ ಅಗತ್ಯ ಮತ್ತು ಮಹತ್ವವನ್ನು ಅನಾಯಾಸವಾಗಿ ಅವಲೀಲೆಯಿಂದ ಗ್ರಹಿಸಿದರು. ಶಿಷ್ಟ ಸಾಹಿತ್ಯ ಪ್ರಕಾರದ ತವನಿಧಿಯೊಳಗೆ ಕುಳಿತ ಜಾನಪದ ನಿಧಿಯನ್ನು ತನಿಯಾಗಿ ತೆಗೆದು ತೋರಿಸುವ ಕೆಲವು ಪುಸ್ತಕಗಳನ್ನು ಪ್ರಕಟಿಸಲು ಒಂದು ಪ್ರತ್ಯೇಕ ಮಾಲೆಯನ್ನು ಹಮ್ಮಿಕೊಂಡು ವಿಳಂಬವಿಲ್ಲದೆ ಕಾರ್ಯತತ್ಪರರಾದರು. 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ಈ ಪುಸ್ತಕ ಮಾಲೆ ಅವರ ಕನಸು.

ಈ ಯೋಜನೆಯ ಸಂಪಾದಕನಾಗಿ ಕಾರ್ಯ ನಿರ್ವಹಿಸುವ ಹೊಣೆಗಾರಿಕೆಯನ್ನು ಡಾ.ಎಚ್.ಜೆ. ಲಕ್ಕಪ್ಪಗೌಡರು ನನಗೆ ವಹಿಸಿದಾಗ ನಾನು ಒಪ್ಪಿಕೊಳ್ಳಲು ಎರಡು ಪ್ರಬಲ ಕಾರಣಗಳಿದ್ದುವು: ೧. ಈ ಕೆಲಸದ ಅಗತ್ಯ

ಎಷ್ಟು ಜರೂರಿನದೆಂಬ ಅರಿವು ನನಗೂ ಇದ್ದುದು. ೨. ಡಾ.ಎಚ್.ಜೆ. ಲಕ್ಕಪ್ಪಗೌಡರು ಹಮ್ಮಿಕೊಂಡಿರುವ ಈ ಸಕಾಲಿಕವಾದ, ಯೋಗ್ಯವಾದ ಯೋಜನೆಯ ಯಶಸ್ಸಿಗೆ ಸಹಕರಿಸುವುದು ನನ್ನ ಕರ್ತವ್ಯವೆಂಬ ಭಾವನೆ. ಈ ಅವಕಾಶಕ್ಕಾಗಿ ಅಕಾಡೆಮಿಯ ಅಧ್ಯಕ್ಷರಿಗೂ ಇತರ ಕಾರ್ಯ ಸಮಿತಿ ಸದಸ್ಯರಿಗೂ ನಾನು ಕೃತಜ್ಞನಾಗಿದ್ದೇನೆ.

'ಶಿಷ್ಟಸಾಹಿತ್ಯ ಮತ್ತು ಜಾನಪದ ಸಂವೇದನೆ' ಮಾಲೆಯಲ್ಲಿ ಪ್ರಕಟಿಸಲು ನಮ್ಮಕೋರಿಕೆಯ ಮೇರೆಗೆ ಡಾ. ಸರಸ್ವತಿ ವಿಜಯಕುಮಾರ್ ಅವರು **' ರತ್ನತ್ರಯರು ಮತ್ತು ಜಾನಪದ'** ಎಂಬ ಗ್ರಂಥವನ್ನು ಬರೆದುಕೊಟ್ಟಿರುತ್ತಾರೆ. ಅವರಿಗೆ ಅಕಾಡೆಮಿ ಹಾಗೂ ನನ್ನ ವತಿಯಿಂದ ಕೃತಜ್ಞತೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್ ಅವರ ಸಹಾಯವನ್ನು ಸ್ಮರಿಸುತ್ತೇನೆ.

ಈ ಮಾಲೆಯಲ್ಲಿ ಸುಮಾರು ನೂರು ಪುಸ್ತಕಗಳನ್ನು ಹೊರತರುವದು ಮೊದಲ ಯೋಜನೆಯಾಗಿತ್ತು. ಈಗ ಅದರ ಪ್ರಾರಂಭದ ಹಂತವೆಂದು ಪ್ರಾತಿನಿಧಿಕವಾದ ಕನ್ನಡ ಕವಿ-ಕಾವ್ಯಗಳನ್ನು ಆರಿಸಿಕೊಂಡು ಹನ್ನೆರಡು ಪುಸ್ತಕಗಳ ಒಂದು ಕಂತು ಬಿಡುಗಡೆ ಆಗುತ್ತಿದೆ. ಹಣದ ಅನುಕೂಲ ಮತ್ತು ಲೇಖಕರ ಸಕಾಲಿಕ ಬೆಂಬಲದಿಂದ ಯಥಾವಕಾಶ ಉಳಿದ ಪುಸ್ತಕಗಳನ್ನು ಪ್ರಕಟಿಸುವ ಉದ್ದೇಶವಿದೆ.

**ಹಂಪ. ನಾಗರಾಜಯ್ಯ**

# ರತ್ನತ್ರಯರು ಮತ್ತು ಜಾನಪದ

**ಪೀಠಿಕೆ :**

ಮಾನವನ ಅಂತರಂಗ-ಬಹಿರಂಗ ಪ್ರಕ್ರಿಯೆಗಳು ಮೂಲಭೂತವಾಗಿ ಒಂದೇ ಆದರೂ ಅವನು ಜೀವಿಸುವ ಜನಸಮುದಾಯದ ಉಡುಗೆ-ತೊಡುಗೆಗಳು, ಊಟ-ಉಪಚಾರಗಳು, ಆಚಾರ-ವಿಚಾರಗಳು, ಮಾತು-ಕತೆಗಳು, ಚಿಂತನ-ಮಂಥನಾದಿಗಳ ವಿಶಿಷ್ಟ ಹಿನ್ನೆಲೆಯೂ ಸಹ ಅವನಲ್ಲಿ ಅಚ್ಚೊತ್ತಿರುತ್ತದೆ. ಅಕ್ಷರಸ್ಥ-ಅನಕ್ಷರಸ್ಥ, ನಗರವಾಸಿ-ಗ್ರಾಮವಾಸಿ ಎನ್ನದೆ ಪರಂಪರಾನುಗತವಾಗಿ ಬಂದ ಆಯಾ ಜನಾಂಗದ ಸಂಸ್ಕೃತಿಯ ಅಂತರ್ವಾಣಿ ಒಂದೇ ಆದರೂ ಅವುಗಳಲ್ಲಿ ವೈಸಾದೃಶ್ಯಗಳೂ ಕಂಡುಬರುತ್ತವೆ. ಅಲ್ಲದೆ ಆ ಸಂಪ್ರದಾಯ-ಸಂಸ್ಕೃತಿಗಳು ಉಳಿದುಬರುವ ರೀತಿಯೂ ಸಹ ಬೇರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಮುಖವಾಗಿ ಎರಡು ಸಂಸ್ಕೃತಿಗಳು ಕಂಡುಬರುತ್ತವೆ- ಶಿಷ್ಟ ಮತ್ತು ಜಾನಪದ.

**ಜಾನಪದ** (ಸಂಕ್ಷಿಪ್ತ ಪರಿಚಯ) :

'ಜಾನಪದ'ವನ್ನು ಕುರಿತು ಈಗಾಗಲೇ ದೇಶ-ವಿದೇಶದ ವಿದ್ವಾಂಸರು ಅಧ್ಯಯನವನ್ನು ನಡೆಸಿದ್ದಾರೆ. ಅದರ ಫಲಸ್ವರೂಪವಾಗಿ ಮೂಡಿಬಂದಿರುವ ಮುಖ್ಯ ಸೂತ್ರಾಂಶಗಳೆಂದರೆ:

ಜಾನಪದವು-

* ನಾಗರಿಕ ಹಾಗೂ ಶಿಷ್ಟ ಸಂಸ್ಕೃತಿಯಿಂದ ದೂರ ಸರಿದಿರುತ್ತದೆ.
* ಪರಂಪರಾನುಗತವಾಗಿರುತ್ತದೆ.
* ಕಂಠಸ್ಥ ಸಂಪ್ರದಾಯದಿಂದ ಬಂದುದಾಗಿರುತ್ತದೆ.

* ವೈಯಕ್ತಿಕ ಆಚರಣೆ-ಅನಿಸಿಕೆಗಳನ್ನು ಪ್ರತಿನಿಧಿಸದೆ ಒಟ್ಟು ಜನಾಂಗದ ಆಚರಣೆ-ಅನಿಸಿಕೆಗಳನ್ನು ಪ್ರತಿನಿಧಿಸುತ್ತದೆ.

* ಸಮಷ್ಟಿಗೆ ಸಲ್ಲುವ ಸಾಮೂಹಿಕ ಸೃಷ್ಟಿಯನ್ನು ಹೊಂದಿರುತ್ತದೆ.

ಈ ಮೇಲಿನ ಕೆಲವು ಅಂಶಗಳನ್ನು ಸೂತ್ರೀಕರಿಸುವ ಕೆಲವು ಜಾನಪದ ಲಕ್ಷಣಸೂತ್ರಗಳು ಹೀಗಿವೆ:

"ಸಾಮೂಹಿಕ ಸೃಷ್ಟಿಯಾಗಿ, ಕಂಠಪಾಠ ಸಂಪ್ರದಾಯದಲ್ಲಿ ತಲೆಮಾರಿನಿಂದ ತಲೆಮಾರಿಗೆ ಕೊಡುಗೆಯಾಗಿ ಬರುವ ಕಥೆ, ಗೀತೆ, ಒಗಟು, ಗಾದೆ, ಐತಿಹ್ಯ, ಪುರಾಣ, ನಂಬಿಕೆ, ಮೂಢನಂಬಿಕೆ, ಆಚಾರ, ಹಬ್ಬ, ಮಂತ್ರವಿದ್ಯೆ, ಕುಶಲಕೈಗಾರಿಕೆ, ವೈದ್ಯ ಇತ್ಯಾದಿಗಳು ಜಾನಪದ ಎನಿಸಿಕೊಳ್ಳುವುವು."[೧]

"ನಾಗರಿಕ ಹಾಗೂ ಶಿಷ್ಟ ಸಂಸ್ಕೃತಿಗಳಿಂದ ದೂರಸರಿದ ಪರಂಪರಾನುಗತವಾದ ಬೆಳವಣಿಗೆಯನ್ನು ಪಡೆದ ಜನಸಾಮಾನ್ಯರ ವಿಶಿಷ್ಟ ಸಂಸ್ಕೃತಿಯೇ ಜಾನಪದ."[೨]

ಒಟ್ಟು ಜನಾಂಗವನ್ನು ಪ್ರತಿನಿಧಿಸಿ ಜನಸಾಮಾನ್ಯರ ಸಂಸ್ಕೃತಿಯನ್ನು ಮೂರ್ತೀಕರಿಸುವ ಜನಸಾಮಾನ್ಯ ಸಮಷ್ಟಿಯಿಂದ ಮೂಡಿಬಂದ ಜಾನಪದವು ಸಹಜವಾಗಿಯೇ ಸಾಮಾಜಿಕ, ಧಾರ್ಮಿಕ, ನೈತಿಕಾದಿ ಮೌಲ್ಯಗಳನ್ನು ಹೊಂದಿರುತ್ತದೆ. ಕೇಳುವುದು, ನೆನಪಿಡುವುದು, ನೋಡುವುದು, ಅನುಕರಣೆ ಮಾಡುವುದು ಈ ಪ್ರಕ್ರಿಯೆಗಳಿಂದ ಜನಪದ ಸಂಸ್ಕೃತಿಯು ಜನರಿಂದ ಜನರಿಗೆ ಬಳುವಳಿಯಾಗಿ ಬರುತ್ತದೆ.

ಜಾನಪದವನ್ನು ಸಾಹಿತ್ಯಕ, ಭಾಷಿಕ, ವೈಜ್ಞಾನಿಕ ಮತ್ತು ಕ್ರಿಯಾತ್ಮಕ ಎಂಬ ವರ್ಗಗಳಲ್ಲಿ ರಾಳ್ಫ್ ಸ್ಟೀಲ್ ಬಾಗ್ಸ್ ಎಂಬುವನು ವರ್ಗೀಕರಿಸಿದ್ದಾನೆ.[೩] ಸಾಹಿತ್ಯಕ ವಿಂಗಡಣೆಯಲ್ಲಿ ಪುರಾಣ, ಐತಿಹ್ಯ, ಕಥೆ, ಹಾಡುಗಳನ್ನೂ ಭಾಷಿಕ ವಿಂಗಡಣೆಯಲ್ಲಿ ಮಾತು, ಸನ್ನೆ, ಗಾದೆ, ಒಗಟುಗಳನ್ನೂ ವೈಜ್ಞಾನಿಕ ವಿಂಗಡಣೆಯಲ್ಲಿ ಮದ್ದು, ಭವಿಷ್ಯ, ಮಾಂತ್ರಿಕತೆ, ನಂಬಿಕೆ ಮೊದಲಾದವುಗಳನ್ನೂ ಕ್ರಿಯಾತ್ಮಕ ವಿಂಗಡಣೆಯಲ್ಲಿ ಸಂಗೀತ, ನೃತ್ಯ, ಆಟ, ಹಬ್ಬ, ಪದ್ಧತಿ, ಕಲೆ, ಅಡುಗೆ ಮೊದಲಾದವುಗಳು ಸಮಾವೇಶಗೊಳ್ಳುತ್ತವೆ. ಈತನು ಹೇಳಿರುವ ಭಾಷಿಕ ವಿಂಗಡಣೆಯ ವಿಷಯಗಳನ್ನು

ಸಾಹಿತ್ಯಕ ವಿಂಗಡಣೆಯ ವಿಷಯಗಳೊಂದಿಗೇ ಸೇರಿಸಬಹುದಾಗಿದೆ. ಒಟ್ಟಾರೆ ಜಾನಪದದಲ್ಲಿ ಸಾಹಿತ್ಯ ಹಾಗೂ ಸಾಹಿತ್ಯೇತರ ವಿಷಯಗಳು ಕಂಡುಬರುತ್ತವೆ. ಸಾಹಿತ್ಯೇತರ ವಿಂಗಡಣೆಯಲ್ಲಿ ಕ್ರಿಯಾತ್ಮಕ, ವೈಜ್ಞಾನಿಕ ವಿಷಯಗಳನ್ನೂ ಆರ್ಚರ್ ಟೈಲರ್‌ನ ವಿಂಗಡಣೆಯಲ್ಲಿ ಬರುವ ಭೌತಿಕ ಜಾನಪದದ ವಿಷಯಗಳಾದ ಹಳ್ಳಿ-ಮನೆಗಳ ರಚನಾವಿನ್ಯಾಸ, ಉಡುಗೆ-ತೊಡುಗೆಗಳನ್ನೂ ಸೇರಿಸಿ ಹೇಳಬಹುದಾಗಿದೆ.

ಜನಪದ ಕಥೆಗಳ ಪ್ರಕಾರದಲ್ಲಿ ಪುರಾಣಗಳು (Myths), ಐತಿಹ್ಯಗಳು (Legends) ಮತ್ತು ಮನೋರಂಜಕ ಕಥೆಗಳನ್ನು ಸೇರಿಸಬಹುದಾಗಿದೆ.

ಗೀತೆಗಳಲ್ಲಿ ಲಾವಣಿಗಳು, ಕಥನಗೀತೆಗಳು, ವ್ಯವಸಾಯ, ಮದುವೆ-ಮುಂಜಿ, ಆರತಿ-ಹಸೆ, ಹಬ್ಬ-ಹರಿದಿನ ಈ ಮೊದಲಾದವುಗಳಿಗೆ ಸಂಬಂಧಪಟ್ಟ ಗೀತೆಗಳು ಕಂಡುಬರುತ್ತವೆ.

ಗಾದೆಗಳು ಭಾವಾರ್ಥದೀಪ್ತಿಯನ್ನು ಬೆಳಗುವ ಕಿರಿದಾದ ಸಾಹಿತ್ಯಕ ಘಟಕಗಳಾಗಿವೆ. ಮಾತಿನ ಮಧ್ಯೆ ಸಾಂದರ್ಭಿಕವಾಗಿ ಬಳಕೆಯಾಗುವ ಇವು ನೀತಿ ಪ್ರಧಾನವಾಗಿರುತ್ತವೆಯಲ್ಲದೆ ಭಾಷೆಯ ಸೌಂದರ್ಯವನ್ನೂ ಹೆಚ್ಚಿಸುತ್ತವೆ. ಸಮಾಜದ ಒಳ್ಳೆಯ ಅಂಶಗಳ ಕಡೆಗೆ ಶ್ಲಾಘನೆ, ಕೆಟ್ಟ ಅಂಶಗಳ ಕಡೆಗೆ ಕಟುಟೀಕೆಯನ್ನು ನೀಡುವ ಗಾದೆಗಳು ಮಾರ್ಮಿಕವಾಗಿರುತ್ತವೆ. ನ್ಯಾಯ-ಅನ್ಯಾಯ, ಧರ್ಮ- ಅಧರ್ಮ, ವಂಚನೆ-ಕುಟಿಲತೆ, ಮೇಲು-ಕೀಳರಿಮೆ - ಈ ಮೊದಲಾದವುಗಳ ಬಗೆಗೆ ತನ್ನ ಬಿಚ್ಚುಮನಸ್ಸಿನ ಅನ್ನಿಸಿಕೆಗಳನ್ನು ನಿರ್ಭಿಡೆಯಿಂದ ಸಾರುತ್ತವೆ. ಜೀವನದ ಅನುಭವದ ಸಾರದಿಂದ ಹರಳುಗೊಂಡುಬಂದ ಗಾದೆಗಳು ಬೀರುವ ಪ್ರಭಾವ ಅಪಾರ.

ಮುಂದಿನ ಅಧ್ಯಯನದ ಚೌಕಟ್ಟಿನಲ್ಲಿ ಕವಿ ರತ್ನತ್ರಯರ ಕೃತಿಗಳಲ್ಲಿ ಕಂಡುಬರುವ ಜಾನಪದೀಯ ಅಂಶಗಳಾದ ಗಾದೆಗಳನ್ನೇ ಅಲ್ಲದೆ ಜನಪದಕಥೆ, ಪುರಾಣಕಥನ, ಐತಿಹ್ಯ, ನಂಬಿಕೆ, ಆಚಾರ- ವಿಚಾರ ಈ ಮೊದಲಾದ ವಿಷಯಗಳನ್ನು ಗುರುತಿಸಿ ಹೇಳಿರುವುದರಿಂದ ಆ ವಿಷಯಗಳ ಬಗೆಗೂ ಕೆಲವು ಮುಖ್ಯಾಂಶಗಳನ್ನು ಗಮನಿಸಲಾಗಿದೆ.

ಜನಪದ ಕಥೆಗಳ ಕಥಾವಸ್ತು ಹಾಗೂ ಅವುಗಳಲ್ಲಿ ಅಡಕವಾಗಿ ಬರುವ ಕೆಲವು ಅಂಶಗಳು ಸಾಂಪ್ರದಾಯಕವಾಗಿರುತ್ತವೆ; ಪುನರುಕ್ತಿಗೊಳ್ಳುತ್ತವೆ. ಇವು

ಸರಳವೂ ಸುಖಾಂತವೂ ಆಗಿರುತ್ತವೆ. ಉಪಕಥೆಗಳು ಇರುವುದಿಲ್ಲ. ಪಾತ್ರಗಳ ಹೆಸರು ಮುಖ್ಯವಲ್ಲ; ಅವು ಕೇವಲ ಮಾದರಿಗಳು. ಒಂದು ಅಥವಾ ಅನೇಕ ಆಶಯಗಳನ್ನು ಹೊಂದಿರುತ್ತವೆ. ಇಲ್ಲಿ ಅದ್ಭುತ ರಮ್ಯ ಕಲ್ಪನಾ ಪ್ರಪಂಚವು ಮೇಲುಗೈಯಾಗಿರುತ್ತದೆ. ಪ್ರಾಣಿಗಳು, ದೇವ - ರಾಕ್ಷಸ - ದೆವ್ವಗಳ, ಬೇತಾಳ -ಕಿನ್ನರರು, ಯಕ್ಷಿ - ಮಾಟಗಾರ್ತಿಯರು, ಸಾಧು ಮಹಾನರು -ಈ ಮೊದಲಾದವರು ಇಲ್ಲಿ ವಿಶೇಷವಾಗಿ ಪಾತ್ರವಹಿಸುತ್ತಾರೆ. ಜನಪದ ಕತೆಗಳಲ್ಲಿ ಅರ್ಧಚಾರಿತ್ರಿಕ, ಪೌರಾಣಿಕ, ಸಾಮಾಜಿಕವಾದ ಕತೆಗಳೂ ಇವೆ. ಇವು ಮನೋರಂಜಕವಾದರೂ ಕೆಲವೆಡೆ ಬೋಧಪ್ರದವಾಗಿಯೂ ಕಂಡುಬರುತ್ತವೆ. ಅಲ್ಲದೆ ಇವು ಮಾನವ ಪ್ರಪಂಚದ ಹತ್ತು ಹಲವು ವಿಷಯಗಳಿಗೆ ಕನ್ನಡಿ ಹಿಡಿಯುತ್ತವೆ.

ವಾಸ್ತವ ಪ್ರಪಂಚಕ್ಕಿಂತ ಭಿನ್ನವಾದ ವಿಶೇಷ ನಂಬಿಕೆಗಳು ಆಶಯವೆನಿಸುತ್ತವೆ. ಇವು ಜನಪದ ಸಾಹಿತ್ಯದ ಪರಂಪರಾನುಗತವಾದ ಕನಿಷ್ಠ ಘಟಕಗಳಾಗಿವೆ. "A motif is the smallest element in a tale having a power to persist in tradition" ಎಂದು ಸ್ಮಿತ್ ಥಾಮ್ಸನ್ನರು ಒಂದೆಡೆ ಹೇಳಿದ್ದಾರೆ.[೪] ಕೆಲವೆಡೆ ತೀರಾ ಸರಳವಾದ ನಂಬಿಕೆಯೂ ಹಲವು ಕತೆಗಳಲ್ಲಿ ಎಡೆಮಾಡಿಕೊಂಡು ಆಶಯಗಳಾಗಿಬಿಡಬಹುದು. ಈ ಆಶಯಗಳು ಮಾನವನ ಹುಟ್ಟು-ಸಾವು, ಪುನರ್ಜನ್ಮ, ನಂಬಿಕೆ, ಆಚರಣೆ ಮೊದಲಾದವುಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ.

ಜನಪದ ಕಥೆಗಳಿಗಿಂತ ಐತಿಹ್ಯ- ಪುರಾಣಗಳು ಗಂಭೀರವಾದವುಗಳು. ಅವು ವಾಸ್ತವ ಘಟನೆಗಳಿಗೆ ಕನ್ನಡಿ ಹಿಡಿಯುತ್ತವೆ ಎಂದು ಜನಸಾಮಾನ್ಯರು ನಂಬುತ್ತಾರೆ.

ಯಾವುದೇ ಊರು ಅಥವಾ ಸ್ಥಳಗಳ ಹಿನ್ನೆಲೆಯಲ್ಲಿ ಪ್ರಚಲಿತವಿರುವ ಕಥೆಗಳೇ ಐತಿಹ್ಯಗಳಾಗುತ್ತವೆ. ಮನರಂಜನೆಗಾಗಿ ಇದನ್ನು ಹೇಳುವುದಿಲ್ಲ. ಈ ಹಿನ್ನೆಲೆಯಲ್ಲಿ ಬರುವ ನಿರೂಪಣೆಗಳು ವಾಸ್ತವಿಕವಾಗಿಯೂ ಇರಬಹುದು, ಕಾಲ್ಪನಿಕವಾಗಿಯೂ ಇರಬಹುದು, ಇಲ್ಲವೇ ಇವೆರಡರ ಸಮ್ಮಿಶ್ರಣದಿಂದ ಉಂಟಾಗಿರಲೂಬಹುದು.

ಮತಾಚರಣೆಯ ನಂಬಿಕೆಯೊಡನೆ ಸಂಬಂಧಹೊಂದಿರುವ ಕಥನಗಳನ್ನೆಲ್ಲ ಸಾಮಾನ್ಯವಾಗಿ ಪುರಾಣಗಳೆಂದು ಗುರುತಿಸಬಹುದು. ಅಲ್ಲಿಯ ವಾತಾವರಣ

ದೈವಿಕವಾಗಿರುತ್ತದೆ. ಪುರಾಣ (Myth) ಎಂಬ ಪದವು ಆಯಾ ಜನ ಸಮೂಹದ ಪುರಾಣ ಸಮುದಾಯವನ್ನು ಕುರಿತಂತೆಯೂ ಬಳಕೆ ಆಗುತ್ತದೆ. ಶಿಷ್ಟ ಪುರಾಣಗಳು ಕವಿಗಳಿಂದ ರೂಪಗೊಂಡರೂ ಅವುಗಳ ಮೂಲಬೇರು ಸಾಂಪ್ರದಾಯಿಕತೆಯೇ ಆಗಿದೆ.

"ಪುರಾತನ ಕಾಲದಲ್ಲಿ ನಿಜವಾಗಿಯೂ ನಡೆದಿದ್ದೆಯೆಂದು ನಂಬಲಾದ ವಿಷಯಗಳ ಮೇಲೆ ರೂಪಿತವಾದವು ಪುರಾಣಗಳು. ಇವು ಶ್ರದ್ಧೆಯ ಮೇಲೆ ಸ್ವೀಕೃತವಾದವು; ತತ್ವಗರ್ಭಿತವಾದವು. ವಿಶ್ವಶಾಸ್ತ್ರ ಮತ್ತು ಅತಿಮಾನುಷ ಪರಂಪರೆಯನ್ನು ಹೇಳುವಂಥವು. ಜಗತ್ತಿನ ಹುಟ್ಟು, ಗ್ರಹ, ನಕ್ಷತ್ರ, ಸ್ವರ್ಗ, ನರಕಗಳ ಕಲ್ಪನೆ ಮೊದಲಾದವುಗಳನ್ನು ಪುರಾಣಗಳು ಕುರಿತಿವೆ."[೭] ಈ ವಿಚಾರಗಳಿಗೆ ಸಂಬಂಧಿಸಿದಂತೆ ಜೈನ ಮತ್ತು ಹಿಂದೂ ಸಂಸ್ಕೃತಿಗಳಲ್ಲಿ ವಿಭಿನ್ನ ರೀತಿಯ ಪುರಾಣಚಿಂತನೆಗಳು ಮೂಡಿಬಂದಿವೆ. ಆಯಾ ಮತಧರ್ಮದವರ ಚಿಂತನೆಗಳಿಗೆ ಅನುಗುಣವಾಗಿ ಬೌದ್ಧಿಕತೆಯ ಹಿನ್ನೆಲೆಯಲ್ಲಿ ಅವು ರೂಪಗೊಂಡು ಪರಂಪರಾನುಗತವಾಗಿ ಹರಿದುಬಂದಿವೆ.

ಪುರಾಣಗಳನ್ನು "thought fossils" ಎಂದು ಪಿ. ಥಾಮಸ್ ಎಂಬುವನು ಕರೆದಿದ್ದಾನೆ.[೮] ಇವು ಆದಿಮಾನವನು ಸೃಷ್ಟಿ-ದೈವ ಮೊದಲಾದವುಗಳ ಬಗೆಗೆ ಮಾಡಿಕೊಂಡ ದೃಷ್ಟಿ ಧೋರಣೆಗಳನ್ನು ತಿಳಿಸುತ್ತವೆ. ಶಿಷ್ಟ ರೂಪದಲ್ಲಿ ಕಂಡುಬರುವ ಪುರಾಣಗಳು ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಕಂಡುಬಂದರೂ ಕೂಡ ಅವು ಪರಂಪರಾನುಗತವಾಗಿ ಬಂದ, ಆಯಾ ಮತಧರ್ಮಗಳಲ್ಲಿ ಪ್ರಚುರವಿರುವ ಸಂಪ್ರದಾಯ ರೂಢವಾದ ಸೃಷ್ಟಿ ಮೊದಲಾದ ಅಂಶಗಳನ್ನೊಳಗೊಂಡ ಕಥೆಗಳನ್ನು, ನಿರೂಪಣೆಗಳನ್ನು ಒಳಗೊಂಡಿರುತ್ತವೆ. "Each purana, though attributed to a single author, is in reality a collection of tales told by different Rishis of different times"[೯] ಎಂಬ ಮಾತುಗಳನ್ನು ಈ ಸಂಬಂಧವಾಗಿ ಸ್ಮರಿಸಬಹುದಾಗಿದೆ.

ಪುರಾಣಗಳು ಮತೀಯ ಧರ್ಮಕ್ಕೆ ಸಂಬಂಧಪಟ್ಟವುಗಳಾಗಿದ್ದು ಅವರವರ ನಂಬಿಕೆ, ಶ್ರದ್ಧೆ, ಆದರ್ಶಗಳನ್ನು ರೂಪಿಸುವಂತಹವುಗಳಾಗಿವೆ. ಅವು ಈಗಾಗಲೇ ಪ್ರಚುರವಿರುವ ನಂಬಿಕೆಗಳನ್ನು ಬೆಂಬಲಿಸಿ ಅವುಗಳನ್ನು ಒಂದು ವ್ಯವಸ್ಥಿತರೂಪದಲ್ಲಿ

ಹಿಡಿದಿಡುತ್ತವೆ. "ಪುರಾಣಗಳು ಸೃಷ್ಟಿಯ ಆದಿಯಿಂದ ಮನುಕುಲದ ಚರಿತ್ರೆಯನ್ನು ಹೇಳುವ ಉದ್ದೇಶವನ್ನು ಹೊಂದಿರುತ್ತವೆ. ಪುರಾಣವು ಈ ಅಖಂಡ ದೃಷ್ಟಿಯನ್ನು ಹೊಂದಿರುವುದರಿಂದ ಅದರಲ್ಲಿ ಮನುಷ್ಯನ ಲೌಕಿಕ- ಆಧ್ಯಾತ್ಮಿಕ ಸಿದ್ಧಿಗಳೆಲ್ಲವನ್ನೂ ತರಲು ಅವಕಾಶವುಂಟು. ಅರ್ಥಾತ್ ಮನುಷ್ಯನ ಸಂಸ್ಕೃತಿಯ ಎಲ್ಲ ಮುಖಗಳನ್ನೂ ಅವುಗಳ ಸಕಲ ವಿವರಗಳೊಂದಿಗೆ ಅಲ್ಲಿ ತಂದಿರುತ್ತಾರೆ. ಶಿಲ್ಪ, ಸಂಗೀತ ಇತ್ಯಾದಿ ಲಲಿತ ಕಲೆಗಳು, ವಿಜ್ಞಾನ, ಕಾವ್ಯಮೀಮಾಂಸೆ, ಅರ್ಥಶಾಸ್ತ್ರ, ದರ್ಶನ, ನೀತಿಬೋಧೆ, ಹೀಗೆ ಎಲ್ಲವನ್ನೂ ತಂದು ಪುರಾಣವು ಇನ್ನೊಂದರ್ಥದಲ್ಲಿ ಮಾನವ ಪ್ರಪಂಚದ ಇನ್ನೊಂದು ಪ್ರತೀಕವಾಗಿಬಿಡುತ್ತದೆ."[೮]

ಧರ್ಮ ಮಾನವನ ಮೇಲೆ ಅತ್ಯಂತ ಪ್ರಭಾವಯುತವಾದ ಕೆಲಸವನ್ನು ಮಾಡುತ್ತದೆ. ಡಾ|| ಶಿವರಾಮ ಕಾರಂತರು ಒಂದೆಡೆ ಈ ವಿಷಯವನ್ನು ಪ್ರಸ್ತಾಪಿಸುತ್ತಾ ಹೀಗೆ ಹೇಳಿದ್ದಾರೆ- "ಮತಧರ್ಮಗಳಿಂದ ಪ್ರಭಾವಿತವಾದ ನಂಬುಗೆ, ಆಚರಣೆ ಮೊದಲಾದವು ಒಂದು ಜನವರ್ಗದ ಸಂಸ್ಕೃತಿಯನ್ನು ರೂಪಿಸುತ್ತದೆ, ಉಳಿದ ಪ್ರಭಾವಗಳು ಅವರ ಮೇಲೆ ಬೀಳುವುದಿಲ್ಲ ಎಂದಲ್ಲ. ಮತ ಧರ್ಮಗಳಿಂದಾಗುವ ಪ್ರಭಾವ ಅತ್ಯಧಿಕ. ಅವುಗಳಿಂದ ಬರುವ ಅನೇಕಾನೇಕ ಭಾವನೆಗಳು, ಕಲ್ಪನೆಗಳು ನಮ್ಮ ಸಾಹಿತ್ಯ ಕಲೆಗಳಲ್ಲಿ ಅವುಗಳ ಸಂಕೇತಗಳು, ಆಶಯಗಳು ಪ್ರಕಟಗೊಳ್ಳುತ್ತವೆ. ಇದಕ್ಕೆ ಸಂಪ್ರದಾಯಗಳು ಬಲವಾದ ಕಾರಣಗಳಾಗಿವೆ. ಸಂಸ್ಕೃತಿ ಎನ್ನುವುದು ಮುಂದುವರಿಯುವುದೇ ಸಂಪ್ರದಾಯದಿಂದಾಗಿ."[೯] ಹೀಗಾಗಿ ಆಯಾ ಮತಧರ್ಮದ ಹಿನ್ನೆಲೆಯಲ್ಲಿ ಮೂಡಿಬಂದ ಸಾಹಿತ್ಯದಲ್ಲಿ, ಅದು ಶಿಷ್ಟವಾಗಿರಲಿ ಅಥವಾ ಜಾನಪದವಾಗಿರಲಿ, ಅದರಲ್ಲಿ ಆ ಮತಧರ್ಮದ ವಿಶಿಷ್ಟಾಂಶವು ಕಂಡುಬರುತ್ತದೆ, ಪುರಾಣಾಂಶಗಳು ಬೆಳಕಿಗೆ ಬರುತ್ತವೆ. ಹೇಳುವ ವಿಧಾನ ಬೇರೆ ಇದ್ದರೂ ಅವುಗಳ ಮನೋಧರ್ಮ ಒಂದೇ ಆಗಿರುತ್ತದೆ.

ಜೈನ ಹಾಗೂ ಹಿಂದೂ ಪುರಾಣಗಳಲ್ಲಿ ಕೆಲವು ಮೂಲಭೂತವಾದ ವ್ಯತ್ಯಾಸಗಳು ಕಂಡುಬರುತ್ತವೆ. ಹಿಂದೂ ಪುರಾಣಗಳು ಸೃಷ್ಟಿ-ಸ್ಥಿತಿ- ಲಯಗಳ ಹಿನ್ನೆಲೆಯಲ್ಲಿ ಭಗವಂತನ ಕರ್ತೃತ್ವವನ್ನು ಸಾರುತ್ತವೆ. ಆದರೆ ಜೈನಪುರಾಣಗಳು ಭಗವಂತನು ಸೃಷ್ಟಿಕರ್ತನೆಂದಾಗಲಿ, ಸ್ಥಿತಿಲಯಗಳಿಗೆ ಅವನು ಕಾರಣಕರ್ತನೆಂದಾಗಲಿ

ಹೇಳುವುದಿಲ್ಲ. ಉತ್ಪಾದ-ವ್ಯಯ- ಧ್ರುವತ್ವವನ್ನು ಅದು ವಸ್ತುವಿನ ಸ್ವರೂಪದಲ್ಲಿಯೇ ಸಾರುತ್ತದೆ. ಈ ವಿಶ್ವ ಅನಾದಿ-ಅನಂತವಾದುದು. ಇದನ್ನು ಯಾರೂ ಸೃಷ್ಟಿಸಲಿಲ್ಲ.

ಹಿಂದೂ ಪುರಾಣಗಳು ಜೀವಿಗಳ ಸುಖ-ದುಃಖಗಳಿಗೆ ಭಗವಂತನೇ ಕಾರಣಕರ್ತನೆಂದರೆ, ಜೈನ ಪುರಾಣಗಳು ಅವರವರ ಕರ್ಮಗಳಿಗೆ ಅನುಸಾರವಾಗಿ ಜೀವಿಗಳು ಸುಖ-ದುಃಖಗಳನ್ನು ಅನುಭವಿಸಬೇಕಾಗುತ್ತದೆ; ಭಗವಂತ ಸುಖವನ್ನಾಗಲಿ, ದುಃಖವನ್ನಾಗಲಿ ನೀಡುವವನಲ್ಲ ಎಂದು ನಿರೂಪಿಸುತ್ತವೆ. ಅವನು ವೀತರಾಗಿ ವರವನ್ನಾಗಲಿ, ಶಾಪವನ್ನಾಗಲಿ ನೀಡುವವನಲ್ಲ. ಹಿಂದೂ ದೇವರಂತೆ ಜೈನರ ಭಗವಂತ ಶಸ್ತ್ರಧಾರಿ-ವಸ್ತ್ರಧಾರಿ ಅಲ್ಲ. ಹಲವಾರು ಕೈಗಳನ್ನಾಗಲಿ, ಮುಖಗಳನ್ನಾಗಲಿ ಉಳ್ಳವನಲ್ಲ. ಅರಹಂತ ಅವಸ್ಥೆಯಲ್ಲಿ ದಿಗಂಬರ ಸ್ವರೂಪಿಯಾಗಿ ಶರೀರಾವಸ್ಥೆವುಳ್ಳವನೂ ಸಿದ್ಧಾವಸ್ಥೆಯಲ್ಲಿ ಅಶರೀರಿ ಆದವನೂ, ಅವತಾರ ಪುರುಷನಲ್ಲ. ಹೀಗೆ ಕೆಲವು ಮೂಲಭೂತ ವ್ಯತ್ಯಾಸಗಳು ಅವುಗಳಲ್ಲಿ ಕಂಡುಬರುತ್ತವೆ. ಜನಪದ ಸಂಸ್ಕೃತಿಯ ಜೈನ ಪುರಾಣ ಕಥೆಗಳು-ಗೀತೆಗಳು ಶಿಷ್ಟ ಪುರಾಣಗಳಲ್ಲಿ ಕಂಡುಬರುವ ತಾತ್ವಿಕತೆಯನ್ನು ನೀಗಿಕೊಳ್ಳುತ್ತವೆ. ಸಹಜವಾಗಿಯೇ ಶಿಷ್ಟಸಾಹಿತ್ಯದ ಜಟಿಲಸ್ವರೂಪ ಅಲ್ಲಿ ಕಂಡುಬರುವುದಿಲ್ಲ.

ಕವಿರತ್ನತ್ರಯರ ಆಗಮಿಕ -ಲೌಕಿಕ ಕಾವ್ಯ ಪರಂಪರೆಯಲ್ಲಿ ಆಗಮಿಕ ಕಾವ್ಯಗಳು ಜೈನಪುರಾಣಪರಂಪರೆಯನ್ನೂ ಲೌಕಿಕ ಕಾವ್ಯಗಳು (ಪೊನ್ನನ ಲೌಕಿಕ ಕಾವ್ಯ ದೊರೆತಿಲ್ಲ) ವೈದಿಕ ಪುರಾಣ ಪರಂಪರೆಯನ್ನೂ ಅನುಸರಿಸಿವೆ.

ಜನಪದ ನಂಬಿಕೆಗಳು ಜಾನಪದದ ಒಂದು ಪ್ರಕಾರವೇ ಆಗಿದೆ. ಜನರ ಬದುಕು ಮತ್ತು ನಂಬಿಕೆಗಳಿಗೆ ಇರುವ ಸಂಬಂಧವು ಗಾಢವಾದುದು. ನಂಬಿಕೆಗಳು ದೃಢವಾದ ಮಾನಸಿಕ ಒಪ್ಪಿಗೆಯನ್ನು ಅವಲಂಬಿಸುತ್ತವೆ. ಇವು ಧಾರ್ಮಿಕ, ಸಾಂಸ್ಕೃತಿಕ ಸಂಪ್ರದಾಯದ ಹಿನ್ನೆಲೆಯಲ್ಲಿ ಬಹುತೇಕವಾಗಿ ಮೂಡಿಬಂದವು ಗಳಾಗಿರುತ್ತವೆ. ಎಲ್ಲ ಧರ್ಮಗಳೂ ನಂಬಿಕೆ ಮತ್ತು ಆಚರಣೆಗಳ ತಳಹದಿಯನ್ನು ಹೊಂದಿರುತ್ತವೆ. ನಂಬಿಕೆಯು ಕ್ರಿಯಾಶೀಲವಾದಾಗ ಆಚರಣೆಗಳಾಗುತ್ತವೆ. ಆಚರಣೆ ಧರ್ಮಕ್ಕೆ ಸಂಬಂಧಿಸಿದಂತೆ ನಡೆಯುವ ಒಂದು ಸಾಮೂಹಿಕ ಅನುಷ್ಠಾನ. ಕೆಲವು ನಂಬಿಕೆಗಳಲ್ಲಿ ವೈಜ್ಞಾನಿಕ, ಚಾರಿತ್ರಿಕಾದಿ ಹಿನ್ನೆಲೆಗಳಿದ್ದರೆ, ಇನ್ನು ಕೆಲವು ನಂಬಿಕೆಗಳಲ್ಲಿ ಇವುಗಳನ್ನು ಗುರುತಿಸಿಕೊಳ್ಳಲಾಗುವುದಿಲ್ಲ. ನಂಬಿಕೆಗಳು ಅರ್ಥಹೀನವಾದಾಗ, ವಿವೇಚನೆಯನ್ನು ಕಳೆದುಕೊಂಡಾಗ ಮೂಢನಂಬಿಕೆಗಳಾಗುತ್ತವೆ.

ಶಿಷ್ಟ-ಜನಪದ ಸಾಹಿತ್ಯ:

ಪರಂಪರಾನುಗತವಾಗಿ ಬಾಯಿಂದ ಬಾಯಿಗೆ ಬಂದ ಅಭಿವ್ಯಕ್ತಿಯು 'ಜನಪದ ಸಾಹಿತ್ಯ' ಎನಿಸಿಕೊಂಡರೆ, ವ್ಯಕ್ತಿಯೊಬ್ಬನಿಂದ ರಚಿತವಾಗಿ ಬರವಣಿಗೆಯ ಮೂಲಕ ಉಳಿಯುವ ಸಾಹಿತ್ಯವು 'ಶಿಷ್ಟ ಸಾಹಿತ್ಯ' ಎನಿಸಿಕೊಳ್ಳುತ್ತದೆ. ಇದು ಕಾಲಚಕ್ರದಲ್ಲಿ ಇತರರಿಂದ ಪರಿವರ್ತನೆಗೊಳ್ಳದೆ ಹಾಗೆಯೇ ಉಳಿಯುತ್ತದೆ. ಜನಪದ ಸೃಷ್ಟಿಯಲ್ಲಿ ಮೂಲತಃ ವ್ಯಕ್ತಿಯೊಬ್ಬನ ಕೈವಾಡವಿದ್ದರೂ ಅದರ ಬೆಳವಣಿಗೆ ಸಮಷ್ಟಿಯಾದುದು. ಈ ವ್ಯತ್ಯಾಸಗಳಿದ್ದರೂ ಇವುಗಳು ಪರಸ್ಪರ ಪ್ರಭಾವ, ಕೊಳು-ಕೊಡೆಗಳಿಗೆ ಒಳಗಾಗುವುದೂ ಅನಿವಾರ್ಯವಾಗಿದೆ.

"ಜನವಾಣಿ ಬೇರು, ಕವಿವಾಣಿ ಹೂವು" ಎಂಬ ಬಿ.ಎಂ.ಶ್ರೀಯವರ ಮಾತುಗಳನ್ನು ಜಾನಪದ ಮತ್ತು ಶಿಷ್ಟಸಾಹಿತ್ಯದ ವಿಚಾರವಾಗಿ ಹೇಳುವಾಗ ಸ್ಮರಿಸಲೇಬೇಕು. ಏಕೆಂದರೆ ಜಾನಪದದ ಬೇರುಗಳು ಜನಪದ ಸಾಹಿತ್ಯಕ್ಕಷ್ಟೇ ಸೀಮಿತವಾಗಿರದೆ ಅವುಗಳ ಸಾರವನ್ನು ಹೀರಿಕೊಂಡು ಶಿಷ್ಟ ಸಾಹಿತ್ಯದ ಹೂಬಿಡಲು ಅನುವುಮಾಡಿಕೊಟ್ಟಿದೆ. ಶಿಷ್ಟಸಾಹಿತ್ಯವು ಜಾನಪದೀಯವಾದ ಎಷ್ಟೋ ವಿಷಯಗಳನ್ನು ಹೀರಿಕೊಂಡು ವರ್ಣಮಯವಾಗಿ, ಕಲಾತ್ಮಕವಾಗಿ ಅರಳಿ ನಿಲ್ಲುತ್ತದೆ. ಶಿಷ್ಟ ಸಾಹಿತ್ಯವು ವ್ಯಷ್ಟಿಯದ್ದು. ಇದು ಏಕವ್ಯಕ್ತಿಯಿಂದ ನಿರ್ಮಿತವಾದರೂ ಅವನು ಜಾನಪದದ ಪ್ರತಿನಿಧಿಯೇ ಆಗುತ್ತಾನೆ. ಏಕಾಏಕಿ ಅವನು ತನ್ನನ್ನೇ ಪ್ರತ್ಯೇಕಿಸಿಕೊಂಡು ಹೊರಗೆ ನಿಲ್ಲಲಾರ. ಆತನ ಪ್ರತಿಭೆಗೆ ಅನುಗುಣವಾಗಿ ಕಾವ್ಯಸೌಂದರ್ಯದ ಹಿರಿಮೆ-ಗರಿಮೆಗಳು ವಿನ್ಯಾಸಗೊಂಡು ಆಯಾ ಕವಿಯ ವಿಶೇಷಾಂಶಗಳನ್ನು ಎತ್ತಿಹಿಡಿಯುತ್ತವೆಯಾದರೂ ಪರಂಪರೆಯೆಂಬುದನ್ನು ಅವನು ಬಿಡಲಾರ. ಜನಪದ ವಸ್ತುವೇ ಶಿಷ್ಟರೂಪಕ್ಕೆ ನೇರವಾಗಿ ಬರಬಹುದು ಅಥವಾ ಹೊಸವಸ್ತುವೊಂದನ್ನು ಕವಿ ಆಶ್ರಯಿಸಬಹುದು; ಇಲ್ಲೆಲ್ಲಾ ಕವಿಯ 'ಜಾನಪದೀಯ ಪ್ರಜ್ಞೆ' ಕೆಲಸ ಮಾಡಿಯೇ ಮಾಡುತ್ತದೆ. ಕೆಲವೆಡೆ ಶಿಷ್ಟಸಾಹಿತ್ಯದ ವಸ್ತು ಜನಪದ ಸಾಹಿತ್ಯಕ್ಕೆ ಅಳವಟ್ಟು ಜನಜನಿತವಾಗಬಲ್ಲುದು.

ಜನಪದ ಕಥೆಯೊಂದು ಶಿಷ್ಟ ಕಾವ್ಯರೂಪಕ್ಕೆ ಬಂದಾಗ ಅದು ವರ್ಣನಾತ್ಮಕವೂ ಕಲಾತ್ಮಕವೂ ಆಗುತ್ತದೆ. ದೃಷ್ಟಾಂತ ಅಥವಾ ಉಪಕಥೆಯಾಗಿ ಬಂದಾಗ ಆ ವರ್ಣನಾತ್ಮಕತೆ ಇರುವುದಿಲ್ಲ. ಜನಪದ ಸಾಹಿತ್ಯದ ಒಂದು ಭಾಗವಾದ

ಗಾದೆಗಳು, ಒಗಟುಗಳು ಸಮಸ್ಯಾಪೂರ್ತಿಗಳು ಶಿಷ್ಟಸಾಹಿತ್ಯದಲ್ಲಿ ಪ್ರಯೋಗವಾಗುತ್ತವೆ. ಇಲ್ಲಿ ಸಾಹಿತ್ಯೇತರ ಜಾನಪದೀಯ ವಿಷಯಗಳೂ ಶಿಷ್ಟ ಸಾಹಿತ್ಯದಲ್ಲಿ ಸಮಾವೇಶವಾಗುತ್ತವೆ. ತಿಂಡಿ, ತಿನಿಸು, ವಾದ್ಯ, ಶಕುನ, ನಂಬಿಕೆ, ಹಬ್ಬ, ಉಡುಗೆ, ಕನಸುಗಳು ಇತ್ಯಾದಿ ವಿಚಾರಗಳು ತಲೆದೋರುತ್ತವೆ.

**ಕವಿರತ್ನತ್ರಯರು (ಸಂಕ್ಷಿಪ್ತ ಇತಿವೃತ್ತ - ಕೃತಿ ಪರಿಚಯ):**

"ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂಬ ಅಗ್ಗಳಿಕೆಗೆ ಪಾತ್ರವಾಗಿರುವ ಜನಪದ ಕವಿಗಳೇ ಅಲ್ಲದೆ, ಕುರಿತು ಓದಿ ಕಾವ್ಯಮಾರ್ಗವನ್ನು ರಚಿಸಿರುವ ಶಿಷ್ಟ ಸಾಹಿತ್ಯ ಕವಿಗಳೂ ಸಹ ಕನ್ನಡ ಸಾಹಿತ್ಯ ಭಂಡಾರವನ್ನು ತುಂಬಿದ್ದಾರೆ. ಕ್ರಿ.ಶ. ಹತ್ತನೆಯ ಶತಮಾನದಲ್ಲಿ ಪಂಪ, ಪೊನ್ನ, ರನ್ನ ಕವಿಗಳು 'ಕವಿ ರತ್ನತ್ರಯ'ರೆನಿಸಿ ಕನ್ನಡ ಮಾರ್ಗಸಾಹಿತ್ಯದ ಹೆದ್ದಾರಿಯನ್ನು ರೂಪಿಸಿದರು. ಮೂವರೂ ಜೈನಕವಿಗಳು. ಧಾರ್ಮಿಕ ಕಾವ್ಯ- ಲೌಕಿಕ ಕಾವ್ಯಗಳೆರಡನ್ನೂ ಬರೆದು ಪ್ರಮುಖವಾಗಿ ಧಾರ್ಮಿಕ-ಲೌಕಿಕ ದೃಷ್ಟಿಕೋನಗಳ ಮೂಲಕ ಆ ಕಾವ್ಯಗಳ ವಸ್ತುವಿಷಯವನ್ನು ದರ್ಶಿಸಿದವರು. ಒಂದೆಡೆ ಪರಂಪರಾನುಗತವಾಗಿ ಬಂದ ಧಾರ್ಮಿಕತೆಯನ್ನೂ ಮತ್ತೊಂದೆಡೆ ಯುಗಧರ್ಮದ ದಾರ್ಶನಿಕತೆಯನ್ನೂ ಕಂಡುಕೊಂಡವರು. ಒಂದೆಡೆ ಶಾಂತತೆಯನ್ನು ಮತ್ತೊಂದೆಡೆ ವೀರತೇಜವನ್ನು ಮೆರೆದವರು. ಧಾರ್ಮಿಕ ಕಾವ್ಯಗಳನ್ನು ಬರೆದು 'ಜಿನಸಮಯ ದೀಪಕ'ರೆನಿಸಿದ ಪಂಪ, ಪೊನ್ನರ ಜೊತೆಗೆ ತನ್ನನ್ನೂ ಸೇರಿಸಿಕೊಂಡು ತಾವು ಮೂವರೂ 'ರತ್ನತ್ರಯ'ರೆಂದು ಕರೆದುಕೊಂಡಿದ್ದಾನೆ ರನ್ನ. ಜೈನಧರ್ಮದ ಸಾರಪ್ರಾಯವಾದ ವಿಷಯಗಳು ರತ್ನತ್ರಯಗಳು; ಅವುಗಳೇ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳು. ಅವುಗಳನ್ನು ತಮ್ಮ ಆಗಮಿಕ ಕಾವ್ಯದಲ್ಲಿ ಅವರು ಬೆಳಗಿರುವುದರಿಂದ ಅವರು ಕವಿರತ್ನತ್ರಯರು. ಜಿನಸೇನ - ಗುಣಭದ್ರರ ಪರಂಪರೆಯಲ್ಲಿ ಬಂದ ಆಗಮಿಕ ಕಥೆಯನ್ನು ಮೂವರೂ ಆಕರವನ್ನಾಗಿ ಹೊಂದಿದ್ದಾರೆ.

ರತ್ನತ್ರಯರಾದ ಪಂಪ, ಪೊನ್ನ, ರನ್ನರ ಇತಿವೃತ್ತ ಹಾಗೂ ಅವರ ಕೃತಿಗಳ ಬಗೆಗೆ ಈಗಾಗಲೇ ಸಾಕಷ್ಟು ಚಿಂತನ-ಮಂಥನಗಳು ನಡೆದಿವೆ. ಇತರತ್ರ ದೊರೆಯುವ ಪ್ರಸ್ತಾವಗಳಿಂದಲೂ ಕವಿರತ್ನತ್ರಯರನ್ನು ಕುರಿತ ಕೆಲವು ವಿಷಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಪಂಪ:

ಪಂಪನ ಪೂರ್ವಜರು ವೆಂಗಿಪಳು ಎಂಬ ಗ್ರಾಮಕ್ಕೆ ಸೇರಿದವರೆಂದೂ ಜೀವನೋಪಾಯಕ್ಕಾಗಿ ಅವರು ಬೋದನದಲ್ಲಿ ನೆಲೆಸಬೇಕಾಯಿತೆಂದೂ ತಿಳಿದುಬರುತ್ತದೆ. ಅಬ್ಬಣಬ್ಬೆ, ಭೀಮಪಯ್ಯರು ಪಂಪನ ತಂದೆ-ತಾಯಿಗಳು. ಪಂಪನ ತಾಯಿ ಅಣ್ಣಿಗೇಱಿಯ ಜೋಯಿಸಸಿಂಘನ ಮೊಮ್ಮಗಳೆಂದೂ ಪಂಪನ ತಂದೆ ಭೀಮಪಯ್ಯ ನಿಡುಂಗೊಡೆಯ ಅಭಿಮಾನ ಚಂದ್ರನ ಮೊಮ್ಮಗನೆಂದೂ ತಿಳಿದುಬರುತ್ತದೆ. ಪಂಪನ ತಂದೆ ಬ್ರಾಹ್ಮಣಕುಲಕ್ಕೆ ಒಪ್ಪುವ ಧರ್ಮ ಎಂದರೆ ಜೈನಧರ್ಮ ಎಂದು ನಂಬಿ ಆ ಧರ್ಮಕ್ಕೆ ಸೇರಿಕೊಂಡನು. ಪಂಪನ ತಮ್ಮ ಜಿನವಲ್ಲಭ.

ಪಂಪನು ಕವಿಯಾಗಿದ್ದಂತೆ ಕಲಿಯೂ ಆಗಿದ್ದನು. ಚಾಳುಕ್ಯವಂಶದ ಎರಡನೆಯ ಅರಿಕೇಸರಿ ಪಂಪ ಕವಿಯ ಪೋಷಕ. ಪಂಪ 'ಕವಿತಾಗುಣಾರ್ಣವ', 'ಸಂಸಾರ ಸಾರೋದಯ', 'ಸರಸ್ವತೀ ಮಣಿಹಾರ' ಮೊದಲಾದ ಬಿರುದುಗಳಿಂದ ಶೋಭಿತನಾದವನು. ರನ್ನನು ಈತನನ್ನು 'ಸುಭಗ' ಕವಿಯೆಂದೂ ನಾಗಚಂದ್ರನು 'ಸುಕವಿ' ಎಂದೂ ಮಧುರನು 'ಆದಿಕವಿ' ಎಂದೂ ಹೊಗಳಿದ್ದಾರೆ. ಸಾಹಿತ್ಯಜ್ಞರು ಆದಿಕವಿ ಪಂಪನನ್ನು 'ನಾಡೋಜ'ನೆಂದೂ 'ಮಹಾಕವಿ' ಎಂದೂ ಕರೆದು ಗೌರವಿಸಿದ್ದಾರೆ.

ಪಂಪನಿಗೆ 'ಬಾಳೆಯ ಸುಳಿಯಂತೆ' ನಸುಗಪ್ಪಾದ ಮೈಬಣ್ಣ, ಮೃದುವಾದ ಗುಂಗುರು ಕೂದಲು, ತಾವರೆಯಂತೆ ದುಂಡುಮುಖ, ಎತ್ತರವೂ ಕುಳ್ಳೂ ಅಲ್ಲದ ಮಧ್ಯಮತರದ ಆಕೃತಿ, ಹಿತಮಿತವಾದ ಮೃದು ವಚನ, ದುಂದುಭಿಯಂತೆ ಗಂಭೀರ ಧ್ವನಿ, ಒಟ್ಟಾರೆ ಹೇಳುವಾದರೆ ಈತನದು ಲಲಿತ ಮಧುರ ಸುಂದರರೂಪ.

ಪಂಪನ ಕೃತಿಗಳು ಎರಡು- 'ಆದಿಪುರಾಣಂ' ಮತ್ತು 'ವಿಕ್ರಮಾರ್ಜುನ ವಿಜಯಂ' ಅಥವಾ 'ಪಂಪ ಭಾರತಂ'. ಆದಿಪುರಾಣವನ್ನು ಕ್ರಿ.ಶ. ೯೪೧ರಲ್ಲೂ ವಿಕ್ರಮಾರ್ಜುನವಿಜಯವನ್ನು ಕ್ರಿ.ಶ. ೯೪೨ರಲ್ಲೂ ಬರೆದಿದ್ದಾನೆ. ಪಂಪಭಾರತದಲ್ಲಿ 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' (XIV-60) ಎಂಬುದಾಗಿ ಹೇಳಿಕೊಂಡಿದ್ದಾನೆ.

ಆದಿಪುರಾಣವು ಒಂದು ಚಂಪೂಕಾವ್ಯವಾಗಿದ್ದು ಅದರಲ್ಲಿ ೧೬ ಆಶ್ವಾಸಗಳಿವೆ. ವೃಷಭನಾಥನೇ ಇಲ್ಲಿಯ ನಾಯಕ. ಆತನ ಕಥೆಯ ಜೊತೆಗೆ ಆತನ ಮಕ್ಕಳಾದ ಭರತ-ಬಾಹುಬಲಿಗಳ ಕಥೆಯೂ ಇದರಲ್ಲಿ ಬರುತ್ತದೆ. ವೃಷಭನ ಭವಾವಳಿಗಳಾದ ಜಯವರ್ಮ, ಮಹಾಬಲ, ಲಲಿತಾಂಗ, ವಜ್ರಜಂಘ, ಆರ್ಯ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ ಮತ್ತು ಅಹಮಿಂದ್ರರ ಕಥೆಗಳೂ ಆತನ ವರ್ತಮಾನ ಕಥೆಯಾದ ಪಂಚಕಲ್ಯಾಣ ರೂಪದ ವಿವರಗಳೂ ಇಲ್ಲಿ ಬರುತ್ತವೆ. ಜೊತೆಗೆ ಪ್ರಥಮ ಚಕ್ರಿಯಾದ ಭರತ, ಪ್ರಥಮ ಕಾಮದೇವನಾದ ಬಾಹುಬಲಿ, ಆದಿದಾನ ತೀರ್ಥ ಪ್ರವರ್ತಕನಾದ ಶ್ರೇಯಾಂಸ, ಪ್ರಥಮ ಗಣಧರ ವೃಷಭಸೇನ - ಈ ಮೊದಲಾದವರ ಭವಾವಳಿ ಹಾಗೂ ವರ್ತಮಾನ ವೃತ್ತಾಂತಗಳೂ ಇದರಲ್ಲಿ ನಿರೂಪಿತವಾಗಿದೆ.

ವಿಕ್ರಮಾರ್ಜುನವಿಜಯವು ಹದಿನಾಲ್ಕು ಆಶ್ವಾಸಗಳನ್ನೊಳಗೊಂಡ ಚಂಪೂಕಾವ್ಯ. 'ವ್ಯಾಸಭಾರತ' ಇದಕ್ಕೆ ಮೂಲ. 'ವ್ಯಾಸ ಮುನೀಂದ್ರರ ವಿಸ್ತಾರವಾದ ವಚನದ ಅಮೃತ ಸಮುದ್ರವನ್ನು ಈಜುವೆನು; ನಾನೇ ಕವಿವ್ಯಾಸ ಎಂಬ ಗರ್ವ ನನಗಿಲ್ಲ' (I-13) ಎಂದಿದ್ದಾನೆ. ಅರಿಕೇಸರಿಯನ್ನು ಅರ್ಜುನನೊಡನೆ ಸಮೀಕರಿಸಿ ಈ ಭಾರತದ ಕಥೆಯನ್ನು ಬರೆದಿದ್ದಾನೆ; ಇಲ್ಲಿ ಅರ್ಜುನನೇ ನಾಯಕ.

**ಪೊನ್ನ:**

ಈತನ ಕಾಲ ಸು. ಕ್ರಿ.ಶ. ೯೫೦. ಇವನಿಗೆ ಪೊನ್ನಿಗ, ಪೊನ್ನಮಯ್ಯ, ಪೊನ್ನಮಾರ್ಯ ಎಂಬ ಹೆಸರುಗಳೂ ರೂಢಿಯಲ್ಲಿ ಇದ್ದವು. ಈತ ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕೃಷ್ಣನ (ಕ್ರಿ.ಶ. ೯೩೯-೯೬೭) ಆಸ್ಥಾನ ಕವಿಯಾಗಿದ್ದನು. 'ಕವಿಚಕ್ರವರ್ತಿ' ಎಂಬ ಬಿರುದಿಗೆ ಪಾತ್ರನಾದವನು. ಇವನು ಹುಟ್ಟಿ ಬೆಳೆದುದು ವೆಂಗಿ ವಿಷಯವೆಂದು ತೋರುತ್ತದೆ. ತಾನು ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಮಿಗಿಲಾದ ಪಾಂಡಿತ್ಯವನ್ನು ಪಡೆದು ಉಭಯ ಕವಿತಾ ವಿಶಾರದನೆನಿಸಿದವನೆಂದು ಹೇಳಿಕೊಂಡಿದ್ದಾನೆ. ಈತನಿಗೆ ತನ್ನ ಧರ್ಮ ಹಾಗೂ ಕವಿತಾ ಸಾಮರ್ಥ್ಯಗಳ ಬಗೆಗೆ ಅತ್ಯಂತ ಅಭಿಮಾನ.

ಪೊನ್ನನ 'ಶಾಂತಿಪುರಾಣ' ಒಂದು ಧಾರ್ಮಿಕ ಕೃತಿ. ಈತನ 'ಭುವನೈಕ ರಾಮಾಭ್ಯುದಯ' ದೊರೆತಿಲ್ಲ. ಆದರೆ ಇದರ ಹದಿನಾಲ್ಕು ಆಶ್ವಾಸಗಳಿಗೆ

ಹದಿನಾಲ್ಕು ಲೋಕವೇ ಬೆಲೆಯೆಂದು ಕವಿ ತನ್ನ ಶಾಂತಿಪುರಾಣದಲ್ಲಿ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ಜಿನಾಗಮವನ್ನು ಬೆಳಗುವುದಕ್ಕಾಗಿ ಶಾಂತಿಪುರಾಣವನ್ನು ಬರೆದು ಅನಂತರ ಪಂಪನಂತೆ ತನ್ನ ಆಶ್ರಯದಾತನನ್ನು ಕೀರ್ತಿಸುವುದಕ್ಕಾಗಿ 'ಭುವನೈಕರಾಮ'ನೆಂದು ಬಿರುದಿದ್ದ ರಾಷ್ಟ್ರಕೂಟರ ಮೂರನೆಯ ಕೃಷ್ಣನನ್ನು ರಾಮನಿಗೆ ಸಮನ್ವಯಗೊಳಿಸಿ ರಾಮಕಥೆಯನ್ನು ಬರೆದಿರಬೇಕೆಂದು ಊಹಿಸಬಹುದಾಗಿದೆ.

'ಜಿನಾಕ್ಷರ ಮಾಲೆ' ಜಿನಸ್ತುತಿಯನ್ನೊಳಗೊಂಡ ೩೯ ಕಂದಪದ್ಯಗಳ ಸ್ತೋತ್ರ ಗ್ರಂಥ. ಈತ ಗತ ಪ್ರತ್ಯಾಗತ ಎಂಬ ಗ್ರಂಥವನ್ನೂ ಒಂದು ಅಲಂಕಾರ ಶಾಸ್ತ್ರಗ್ರಂಥವನ್ನೂ ಬರೆದಿರುವಂತೆ ವಿದ್ವಾಂಸರು ಊಹಿಸಿದ್ದಾರೆ.

ಪುಂಗನೂರಿನ ನಾಗಮಯ್ಯನ ಮಕ್ಕಳಾದ ಮಲ್ಲಪಾರ್ಯ ಮತ್ತು ಪುನ್ನಮಾರ್ಯರು ತಮ್ಮ ಗುರುವಾದ ಜಿನಚಂದ್ರ ದೇವರ ಜ್ಞಾಪಕಾರ್ಥವಾಗಿ ಶಾಂತಿಪುರಾಣವನ್ನು ಬರೆಸಿದರೆಂದು ತಿಳಿದುಬರುತ್ತದೆ. ಮಲ್ಲಪಾರ್ಯನ ಮಗಳಾದ ದಾನಚಿಂತಾಮಣಿ ಅತ್ತಿಮಬ್ಬೆಯು ಈ ಕಾವ್ಯದ ಸಾವಿರ ಪ್ರತಿಗಳನ್ನು ಮಾಡಿಸಿ ಸುವರ್ಣ ಜಿನಪ್ರತಿಮೆಯೊಡನೆ ಅವುಗಳನ್ನು ದಾನ ಮಾಡಿದಳಂತೆ.

'ಶಾಂತಿಪುರಾಣ' ಹನ್ನೆರಡು ಆಶ್ವಾಸಗಳಿಂದ ಕೂಡಿದ ಚಂಪೂಕಾವ್ಯ. ಇದರಲ್ಲಿ ಹದಿನಾರನೆಯ ತೀರ್ಥಂಕರ ಶಾಂತಿನಾಥನ ಕಥೆ ಭವಾವಳಿ ಸಹಿತವಾಗಿ ವರ್ಣಿತವಾಗಿದೆ.

ಶ್ರೀಷೇಣ, ಭೋಗಭೂಮಿಜ, ಶ್ರೀದೇವ, ಅಮಿತತೇಜ, ಮಣಿಚೂಳ, ಅಪರಾಜಿತ, ಅಚ್ಯುತೇಂದ್ರ, ವಜ್ರಾಯುಧ, ಅಹಮಿಂದ್ರ, ಮೇಘರಥ, ಮಹೇಂದ್ರ - ಇವು ಶಾಂತಿನಾಥನ ಪೂರ್ವ ಭವಾವಳಿಗಳು. ಈ ಹನ್ನೊಂದು ಭವಗಳ ವರ್ಣನೆಯು ಅನುಕ್ರಮವಾಗಿ ಬಂದಿಲ್ಲ. ಆರನೇ ಭವವಾದ ಅಪರಾಜಿತನ ಭವದಿಂದ ಕಥೆ ಪ್ರಾರಂಭವಾಗುತ್ತದೆ.

ರನ್ನ:

'ಅಜಿತಪುರಾಣ ತಿಲಕಂ' ಹಾಗೂ 'ಸಾಹಸಭೀಮವಿಜಯ' (ಗದಾಯುದ್ಧ), ರನ್ನ ಕಂದ (ಅಸಮಗ್ರ) ಎಂಬ ಕಾವ್ಯಗಳ ಕರ್ತೃವಾದ ರನ್ನನ ಕಾಲ ಕ್ರಿ.ಶ.೯೯೩.

ಬಳೆಗಾರ ವೃತ್ತಿಯನ್ನವಲಂಬಿಸಿದ್ದ ಈತನ ತಂದೆ ತಾಯಿಗಳು ಜಿನವಲ್ಲಭ ಮತ್ತು ಅಬ್ಬಲಬ್ಬೆಯೆಂಬುವರು ಜೈನಮನೆತನದವರು. ಜಕ್ಕಿ ಮತ್ತು ಶಾಂತಿ ಎಂಬುವರು ರನ್ನನ ಪತ್ನಿಯರು. ತನಗೆ ಆಶ್ರಯವನ್ನು ನೀಡಿದ್ದ ಚಾಮುಂಡರಾಯ ಮತ್ತು ಅತ್ತಿಮಬ್ಬೆಯವರ ಗೌರವಾರ್ಥವಾಗಿ ಎಂಬಂತೆ ತನ್ನ ಮಗನಿಗೆ ರಾಯನೆಂದೂ ಮಗಳಿಗೆ ಅತ್ತಿಮಬ್ಬೆಯೆಂದೂ ಹೆಸರಿಟ್ಟನು.

ವಿದ್ಯಾಕಾಂಕ್ಷಿಯಾಗಿ ಈತ ಗಂಗಮಂಡಲೇಶ್ವರಕ್ಕೆ ಬಂದು ಚಾಮುಂಡರಾಯನ ಆಶ್ರಯವನ್ನು ಪಡೆದನು. ಅಜಿತಸೇನಾಚಾರ್ಯರನ್ನು ಗುರುಗಳನ್ನಾಗಿ ಪಡೆದುದು ಅಲ್ಲಿಯೇ. ರನ್ನ ಮೊದಲಿಗೆ ಸಾಮಂತರಲ್ಲಿಯೂ ಮಂಡಲೇಶ್ವರನಲ್ಲಿಯೂ (ಗಂಗರಸ ರಾಚಮಲ್ಲ ಇರಬೇಕು) ಆಶ್ರಿತನಾಗಿದ್ದು ಕೊನೆಗೆ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆಹವಮಲ್ಲ ತೈಲಪನ ಆಸ್ಥಾನಕ್ಕೆ ಬಂದು ಅಲ್ಲಿ 'ಕವಿಚಕ್ರವರ್ತಿ' ಎನಿಸಿದನು. ರನ್ನನಿಗೆ ತನ್ನ ಕವಿತಾಶಕ್ತಿಯ ಬಗೆಗೆ ಅತೀವ ಹೆಮ್ಮೆ. ತನ್ನ ಕೃತಿರತ್ನವನ್ನು ಪರೀಕ್ಷಿಸುವವರಿಗೆ ಎಂಟೆದೆ ಇರಬೇಕೆಂದು ರನ್ನ ಹೇಳಿಕೊಂಡಿದ್ದಾನೆ. ಈ ಮಾತುಗಳು ಆತ್ಮಪ್ರಶಂಸೆಯಂತೆ ಕಂಡರೂ ಆತನು ಆತ್ಮವಿಶ್ವಾಸದಿಂದ ಹೇಳಿಕೊಂಡಿರುವ ಮಾತುಗಳು ಒಣಹೆಮ್ಮೆಯವಲ್ಲ.

ರನ್ನನ ಉಪಲಬ್ಧ ಕೃತಿಗಳು ಮೂರು. ಈತ ಉಲ್ಲೇಖಿಸಿರುವ 'ಪರಶುರಾಮಚರಿತ', 'ಚಕ್ರೇಶ್ವರ ಚರಿತ'ಗಳ ಬಗೆಗೆ ಹೇಳುವುದಾದರೆ, 'ಪರಶುರಾಮ ಚರಿತ'ವು ಸಮರ ಪರಶುರಾಮ ಎಂಬ ಬಿರುದುಳ್ಳ ಚಾಮುಂಡರಾಯನೊಡನೆ ಪರಶುರಾಮನನ್ನು ಸಮೀಕರಿಸಿ ಹೇಳಿರುವ ಕಾವ್ಯವೆಂದೂ 'ಚಕ್ರೇಶ್ವರ ಚರಿತ'ವು ಚಾಲುಕ್ಯ ಚಕ್ರವರ್ತಿಯನ್ನು ಭೀಮನಿಗೆ ಸಮೀಕರಿಸಿ ಹೇಳಿರುವ 'ಗದಾಯುದ್ಧ' ಕಾವ್ಯವೇ ಆಗಿರಬೇಕೆಂಬ ಅಭಿಪ್ರಾಯಗಳಿವೆ.

'ಅಜಿತತೀರ್ಥಂಕರ ಪುರಾಣಂ' ಹನ್ನೆರಡು ಆಶ್ವಾಸಗಳಲ್ಲಿ ಹರಡಿಕೊಂಡಿರುವ ಆಗಮಿಕ ಕಾವ್ಯ. ಮೊದಲ ಮತ್ತು ಕೊನೆಯ ಆಶ್ವಾಸಗಳಲ್ಲಿ ಕವಿಯ ಸ್ವವಿಷಯ, ಕಾವ್ಯಸಮರ್ಥನೆ ಹಾಗೂ ಅತ್ತಿಮಬ್ಬೆಯ ಮಹಾನ್ ಚಿತ್ರಣವಿದೆ. ಉಳಿದ ಆಶ್ವಾಸಗಳಲ್ಲಿ ಅಜಿತನಾಥನ ಹಾಗೂ ಆತನ ಕಾಲದಲ್ಲಿದ್ದ ಎರಡನೇ ಚಕ್ರವರ್ತಿಯಾದ ಸಗರನ ಕಥೆ ನಿರೂಪಿತವಾಗಿದೆ.

'ಸಾಹಸಭೀಮವಿಜಯ' (ಗದಾಯುದ್ಧ) ಹತ್ತು ಆಶ್ವಾಸಗಳನ್ನೊಳಗೊಂಡ ಚಂಪೂಕಾವ್ಯ. ವ್ಯಾಸಭಾರತದ ಗದಾ ಸೌಪ್ತಿಕ ಪರ್ವದ ಕಥೆ ಇಲ್ಲಿ ಬರುತ್ತದೆಯಾದರೂ ಪಂಪಭಾರತದ ೧೩-೧೪ನೆಯ ಆಶ್ವಾಸಗಳಿಂದ ರನ್ನ ಪ್ರಭಾವಗೊಂಡಿರುವುದು ಸ್ಪಷ್ಟ. ಗದಾಯುದ್ಧ ಪ್ರಸಂಗದಲ್ಲಿ ಇಡೀ ಭಾರತದ ಕಥೆಯ ಸಿಂಹಾವಲೋಕನವು ಕಂಡುಬರುತ್ತದೆ.

ಪಂಪ, ಪೊನ್ನ, ರನ್ನರ ಕೃತಿಗಳಲ್ಲಿ ಮೊದಲಿಗೆ ಅವರ ಆಗಮಿಕ ಕೃತಿಗಳಾದ 'ಆದಿಪುರಾಣ', 'ಶಾಂತಿ ಪುರಾಣ' ಮತ್ತು 'ಅಜಿತಪುರಾಣ'ಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಲ್ಲಿ ಕಂಡುಬರುವ ಜಾನಪದ ಕಥಾಮಾದರಿಗಳನ್ನೂ, ಆಶಯಗಳನ್ನೂ, ಐತಿಹ್ಯಗಳನ್ನೂ ಗುರುತಿಸಿಕೊಳ್ಳಲಾಗಿದೆ. ಅನಂತರದಲ್ಲಿ ಅವರ ಲೌಕಿಕ ಕಾವ್ಯಗಳನ್ನು (ಪೊನ್ನನನ್ನುಳಿದು) ಆ ನಿಟ್ಟಿನಲ್ಲಿ ಪರಿಶೀಲಿಸಲಾಗಿದೆ. ಅಲ್ಲದೆ, ಆಗಮಿಕ - ಲೌಕಿಕ ಕಾವ್ಯಗಳೆನ್ನದೆ ಅವರ ಇಡೀ ಕಾವ್ಯಗಳನ್ನು ದೃಷ್ಟಿಯಲ್ಲಿರಿಸಿ-ಕೊಂಡು ಆಲ್ಲಿ ಕಂಡುಬರುವ ಗಾದೆ, ನಂಬಿಕೆ-ಆಚರಣೆ, ಮಾಟ-ಮದ್ದು ಮೊದಲಾದ ವಿಚಾರಗಳನ್ನು ಗಮನಿಸಲಾಗಿದೆ.

**ಜೈನ ಪುರಾಣ ಪ್ರವೇಶ - ಜನಪದ ಆಶಯ:**

ಪುರಾಣದ ಆರಂಭ ಕಥಾಪ್ರವೇಶಕ್ಕಿಂತ ಮೊದಲಿಗೆ ಪಂಚ-ಪರಮೇಷ್ಠಿಗಳ ಪ್ರಾರ್ಥನೆಯಿಂದ ಆಗುತ್ತದೆ. ಹಾಗೆಯೇ ಧರ್ಮಾನುಶಾಸನ ದೇವತೆಗಳಾದ ಯಕ್ಷ-ಯಕ್ಷಿಯರ, ವಿದ್ಯಾದೇವತೆಯಾದ ಸರಸ್ವತಿಯ ಪ್ರಾರ್ಥನಾರೂಪದ ಪದ್ಯಗಳು ಬರುತ್ತವೆ. ಈ ಹಿನ್ನೆಲೆಯಲ್ಲಿ ಜಾನಪದೀಯ ಮನೋಧರ್ಮವಿದೆ. ಇಂದಿಗೂ ಸಹ ಜೈನರಲ್ಲಿ 'ನಮೋಕಾರ ಮಂತ್ರ'ವೆಂದು ಕರೆಸಿಕೊಳ್ಳುವ ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧುಗಳಿಗೆ ನಮನವನ್ನು ಸಲ್ಲಿಸುವ ಪ್ರಾರ್ಥನಾ ಪದ್ಯಕ್ಕೆ ಆದ್ಯತೆ ಇದೆ. ಇದು ಪರಂಪರಾನುಗತವಾಗಿ ಬಂದುದಾಗಿದೆ. ಗ್ರಾಮ, ನಗರವೆನ್ನದೆ, ಶ್ವೇತಾಂಬರ-ದಿಗಂಬರ ಪರಂಪರೆ ಎನ್ನದೆ, ದೇಶ-ವಿದೇಶಗಳಲ್ಲಿಯೂ ಮಾನ್ಯತೆಯನ್ನು ಪಡೆದಿರುವ ವಂದನಾವಿಧಾನವು ಪಂಚಪರಮೇಷ್ಠಿಗಳನ್ನು ನೆನೆಯುವುದರ ಮೂಲಕವೇ ಆಗುತ್ತದೆ. ಪ್ರಸ್ತುತ ರತ್ನತ್ರಯರಲ್ಲಿ ಕಂಡುಬರುವ ಪದ್ಯಗಳು ಪ್ರೌಢವಾಗಿರಬಹುದು, ಅವರು ನಿರೂಪಿಸುವ ಪಂಚಪರಮೇಷ್ಠಿಗಳ ಗುಣವಿಶೇಷಗಳ ತರ್ಕ ಗಂಭೀರವಾಗಿರಬಹುದು, ಆದರೆ ಆ ಹಿನ್ನೆಲೆಯ ಭಾವದಲ್ಲಿ ಜಾನಪದೀಯ ಅಂಶವಿದೆ.

ಯಕ್ಷ-ಯಕ್ಷಿಯರು ಜನಪದರಿಗೆ ಪ್ರಿಯರಾದವರು. ಅವರನ್ನು ಜೈನರು ಶಾಸನದೇವತೆಗಳೆಂದು ಪರಿಗಣಿಸುತ್ತಾರೆ. ಧರ್ಮಾನುಶಾಸನ ದೇವತೆಗಳೆಂಬ ಮಾನ್ಯತೆ ಇವರಿಗಿದೆ.

ಯಕ್ಷ-ಯಕ್ಷಿಯರ ಪೂಜೆಯನ್ನು ಕುರಿತು ಜೈನ ಸಮಾಜದಲ್ಲಿ ವಿಭಿನ್ನ ಧೋರಣೆಗಳಿವೆ. ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಯಕ್ಷ-ಯಕ್ಷಿಯರಿಗೆ ಮಾನ್ಯತೆ ಇರುವುದು ಕಂಡುಬರುತ್ತದೆ. ಯಕ್ಷ-ಯಕ್ಷಿಯರ ಬಗೆಗಿರುವ ವಾದ-ವಿವಾದಗಳನ್ನು ಇಲ್ಲಿ ಪರಿಗಣಿಸದೆ ಆ ವಿಷಯದ ಹಿನ್ನೆಲೆಯಲ್ಲಿ ಕಂಡುಬರುವ ಜಾನಪದೀಯ ಅಂಶ ಇಲ್ಲಿ ಗುರುತಿಸಲಾಗಿದೆ.

ಯಕ್ಷ-ಯಕ್ಷಿಯರು ಅತಿಮಾನುಷ ಶಕ್ತಿಯನ್ನು ಪಡೆದವರೆಂದೂ ಅವರು ಜಿನಶಾಸನ ರಕ್ಷಕರೆಂದೂ ತಿಳಿಯಲಾಗಿದೆ. ಅವರ ರೂಪಾತಿಶಯವೂ ಸಹ ವಿಶಿಷ್ಟವಾದುದು. ಉದಾ. ಗೆ: ಪಂಪನು ನೀಡುವ ವೃಷಭ ತೀರ್ಥಂಕರನ ಯಕ್ಷಿಯಾದ ಚಕ್ರೇಶ್ವರಿ ಯಕ್ಷಿಯ ವರ್ಣನೆಯನ್ನು ನೋಡಿ- ಚಕ್ರೇಶ್ವರಿ ಯಕ್ಷಿ ಗರುಡವಾಹನೆ; ಹನ್ನೆರಡು ತೋಳುಗಳನ್ನುಳ್ಳವಳು; ಎರಡು ತೋಳುಗಳು ವರದ ಮುದ್ರೆಯುಳ್ಳವು; ಮತ್ತೆರಡು ತೋಳುಗಳು ಹರಿತವಾದ ವಜ್ರಾಯುಧಗಳಿಂದ ಕೂಡಿದವು; ಉಳಿದ ಎಂಟು ತೋಳುಗಳು ಹೊಳಪಿನ ಜ್ಯೋತಿಯಿಂದಲೂ ಕೂಡಿದುವು (ಆದಿ ಪು. I-7). ವೃಷಭ ಯಕ್ಷ ಚತುರ್ಭುಜಗಳನ್ನುಳ್ಳವನು; ಕೊಡಲಿ, ಫಲ, ಜಪಮಾಲೆ ಮತ್ತು ವರದ ಮುದ್ರೆಗಳಿಂದ ಆ ನಾಲ್ಕು ಭುಜಗಳು ಕೂಡಿವೆ (ಆದಿ ಪು. I-8). ದೇವತೆಗಳ ಅತಿಮಾನುಷ ಶಕ್ತಿಗಳನ್ನು ಅವರ ರೂಪಾತಿಶಯಗಳಲ್ಲಿ ಗುರುತಿಸಿಕೊಳ್ಳುವುದು ಜನಪದರ ರೀತಿ. ಆ ಹಿನ್ನೆಲೆಯಲ್ಲಿ ಯಕ್ಷ-ಯಕ್ಷಿಯರ ರೂಪವನ್ನು ಗುರುತಿಸಲಾಗಿದೆ. ಪಂಪ-ಪೊನ್ನ-ರನ್ನರು ಆ ಪರಿಕಲ್ಪನೆಗೆ ಇಲ್ಲಿ ಕನ್ನಡಿಹಿಡಿದಿದ್ದಾರೆ.

ಸರಸ್ವತಿ ಶ್ರುತದೇವಿ, ಪಂಪ ಸರಸ್ವತಿಯನ್ನು ಕುರಿತು, 'ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇರದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು' ಎಂದು ಆದಿ ಪುರಾಣದಲ್ಲಿ ವಿಶಿಷ್ಟ ಅಭಿವ್ಯಕ್ತಿಯನ್ನು ನೀಡಿದ್ದಾನೆ. ಆದರೆ ಇದೇ ಕಾವ್ಯದಲ್ಲಿ ಮತ್ತೊಂದೆಡೆ ಹಾಗೂ ಲೌಕಿಕ ಕಾವ್ಯವೆಂದು ಈತನು ಕರೆದಿರುವ ಪಂಪ ಭಾರತದಲ್ಲಿ ಈತನೇ ಸರಸ್ವತಿಯನ್ನು ವರ್ಣಿಸುವ ರೀತಿ ಬೇರೆಯಾಗುತ್ತದೆ.

ಜನಪದರ ಕಲ್ಪನೆಯಲ್ಲಿ ಸರಸ್ವತಿ ವಾಗಧಿದೇವತೆ, ವಿದ್ಯಾದೇವತೆ. ಪಂಪನು ಜನಪದರ ಕಲ್ಪನೆಗಿಂತ ವಿಭಿನ್ನವಾದ ನಿರೂಪಣೆಯನ್ನು - 'ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು' - ಎಂದು ಹೇಳಿದ್ದರೂ 'ಅತಿ ಸುಭಗೆಯಾದ ಸರಸ್ವತಿಗೆ ಈತನ ಲಲಿತವಾಗ್ವಿಳಾಸವು ಅಲಂಕಾರಪ್ರಾಯವಾದುದಾಗಿದೆ' (ಆದಿ ಪು. I-28) ಎಂದು ಹೇಳುವಲ್ಲಿ ಹಾಗೂ 'ಅಂಬಿಕೆ ಸರಸ್ವತಿಯು ತನ್ನ ನಾಲಿಗೆಯ ಮೇಲೆ ಏಳಿಗೆಗೊಂಡು ಅರಿಕೇಸರಿಗೆ ವಿಶುದ್ಧ ಬುದ್ಧಿಯನ್ನು ನೀಡಲಿ' (ಪಂಪಭಾ. I-5) ಎಂಬ ಮಾತುಗಳಲ್ಲಿ ಪಂಪ ಜನಸಾಮಾನ್ಯರ ಪರಿಕಲ್ಪನೆಯ ಪರಿಧಿಗೇ ಬಂದಂತೆ ಕಂಡುಬರುತ್ತದೆ.

**ದೇಶೀಯ ಧಾಟಿ:**

ಕವಿ ರತ್ನತ್ರಯರ ಕೃತಿಗಳು ಪ್ರೌಢವಾದ ಮಾರ್ಗಸಾಹಿತ್ಯವಾದರೂ ಸಂಸ್ಕೃತ ಪದಗಳಿಂದ ಅವರ ಕಾವ್ಯ ಕಿಕ್ಕಿರಿದಿದ್ದರೂ ದೇಶೀನುಡಿಗಳ ಸೌಂದರ್ಯದ ಸಹಜಗತಿಯೂ ಅವರ ಕೃತಿಗಳಲ್ಲಿ ಕಂಡುಬರುತ್ತದೆ. 'ಕೋಮಳಮತಿ ಸುಭಗಂ', 'ಸುಂದರಂ ಸೂಕ್ತಿ ಗರ್ಭಂ' (ಆದಿ ಪು. I-6), 'ಲಲಿತ ವಾಗ್ವಿಳಾಸ' (ಆದಿ ಪು. I-28)ಗಳ ಬಗೆಗೆ ಪಂಪನಿಗೂ 'ಮೃದೂಕ್ತಿ' (ಶಾಂತಿ ಪು. I-8) ಬಗೆಗೆ ಪೊನ್ನನಿಗೂ 'ಪೊಸ ದೇಸಿಯ ಬೆಡಗಿನ' ಬಗೆಗೆ (ಅಜಿ ಪು. I-90) ರನ್ನನಿಗೂ ವಿಶೇಷ ಆದರ. ಅದರಂತೆ ಅವರ ಕಾವ್ಯಗಳಲ್ಲಿ ಜನಪದ ಸಾಹಿತ್ಯದ ಸುಭಗತೆ- ಸರಳತೆ- ಉಕ್ತಿ ಸೌಂದರ್ಯದ ಮೆರುಗು ಅಲ್ಲಲ್ಲಿ ಕಂಡುಬರುತ್ತದೆ. ಮಲ್ಲಿಕಾರ್ಜುನನು 'ಪೊನ್ನನೊಳ್ ಸನ್ನಿದಮಾದ ನಾಣ್ನುಡಿ'ಯನ್ನು ಹಾಡಿ ಹೊಗಳಿದ್ದಾನೆ.

ಮುಂದೆ ಪಂಪಾದಿ ರತ್ನತ್ರಯರ ಆಯಾ ಕೃತಿಗಳ ಕಥಾಚೌಕಟ್ಟನ್ನು ನೀಡಿ ಅನಂತರದಲ್ಲಿ ಅಲ್ಲಿ ಕಂಡುಬರುವ ಕಥಾಮಾದರಿ, ಆಶಯ ಮತ್ತು ಐತಿಹ್ಯಗಳೆಂಬಂತಹ ನಿರೂಪಣೆಗಳನ್ನು ಗುರುತಿಸಲಾಗಿದೆ.

**ಆದಿಪುರಾಣ ಕಥಾಸಾರ:**

ಜಯವರ್ಮನು ಶ್ರೀಷೇಣ - ಸುಂದರಿಯರ ಮಗ. ಆತನಿಗೆ ಶ್ರೀವರ್ಮನೆಂಬ ತಮ್ಮ. ತನ್ನನ್ನು ಕಡೆಗಣಿಸಿ ಶ್ರೀವರ್ಮನಿಗೆ ಪಟ್ಟ ಕಟ್ಟಿದುದರಿಂದ ಬೇಸರಗೊಂಡು ಆವನು ದೀಕ್ಷಿತನಾದನು. ಮುನಿಧರ್ಮ ಪರಿಪಾಲನೆಯ ಅಂಗವಾದ ಲುಂಚನ

ಕ್ರಿಯೆಯನ್ನು ನಡೆಸಿ ಕೂದಲುಗಳನ್ನು ಹುತ್ತದಲ್ಲಿ ಹಾಕುವಾಗ ಅದರಲ್ಲಿದ್ದ ಸರ್ಪ ಆತನನ್ನು ಕಚ್ಚಿತು. ವಿಮಾನವೇರಿ ಆಕಾಶದಲ್ಲಿ ವಿಹರಿಸುತ್ತಿದ್ದ ವಿದ್ಯಾಧರನ ವೈಭವವನ್ನು ಕಂಡು ಸಾಯುವ ಸಮಯದಲ್ಲಿ ನಿದಾನಶಲ್ಯದಿಂದ ಜಯವರ್ಮನು ಸತ್ತು. ಮಹಾಬಲನೆಂಬ ವಿದ್ಯಾಧರನಾಗಿ ಹುಟ್ಟಿದನು. ಭೋಗ ಭಾಗ್ಯಗಳಲ್ಲಿ ಓಲಾಡುತ್ತಿದ್ದ ಅವನು ಕೊನೆಗೆ ಇನ್ನೊಂದು ತಿಂಗಳು ಮಾತ್ರ ಆಯುಷ್ಯ ತನಗಿರುವುದನ್ನರಿತು, ಸ್ವಯಂಬುದ್ಧನ ಮಾರ್ಗದರ್ಶನದಲ್ಲಿ ಸಲ್ಲೇಖನವನ್ನು ಸ್ವೀಕರಿಸಿ ಸತ್ತು, ಲಲಿತಾಂಗ ದೇವನಾಗಿ ಹುಟ್ಟಿದನು. ಅಲ್ಲಿ ಸ್ವಯಂಪ್ರಭಾ ದೇವಿಯೊಡನೆ ವಿಶೇಷ ಅನುರಾಗವನ್ನು ಹೊಂದಿದವನಾಗಿ ಅಮಿತ ಸಂಸಾರ-ಸಾಗರದಲ್ಲಿ ಓಲಾಡಿದನು. ಕೊನೆಗೆ ಇನ್ನು ಆರು ತಿಂಗಳು ಆಯುಷ್ಯ ಉಳಿದಿದ್ದಾಗ ತನ್ನ ಅವಸಾನಕಾಲ ಸನ್ನಿಹಿತವಾದುದನ್ನು ಅರಿತು ದುಃಖಿತನಾದನು. ಅಲ್ಲಿಂದ ಮುಂದೆ ವಜ್ರಜಂಘನೆಂಬ ರಾಜನಾಗಿ ಹುಟ್ಟಿ ಹಿಂದಿನ ಜನ್ಮದಲ್ಲಿ ಸ್ವಯಂಪ್ರಭೆಯಾಗಿದ್ದ ಶ್ರೀಮತಿಯನ್ನು ವಿವಾಹವಾದನು. ಇವರು ಸುಖ-ಸಂಪತ್ತಿನಲ್ಲಿ ಓಲಾಡಿದರು. ನಲವತ್ತೊಂಬತ್ತು ಅವಳಿ ಮಕ್ಕಳನ್ನು ಪಡೆದರು. ಒಮ್ಮೆ ಸೆಜ್ಜೆಮನೆಯಲ್ಲಿ ಮಲಗಿದ್ದಾಗ, ಕಿಟಕಿಯನ್ನು ತೆರೆಯಲು ಮರೆತ ಕಾರಣ ಕೇಶಸಂಸ್ಕಾರಕ್ಕೆಂದು ಇಟ್ಟಿದ್ದ ಧೂಪವು ಕವಿದು ಶ್ರೀಮತಿ - ವಜ್ರಜಂಘರು ಉಸಿರುಕಟ್ಟಿ ಸತ್ತರು. ಅಲ್ಲಿಂದ ಭೋಗಭೂಮಿಜ ಆರ್ಯದಂಪತಿಗಳಾಗಿ ಹುಟ್ಟಿದರು. ಆಯುಷ್ಯಾಂತದಲ್ಲಿ ಸತ್ತು ಶ್ರೀಧರದೇವ - ಸ್ವಯಂಪ್ರಭದೇವರಾಗಿ ಹುಟ್ಟಿದರು. ಶ್ರೀಧರ ದೇವನು ಮುಂದೆ ಸುವಿಧಿಯೆಂಬ ರಾಜನಾಗಿಯೂ ಸ್ವಯಂಪ್ರಭದೇವನು ಆತನಿಗೆ ಕೇಶವನೆಂಬ ಮಗನಾಗಿಯೂ ಜನಿಸಿದರು. ಸುವಿಧಿಯು ಶ್ರಾವಕ ವ್ರತಗಳನ್ನು ಕೈಗೊಂಡು ಸತ್ತು ಅಚ್ಯುತ ಕಲ್ಪದೇವನಾಗಿ ಜನಿಸಿ, ಅಲ್ಲಿಂದ ಮುಂದೆ ವಜ್ರನಾಭಿಯಾಗಿ ಹುಟ್ಟಿ ಸಂಸಾರದ ಅಸಾರತೆಯನ್ನು ಮನಗಂಡು ದೀಕ್ಷಿತನಾದನು. ಷೋಡಶಭಾವನೆಗಳನ್ನು ಕೈಗೊಂಡು ತಪಸ್ಸನ್ನು ಆಚರಿಸಿ ತೀರ್ಥಂಕರ ನಾಮಕರ್ಮಬಂಧವನ್ನು ಪಡೆದುಕೊಂಡನು. ಶರೀರತ್ಯಾಗಮಾಡಿ ಸರ್ವಾರ್ಥ ಸಿದ್ಧಿಯಲ್ಲಿ ಜನಿಸಿದನು. ಕೇಶವನೂ ಸಹ ದೇವನಾಗಿ ಹುಟ್ಟಿದನು.

ಸರ್ವಾರ್ಥಸಿದ್ಧೇಶ್ವರನು ಅಯೋಧ್ಯೆಯ ನಾಭಿರಾಜ ಮರುದೇವಿಯರಿಗೆ ವೃಷಭನೆಂಬ ಮಗನಾಗಿ ಜನಿಸಿದನು. ಬೆಳೆದು ದೊಡ್ಡವನಾದನು. ತಂದೆ ತಾಯಿಗಳ ಒತ್ತಾಯದ ಮೇರೆಗೆ ಯಶಸ್ವತಿ - ಸುನಂದೆಯರನ್ನು ಮದುವೆಯಾದನು.

ಯಶಸ್ವತಿಯಲ್ಲಿ ಭರತನೇ ಮೊದಲಾದ ನೂರುಮಂದಿ ಗಂಡುಮಕ್ಕಳೂ ಹಾಗೂ ಬ್ರಾಹ್ಮಿ ಎಂಬ ಮಗಳೂ ಸುನಂದೆಯಲ್ಲಿ ಬಾಹುಬಲಿ ಎಂಬ ಮಗನೂ ಸುಂದರಿ ಎಂಬ ಮಗಳೂ ಜನಿಸಿದರು. ವೃಷಭನಾಥನು ಅವರೆಲ್ಲರಿಗೆ ಯೋಗ್ಯವಾದ ಶಿಕ್ಷಣವನ್ನು ನೀಡಿದನು.

ದೇವೇಂದ್ರನು ಒಮ್ಮೆ ನೃತ್ಯಸಭೆಯೊಂದನ್ನು ಏರ್ಪಡಿಸಿದನು. ನೃತ್ಯ ಮಾಡುತ್ತಿದ್ದಂತೆ ನೀಲಾಂಜನೆಯೆಂಬ ನೃತ್ಯಗಾರ್ತಿಯು ಗತಿಸಿದಳು. ರಸಭಂಗವಾಗ-ಬಾರದೆಂಬ ಕಾರಣ ದೇವೇಂದ್ರನು ಮತ್ತೋರ್ವ ನೀಲಾಂಜನೆಯನ್ನು ಮರುಕ್ಷಣವೇ ನೃತ್ಯಮಂಟಪದಲ್ಲಿ ನಿಯೋಜಿಸಿದನು. ಈ ರಹಸ್ಯ ವೃಷಭನಿಗಲ್ಲದೆ ಮತ್ತೆ ಯಾರಿಗೂ ತಿಳಿಯದಾಯಿತು. ವೃಷಭನಾಥನು ಸಂಸಾರದ ಕ್ಷಣಿಕತೆಯನ್ನು ಕುರಿತು ಚಿಂತಿಸಿ ವೈರಾಗ್ಯಪರನಾಗಿ ದೀಕ್ಷಿತನಾದನು. ಭರತ ಬಾಹುಬಲಿಗಳು ರಾಜ - ಯುವರಾಜ ಪದವಿಯನ್ನಲಂಕರಿಸಿದರು.

ಭರತನ ಆಯುಧಾಗಾರದಲ್ಲಿ ಚಕ್ರರತ್ನವು ಉದಿಸಿ ಆತನು ದಿಗ್ವಿಜಯ ಯಾತ್ರೆಯನ್ನು ಕೈಗೊಂಡನು. ವಿಜಯಾರ್ಧ ಪರ್ವತದಲ್ಲಿ ತನ್ನ ವಿಜಯಯಾತ್ರೆಯ ಪ್ರಶಸ್ತಿಯನ್ನು ಕೆತ್ತಿಸಲು ಹೋದಾಗ, ಅಂತಹ ಪ್ರಶಸ್ತಿಗಳಿಂದ ತುಂಬಿಹೋಗಿದ್ದ ಆ ತಾಣವನ್ನು ಕಂಡು ಆತನ ಗರ್ವರಸ ಸೋರಿಹೋಯಿತು. ಮುಂದೆ ರಾಜ್ಯಕ್ಕೆ ಹಿಂದಿರುಗಿ ಬರುವಾಗ ಚಕ್ರರತ್ನ ಪುರಪ್ರವೇಶ ಮಾಡದೆ ನಿಂತುಬಿಟ್ಟಿತು. ಅದಕ್ಕೆ ಕಾರಣ ಇನ್ನೂ ಅಜೇಯರಾಗಿರುವ ತಮ್ಮಂದಿರು ಎಂದು ತಿಳಿದು ಬಂದಿತು. ಭರತನಿಗೆ ಮಣಿಯಲು ಇಚ್ಛಿಸದೆ ಬಾಹುಬಲಿಯನ್ನುಳಿದು ಉಳಿದ ತಮ್ಮಂದಿರು ದೀಕ್ಷಿತರಾದರು. ಬಾಹುಬಲಿ ಅಣ್ಣನನ್ನು ಎದುರಿಸಲು ನಿಂತನು. ಅವರಿಬ್ಬರ ನಡುವೆ ಧರ್ಮಯುದ್ಧ ನಡೆಯಿತು. ದೃಷ್ಟಿ, ಜಲ, ಮಲ್ಲ ಯುದ್ಧಗಳಲ್ಲಿ ಬಾಹುಬಲಿಗೇ ಜಯ ಲಭಿಸಿತು. ಕೊನೆಗೆ ಭರತನು ಕೋಪಗೊಂಡವನಾಗಿ ತನ್ನ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗ ಮಾಡಿದನು. ಆದರೆ ಅದು ಅವನನ್ನು ಕೊಲ್ಲದೆ ಗೌರವ ಸೂಚಿಸಿ ನಿಂತುಬಿಟ್ಟಿತು. ಬಾಹುಬಲಿ ವೈರಾಗ್ಯಪರನಾಗಿ ದೀಕ್ಷೆಯನ್ನು ಕೈಗೊಂಡನು. ಭರತನಿಗೆ ತನ್ನ ತಪ್ಪಿನ ಅರಿವಾಯಿತು. ಬಾಹುಬಲಿಯನ್ನು ತಡೆದರೂ ಆತನು ದೀಕ್ಷಿತನಾಗುವುದರಿಂದ ವಿಚಲಿತನಾಗಲಿಲ್ಲ. ಆದರೂ ತಾನು ತಪಸ್ಸಿಗೆ ನಿಂತ ಭೂಮಿ ಭರತನದ್ದು ಎಂಬ ಮಾನಕಷಾಯದ ಭಾವ ಹೋಗಿರಲಿಲ್ಲ.

ಭರತನು ಬಾಹುಬಲಿಯ ಬಳಿಗೆಬಂದು 'ಇದು ನಿನ್ನದೇ ನೆಲ, ನೀನೇ ನನಗೆ ಬಿಟ್ಟು ಹೋದದ್ದು' ಎಂದು ಹೇಳಿದಾಗ ಬಾಹುಬಲಿಗೆ ಕೇವಲಜ್ಞಾನದ ಲಾಭವಾಯಿತು. ಈ ಕಡೆ ಕೇವಲಜ್ಞಾನವನ್ನು ಪಡೆದು ಉಪದೇಶಕನಾಗಿ ತೀರ್ಥಂಕರನೆನಿಸಿದ ವೃಷಭನಾಥನು ಮುಕ್ತಿಯ ನೆಲೆಗೆ ಏರಿದನು. ಭರತ-ಬಾಹುಬಲಿಗಳೂ ಕಾಲಕ್ರಮದಲ್ಲಿ ಮುಕ್ತಿಯನ್ನು ಪಡೆದರು.

**ಉಪಕಥೆಗಳು-ಆಶಯಗಳು:**

ಆದಿಪುರಾಣದಲ್ಲಿ ಬರುವ ಉಪಕಥೆಗಳಲ್ಲಿ ಅರವಿಂದ ರಾಜನ ಕಥೆ ಹೀಗಿದೆ (೨ನೇ ಆಶ್ವಾಸ):

ವಿದ್ಯಾಧರವಂಶದಲ್ಲಿ ಅರವಿಂದನೆಂಬ ವಿದ್ಯಾಧರ ರಾಜನಿದ್ದನು. ಈತನಿಗೆ ಹರಿಶ್ಚಂದ್ರ, ಕುರುವಿಂದರೆಂಬ ಮಕ್ಕಳು. ಅರವಿಂದನು ರೌದ್ರಧ್ಯಾನ ಪರಿಣತನಾಗಿ ನರಕಾಯುಷ್ಯವನ್ನು ಕಟ್ಟಿಕೊಂಡನು. ಮರಣಕಾಲ ಹತ್ತಿರವಾದಾಗ ಅವನಿಗೆ ದಾಹಜ್ವರ ಕಾಣಿಸಿಕೊಂಡಿತು. ಯಾವ ಶೈತ್ಯೋಪಚಾರವೂ ಅವನ ದಾಹಜ್ವರವನ್ನು ಗುಣಪಡಿಸಲಿಲ್ಲ. ಪುಣ್ಯಕ್ಷಯದ ಫಲವಾಗಿ ಆತನ ವಿದ್ಯೆಗಳೂ ಕೈಬಿಟ್ಟು ಹೋದವು. ಮಗ ಹರಿಶ್ಚಂದ್ರನನ್ನು ಕರೆದು ಆತನ ಗಗನಗಾಮಿನೀ ವಿದ್ಯೆಯ ಸಹಾಯದಿಂದ ತಂಪಾದ ಸೀತೋದಾನದಿಯ ತಡಿಗೆ ಬಿಡಲು ಬೇಡಿಕೊಂಡನು. ಆತನ ಗಗನಗಾಮಿನೀ ವಿದ್ಯೆಯೂ ಕೂಡ ನರಕಾಭಿಮುಖವಾದ ಅರವಿಂದನಿಗೆ ಸಹಾಯವನ್ನು ಮಾಡಲು ಒಪ್ಪಲಿಲ್ಲ. ಒಮ್ಮೆ ಮನೆಯ ಕೋಗಿಲೆಗಳೆರಡು (ಹಲ್ಲಿಗಳೆರಡು) ಪರಸ್ಪರ ಜಗಳವಾಡುತ್ತಿರುವಾಗ ರಕ್ತದ ಬಿಂದುಗಳು ಅರವಿಂದನ ಮೈಗೆ ಬಿದ್ದು ಅದರಿಂದಾಗಿ ಅವನಿಗೆ ತಂಪುಂಟಾಯಿತು. ಅರವಿಂದನು ಸಂತೋಷಗೊಂಡನು. ರಕ್ತದ ಸರೋವರವನ್ನು ನಿರ್ಮಿಸಬೇಕೆಂದೂ ಅದರಲ್ಲಿ ತಾನು ಮನಃಪೂರ್ತಿಯಾಗಿ ಕ್ರೀಡಿಸುವುದಾಗಿಯೂ ಕುರುವಿಂದನಿಗೆ ತಿಳಿಸಿದನು. ಆದರೆ ಮಗ ಕುರುವಿಂದನು ಕ್ರೂರ ಕರ್ಮಕ್ಕೆ ಹೇಸಿದವನಾಗಿ, ಮನಸ್ಸಿಲ್ಲದ ಮನಸ್ಸಿನಿಂದ ಕಾಡಿಗೆ ತೆರಳಿ ಅಲ್ಲಿ ದಿವ್ಯಜ್ಞಾನಿಗಳಿಂದ ತಂದೆಯ ಮರಣ ಸನ್ನಿಹಿತವಾಗಿರುವುದನ್ನೂ ಆತನ ನರಕಗಮನವನ್ನೂ ತಿಳಿದುಕೊಂಡನು. ರಕ್ತ ಸರೋವರವನ್ನು ಮಾಡಿಸದೆ ಅರಗಿನ ರಸದ ಸರೋವರವನ್ನು ಮಾಡಿಸಿದನು. ಅರವಿಂದನು ಸಂತೋಷದಿಂದ ಅದನ್ನು ಪ್ರವೇಶಿಸಿ ಓಲಾಡಿ ನೀರನ್ನು ಮುಕ್ಕಳಿಸಿ

ನೋಡಿ ಕೃತಕ ಜಲವೆಂದು ಅರಿತನು. ಮಗನು ತನ್ನನ್ನು ವಂಚಿಸಿದನೆಂದು ಬಗೆದು, ಕ್ರೋಧಗೊಂಡು ಆತನನ್ನು ಕೊಲ್ಲಲು ಹೋಗಿ ತಡಬಡಿಸಿ ಮೆಟ್ಟಿಲಿನಿಂದ ಜಾರಿ ಬಿದ್ದು ತನ್ನ ಕತ್ತಿ ತನಗೇ ತಗುಲಿ ಸತ್ತು ಹೋದನು (ಆಶ್ವಾಸ II).

ಇದು ಮಂತ್ರಿ ಸ್ವಯಂಬುದ್ಧನು ಮಹಾಬಲನಿಗೆ ನಿರೂಪಿಸಿದ ಕಥೆ. ಈ ಕಥೆ ಜನಜನಿತವಾಗಿ ಬಂದುದರ ಸೂಚನೆಯನ್ನು ಕಥೆಯಲ್ಲಿಯೇ ನೀಡಲಾಗಿದೆ. 'ಈಗಲುಮೀ ಪುರಜನಂಗಳ್ಪೇಟಿಱ ಕೇಳಲಕ್ಕುಂ' ಎಂಬ ಎಡೆಯಲ್ಲಿ ಅದನ್ನು ಗುರುತಿಸಿಕೊಳ್ಳಬಹುದಾಗಿದೆ. ಅಂದರೆ ಈ ಕಥೆ ಜನಜನಿತವಾಗಿ ಜನಪದ ಪರಂಪರೆಯಲ್ಲಿ ಬಂದುದನ್ನು ಇದು ಸೂಚಿಸುತ್ತದೆ. ಅಲ್ಲದೆ ರೋಗಪೀಡಿತನಾದ ವ್ಯಕ್ತಿ ಅದರ ನಿವಾರಣೆಗಾಗಿ ದುಸ್ಸಾಧ್ಯವಾದ ಯಾವುದಾದರೂ ಒಂದು ಸಂಗತಿಯನ್ನು ಕುರಿತುಕೊಳ್ಳುವ ಜನಪದ ಆಶಯವೂ ಇದರ ಹಿನ್ನೆಲೆಯಲ್ಲಿರುವುದನ್ನು ಗಮನಿಸಬಹುದು. ರಕ್ತಲೇಪನದಿಂದ ಬೇನೆ ವಾಸಿಯಾಗುವುದೆಂಬ ಕಥಾಶಯವನ್ನೂ ಇದು ಒಳಗೊಂಡಿದೆ. ಖಾಯಿಲೆ ನಟಿಸುವ ಮಲತಾಯಿ ಮಕ್ಕಳನ್ನು ಕಡಿದು ಅವುಗಳ ರಕ್ತ ಹಚ್ಚಿದರೆ ತಾನು ಗುಣವಾಗುತ್ತೇನೆ ಎಂದು ಹೇಳುವ ಆಶಯ ಅನೇಕ ಕಥೆಗಳಲ್ಲಿ ಬರುತ್ತದೆ. ಕಥೆಯಲ್ಲಿ ಮಕ್ಕಳನ್ನು ಕಡಿಯುವ ಉದ್ದೇಶ ದುಷ್ಟತನದಿಂದ ಕೂಡಿದುದಾಗಿದ್ದರೂ ರಕ್ತಲೇಪನದಿಂದ ಬೇನೆ ವಾಸಿಯಾಗುವುದೆಂಬ ಅಂಶ ನಿಜವಾಗಿ ಆಚರಣೆಯಲ್ಲಿದ್ದ ನಂಬಿಕೆಯ ಉಳಿಕೆಯೇ ಆಗಿದೆ.[೧೦]

ಪಂಪನ ಉತ್ತರಕಾಲೀನ ಕಾವ್ಯಗಳಾದ ಚಾಮುಂಡರಾಯನ 'ಚಾವುಂಡರಾಯ ಪುರಾಣ', ಹಸ್ತಿಮಲ್ಲನ 'ಪೂರ್ವಪುರಾಣ', ನಾಗರಾಜನ ಪುಣ್ಯಾಸ್ರವದಲ್ಲಿಯ 'ಆದೀಶ್ವರರ ಕಥೆ', ಶಾಂತಿಕೀರ್ತಿಯ 'ಪುರುದೇವ ಚರಿತೆ', ಬೊಮ್ಮಣ್ಣನ 'ಆದಿ ಪರಮೇಶ್ವರ ಯಕ್ಷಗಾನ'ಗಳಲ್ಲಿಯೂ ಈ ಕಥೆ ಕಂಡುಬರುತ್ತದೆ. 'ಆದಿಪುರಾಣ' ಹಾಗೂ 'ಚಾವುಂಡರಾಯ ಪುರಾಣ'ಗಳಲ್ಲಿ ಅರವಿಂದನ ಮೇಲೆ ಬಿದ್ದ ರಕ್ತವು ಗೃಹಕೋಗಿಲೆಗಳದ್ದೆಂದು ಬಂದರೆ ಉಳಿದೆಡೆಗಳಲ್ಲಿ ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿ ಕಂಡುಬರುವಂತೆ ಹಲ್ಲಿಗಳದ್ದೆಂದು ಬರುತ್ತದೆ. 'ಚಾವುಂಡರಾಯ ಪುರಾಣ' ಹಸ್ತಿಮಲ್ಲನ ಪೂರ್ವಪುರಾಣಗಳಲ್ಲಿ ಈ ಕಥೆ ರೇಖಾಮಾತ್ರವಾಗಿ ಕಂಡುಬರುತ್ತದೆ. ನಾಗರಾಜನ ಪುಣ್ಯಾಸ್ರವದ ಆದೀಶ್ವರರ ಕಥೆಯಲ್ಲಿ ಮುಖ್ಯ ಕಥೆ ಒಂದೇ ಆದರೂ ಅದರ ನಿರೂಪಣೆಯಲ್ಲಿ ಒಂದು

ಹೊಸ ತಿರುವು ಕಂಡುಬರುತ್ತದೆ. ಅರವಿಂದನು ರಕ್ತದ ಸರೋವರವನ್ನು ನಿರ್ಮಿಸಲು ಹೇಳಿದಾಗ ಕುರುವಿಂದನು ಉತ್ಸಾಹದಿಂದಲೇ ಮೃಗಗಳಿದ್ದೆಡೆಗೆ ಹೋಗಿ 'ಹಾಸುಬಲೆ', 'ಗೂಟದ ಬಲೆ', 'ಆಸೆ ಬಲೆ', 'ತಡಿಕೆ ಬಲೆ' ಹೀಗೆ ನಾನಾ ವಿಧವಾದ ಬಲೆಗಳನ್ನು ಒಡ್ಡಿ ಮೃಗಗಳನ್ನು ಹಿಡಿಯಲು ಉದ್ಯುಕ್ತನಾಗಿರುವಾಗ ಜೈನ ಮುನಿಗಳನ್ನು ಕಂಡನು. ಅವರು ಆ ಬಲೆಗಳನ್ನೆಲ್ಲಾ ನಿವಾರಿಸಿ 'ನಿನ್ನ ತಂದೆ ಅಲ್ಪಾಯುಷಿ; ನರಕಕ್ಕೆ ಹೋಗುವವನಿದ್ದಾನೆ' ಎನ್ನಲು ಮಗನಿಗೆ ಆಶ್ಚರ್ಯ. 'ನಮ್ಮ ತಂದೆ ಜ್ಞಾನವಂತ, ನರಕಕ್ಕೆ ಹೇಗೆ ಹೋಗುತ್ತಾನೆ?' ಎಂದು ಪ್ರಶ್ನಿಸಿದಾಗ, ಮುನಿಗಳು - 'ನಿನ್ನ ತಂದೆಯ ಬಳಿಗೆ ಹೋಗಿ ಅಡವಿಯಲ್ಲಿ ಮೃಗಗಳೇ ಅಲ್ಲದೆ ಮತ್ತೆ ಇನ್ನೂ ಯಾವ ವಸ್ತು ಉಂಟೆಂದು ನೀನು ಕೇಳಿದಾಗ, ಮುನಿಗಳ ಇರವಿನ ವಿಷಯವನ್ನು ಹೇಳಿದರೆ ನಿನ್ನ ತಂದೆ ಜ್ಞಾನಿ ಎಂದು ತಿಳಿ' ಎಂದು ಹೇಳಿದನು. ಅದರಂತೆ ಹರಿಶ್ಚಂದ್ರನು ತಂದೆಯ ಬಳಿಗೆ ಹೋಗಿ ಕೇಳಿದಾಗ, ಆತನು 'ಮೃಗಗಳ ವಿಚಾರ ಹೊರತು ಮತ್ತೇನೂ ಅರಿಯೆ'ನೆಂದನು. ಈ ವಿವರಗಳು ಪುಣ್ಯಾಸ್ರವದ ಆದೀಶ್ವರರ ಕಥೆಯಲ್ಲಿ ಮಾತ್ರ ಕಂಡುಬರುತ್ತವೆ. ಉಳಿದ ವಿವರಗಳು ಅರವಿಂದನ ಕಥೆಯ ರೂಪರೇಷೆಯಂತೆಯೇ ಬರುತ್ತವೆ.

ನಾಗರಾಜನ ಈ ಒಂದು ಹೊಸ ರೀತಿಯ ನಿರೂಪಣೆಗೆ ಮೂಲ ಯಾವುದೆಂದು ತಿಳಿದುಬರುವುದಿಲ್ಲ. ಇದು ಕವಿಯ ಸ್ವಂತ ನಿರೂಪಣೆಯೂ ಆಗಿರಬಹುದು. ಜನಪದ ಕಥೆಯೊಂದು ಹೊಸ ಅಂಶಗಳನ್ನು ಕೆಲವೆಡೆ ಸೇರಿಸಿಕೊಂಡು ಬೆಳೆಯಬಲ್ಲುದು ಎಂಬುದಕ್ಕೆ ಈ ಕಥೆಯು ಉದಾಹರಣೆಯಾಗಿದೆ. ಈ ಭಾಗದಲ್ಲಿ ಮತ್ತೊಂದು ಆಶಯವೂ ಸೇರ್ಪಡೆ ಆದಂತೆ ತೋರುತ್ತದೆ. ಕೆಲವು ವಿಶಿಷ್ಟವಾದ ಸಮಸ್ಯೆಗಳನ್ನು ಮುಂದಿಟ್ಟು ಅಥವಾ ಪ್ರಶ್ನೆಗಳನ್ನು ಕೇಳಿ ವ್ಯಕ್ತಿಗಳನ್ನು ಕೆಲವು ಸಂದರ್ಭಗಳಲ್ಲಿ ಪರೀಕ್ಷಿಸುವ ಆಶಯ ಜನಪದ ಕಥೆಗಳಲ್ಲಿ ಕಂಡುಬರುತ್ತದೆ. ಅಂತಹ ಒಂದು ಆಶಯವು ಇಲ್ಲಿ ಸೇರ್ಪಡೆಯಾದಂತೆ ತೋರುತ್ತದೆ. ಅಲ್ಲದೆ ಕುರುವಿಂದನು ಬೇಟೆಯಾಡಲು ಸಿದ್ಧಪಡಿಸಿಕೊಂಡ ರೀತಿಯ ಚಿತ್ರಣದಲ್ಲಿಯೂ ಜನಪದ ಧಾಟಿ ಕಂಡುಬರುತ್ತದೆ.

**ದಂಡಕನ ಕಥೆ** (ಎರಡನೇ ಆಶ್ವಾಸ):

ಮಹಾಬಲನ ವಂಶದ ದಂಡಕನೆಂಬ ವಿದ್ಯಾಧರನಿಗೂ ಆತನ ಹೆಂಡತಿ ಸುಂದರಿಗೂ ಮಣಿಮಾಲಿ ಎಂಬ ಮಗ ಜನಿಸಿದನು. ದಂಡಕನು ರಾಜ್ಯಭಾರ

ಮಾಡುತ್ತ ಪ್ರಜೆಗಳನ್ನು ಹಿಂಸಿಸಿ, ಸುಲಿಗೆ ಮಾಡಿ ತನ್ನ ಭಂಡಾರವನ್ನು ತುಂಬುತ್ತಿದ್ದನು. ಹಣವನ್ನು ಭೂಮಿಯಲ್ಲಿ ಬೈತಿಟ್ಟು ಮಿಳ್ಮಿಳ ನೋಡುತ್ತಲಿದ್ದನು. 'ತಾನು ಉಂಡರೂ ದ್ರವ್ಯವು ನಷ್ಟವಾಗುವುದು' ಎಂಬ ಕಡು ಲೋಭವಶನಾಗಿ ಕಡೆಗೆ ಶಕ್ತಿಗುಂದಿ ಸತ್ತನು. ಲೋಭಿಯಾದ ಅವನು ಅಜಗರವಾಗಿ ಜನಿಸಿ ಹೂತಿಟ್ಟ ಭಂಡಾರವನ್ನು ಕಾಯತೊಡಗಿದನು. ಮಣಿಮಾಲಿಯನ್ನು ಬಿಟ್ಟು ಮತ್ತೆ ಯಾರನ್ನೂ ಆ ನಿಧಿಯ ಬಳಿ ಸುಳಿಯಲು ಬಿಡುತ್ತಿರಲಿಲ್ಲ. ಒಮ್ಮೆ ಮಣಿಮಾಲಿಯು ಅವಧಿ ಜ್ಞಾನಿಗಳಾದ ಮುನಿಗಳಿಂದ ಆ ಅಜಗರವು ತನ್ನ ತಂದೆ ಎಂದು ತಿಳಿದು, ತಂದೆಯಾಗಿದ್ದ ಅಜಗರನಿಗೆ ಪ್ರತಿಬೋಧನೆಯನ್ನು ಮಾಡಿದನು. ಇದರಿಂದಾಗಿ ದಂಡಕನು ಮೋಹವನ್ನು ನೀಗಿ ಪಶ್ಚಾತ್ತಾಪಗೊಂಡವನಾಗಿ ಆಹಾರವನ್ನು ತ್ಯಜಿಸಿ ಸೌಧರ್ಮ ಕಲ್ಪದಲ್ಲಿ ದೇವನಾಗಿ ಜನಿಸಿದನು. ಮಣಿಮಾಲಿಯು ಮಾಡಿದ ಉಪಕಾರವನ್ನು ನೆನೆದು, ಭೂಮಿಗೆ ಬಂದು ಮಗನಿಗೆ ಉತ್ಕೃಷ್ಟವಾದ ರತ್ನಗಳನ್ನು ಧರಿಸಲು ಕೊಟ್ಟನು.

ಆ ರತ್ನಹಾರವು ಆ ಪರಂಪರೆಯಿಂದ ಮಹಾಬಲನು ಧರಿಸಿರುವನೆಂಬ ವಿಷಯವನ್ನು ಸ್ವಯಂಬುದ್ಧನು ತಿಳಿಸಿದ ಈ ಕಥೆಯ ಹಿನ್ನೆಲೆಯಲ್ಲಿಯೂ ಜನಪದ ಆಶಯವನ್ನು ಗುರುತಿಸಬಹುದಾಗಿದೆ.

ಹಾವು ನಿಧಿಯನ್ನು ಕಾಯುವ ಸಂಗತಿಯ ಆಶಯವಲ್ಲದೆ ಜೈನ ಕಥೆಗಳಲ್ಲಿ ಕಂಡುಬರುವ ಪ್ರಾಣಿಗಳ ಜಾತಿಸ್ಮರಣೆ, ಆಹಾರ ತ್ಯಾಗ, ಸದ್ಗತಿಪ್ರಾಪ್ತಿಯ ಆಶಯಗಳನ್ನೂ ಈ ಕಥೆಯಲ್ಲಿ ಗುರುತಿಸಿಕೊಳ್ಳಬಹುದು. ಉತ್ತರಕಾಲೀನ ಆದಿತೀರ್ಥಂಕರರ ಚರಿತೆಯಲ್ಲಿಯೂ ಈ ಕಥೆ ಕಂಡುಬರುತ್ತದೆ.

ಈ ಮೇಲಿನ ಆಶಯವನ್ನೇ ನಿರೂಪಿಸುವ ಮತ್ತೊಂದು ಕಥೆ ಆದಿಪುರಾಣದಲ್ಲಿ ಕಂಡುಬರುತ್ತದೆ. ವಜ್ರಜಂಘನು ಮತಿವರಾದಿಗಳ ಭವವೃತ್ತಾಂತವನ್ನು ಮುನಿಗಳಿಂದ ಕೇಳಿ ತಿಳಿದುಕೊಳ್ಳುವ ಸಂದರ್ಭದಲ್ಲಿ ಮತಿವರನ ಪೂರ್ವಭವದ ಕಥೆಯಲ್ಲಿ ಈ ಆಶಯಗಲು ಕಂಡು ಬರುತ್ತವೆ.

ನಿಧಿಯನ್ನು ಕಾಯ್ದ ಹುಲಿಯ ಕಥೆ - ಮತಿವರನ ಪೂರ್ವಭವ (೮ನೇ ಆಶ್ವಾಸ):

ವತ್ಸಕಾವತೀ ದೇಶ. ಅಲ್ಲಿ ಪ್ರಭಾಕರಿ ಎಂಬ ಪಟ್ಟಣ. ಅತಿಗೃದ್ಧ ಅಲ್ಲಿಯ ರಾಜ. ಅವನು ವಿಷಯ ಸುಖದಲ್ಲಿ ನಿರತನೂ ಲೋಭಿಯೂ ಆಗಿದ್ದನು. ಬೆಟ್ಟದ

ತಪ್ಪಲಲ್ಲಿ ಹಣವನ್ನು ಬಚ್ಚಿಟ್ಟು ಸತ್ತು ಹೋದನು. ನರಕದ ದುಃಖವನ್ನನುಭವಿಸಿ, ಅಲ್ಲಿಂದ ಹೊರಬಿದ್ದು ಧನವನ್ನು ಬಚ್ಚಿಟ್ಟಿದ್ದ ಬೆಟ್ಟದ ತಪ್ಪಲಿನಲ್ಲಿ ಹುಲಿಯಾಗಿ ಹುಟ್ಟಿದನು. ಒಮ್ಮೆ ಆ ಪುರದ ರಾಜ ಪ್ರೀತಿವರ್ಧನನು ಶತ್ರುರಾಜನ ಮೇಲೆ ಯುದ್ಧಕ್ಕೆ ಹೋಗಿ ಗೆದ್ದು ಹಿಂದಿರುಗಿ ಬರುವಾಗ ಸೈನ್ಯ ಸಮೇತನಾಗಿ ಆ ಬೆಟ್ಟದ ತಪ್ಪಲಿನಲ್ಲಿ ಬೀಡುಬಿಟ್ಟನು. ಆಗ ಶಕುನವನ್ನು ಬಲ್ಲ ಪುರೋಹಿತನು ಮುನಿಗಳಿಗೆ ಕನಕಾಭಿಷೇಕವನ್ನು ಮಾಡಿದರೆ ದಾನದ ಫಲವಾಗಿ ಅವನಿಗೆ ಅಲ್ಲಿ ಕನಕಪ್ರಾಪ್ತಿ ಉಂಟಾಗುವುದೆಂದು ಹೇಳಿದನು. ಪ್ರೀತಿವರ್ಧನನು ಪಟ್ಟಣವನ್ನೆಲ್ಲಾ ಅಪ್ರಾಸುಕ-ಗೊಳಿಸುವಂತೆ ಮಾಡಿದುದರಿಂದ ಆ ಮುನಿಗಳು ಪುರಪ್ರವೇಶಮಾಡದೆ, ರಾಜನು ಬೀಡುಬಿಟ್ಟಿದ್ದ ಬೆಟ್ಟದ ತಪ್ಪಲಿನ ಬೀಡಿಗೆ ಬಂದರು. ರಾಜನು ಮುನಿಗಳನ್ನು ಆಹಾರ ದಾನಗಳಿಂದ ಉಪಚರಿಸಿದನು. ಪಂಚಾಶ್ಚರ್ಯಗಳಾದವು. ಹುಲಿಯು ಜಾತಿಸ್ಮರಣೆಯನ್ನು ಹೊಂದಿ ಆಹಾರವನ್ನು ತೊರೆದು ಶಾಂತಿ ಮನಸ್ಸನ್ನು ಹೊಂದಿತು. ಮುನಿಗಳು ರಾಜನಿಗೆ ಅದರ ಭವವೃತ್ತಾಂತವನ್ನು ವಿವರಿಸಿ ಹೇಳುವಾಗ ಅದನ್ನು ಕೇಳಿದ ಹುಲಿಯು ಉಪವಾಸ ವ್ರತವನ್ನು ಕೈಗೊಂಡು ಸತ್ತು ಈಶಾನಕಲ್ಪದಲ್ಲಿ ದಿವಾಕರ ಪ್ರಭನೆಂಬ ದೇವನಾಯಿತು. ಪ್ರೀತಿವರ್ಧನನಿಗೆ ಆ ಬೆಟ್ಟದ ಬುಡದಲ್ಲಿದ್ದ ಕನಕ ನಿಧಿಯು ಪ್ರಾಪ್ತವಾಯಿತು. ಅವನೂ ಕೂಡ ಮುನಿಗಳಿಂದ ದೀಕ್ಷೆಯನ್ನು ಪಡೆದನು. ದಿವಾಕರ ಪ್ರಭದೇವನು ಮುಂದೆ ವಜ್ರಜಂಘನ ಮಂತ್ರಿ ಮತಿವರನಾಗಿಯೂ ಆದಿತೀರ್ಥಂಕರನ ಮಗ ಭರತಚಕ್ರಿಯಾಗಿಯೂ ಜನಿಸಿದನು.

ಈ ಕಥೆಯು ಜೈನ ಕಥಾಮಾದರಿಯಲ್ಲಿ ಬರುವ ಹಲವಾರು ಆಶಯಗಳನ್ನು ಹೊಂದಿದೆ. ನಿಧಿಯನ್ನು ಕಾಯುವ ವಿಚಾರ, ಶಕುನ, ಮುನಿಗಳಿಗೆ ಆಹಾರದಾನ ನೀಡುವುದರಿಂದ ಪುಣ್ಯಫಲಪ್ರಾಪ್ತಿ, ಜಾತಿಸ್ಮರಣೆ- ಈ ಆಶಯಗಳು ಕಂಡುಬರುತ್ತವೆ.

**ನಿರ್ನಾಮಿಕೆಯ ಕಥೆ:** (ಶ್ರೀಮತಿಯು ತನ್ನ ಜನ್ಮಾಂತರವನ್ನು ನೆನೆದು ಪಂಡಿತೆಗೆ ನಿರೂಪಿಸುವ ಭವಾಂತರದ ಕಥೆ) (೩ನೇ ಅಧ್ಯಾಯ).

ಗಂಧಿಲ ವಿಷಯದಲ್ಲಿ ಪಾಟಲೀ ಗ್ರಾಮ. ಅಲ್ಲಿ ನಾಗದತ್ತನೆಂಬ ವ್ಯಾಪಾರಿ ಇದ್ದನು. ಅವನ ಹೆಂಡತಿ ವಸುದತ್ತೆ. ಅವರಿಗೆ ನಂದ, ನಂದಿಮಿತ್ರ, ನಂದಿಷೇಣ, ವರಸೇನ ಮತ್ತು ಜಯಸೇನರೆಂಬ ಐದು ಮಂದಿ ಗಂಡುಮಕ್ಕಳು. ಮದನಕಾಂತೆ,

ಶ್ರೀಕಾಂತೆ ಎಂಬ ಹೆಣ್ಣು ಮಕ್ಕಳೂ ಇದ್ದರು. ಕೊನೆಯವಳಾಗಿ ನಿರ್ನಾಮಿಕೆ ತಾಯಿಯ ಗರ್ಭವನ್ನು ಸೇರಿದಾಗ ಜನ್ಮಾಂತರದ ಉಗ್ರಕರ್ಮದ ಫಲವಾಗಿ ಆಕೆಯ ಒಡಹುಟ್ಟಿದವರೂ ತಂದೆಯೂ ಬೇರೆ ಬೇರೆ ಕಾರಣಗಳಿಂದ ಸತ್ತುಹೋದರು. ಅರಸನು ಇವರಲ್ಲಿದ್ದ ಹಣವನ್ನೆಲ್ಲಾ ಲೂಟಿಮಾಡಿದನು. ತಾಯಿಯೂ, ಅಜ್ಜಿಯೂ ಪರರ ಊಳಿಗವನ್ನು ಮಾಡುತ್ತ ಜೀವಿಸುತ್ತಿದ್ದರು. ಮಗು ಹುಟ್ಟುತ್ತಲೇ ದುರ್ಗಂಧಮಯವಾಗಿ ಹುಟ್ಟಿತು. ಆ ಶಿಶುವಿನ ದುರ್ಗಂಧಕ್ಕೆ ಹೇಸಿ ಊರಿನವರೆಲ್ಲರೂ ಅದನ್ನು ದೂರೀಕರಿಸಿದರು. ತಾಯಿ- ಅಜ್ಜಿಯರು ಆ ಮಗುವನ್ನು ಸ್ಮಶಾನದಲ್ಲಿ ಬಚ್ಚಿಟ್ಟು, ಚಿಂದಿ ಬಟ್ಟೆಯನ್ನು ಮುಚ್ಚಿ, ತಿರಿದು ತಂದ ಕೂಳಿನಿಂದ ಆ ಮಗುವನ್ನು ಸಾಕುತ್ತಿದ್ದರು. ಹೆಸರಿಲ್ಲದ ಆ ಮಗು 'ನಿರ್ನಾಮಿಕೆ' ಎಂದು ಕರೆಸಿಕೊಂಡು ಬೆಳೆಯಿತು. ತಾಯಿ - ಅಜ್ಜಿಯರೂ ಕಾಲಕ್ರಮದಲ್ಲಿ ಸತ್ತರು.

ಒಮ್ಮೆ ಅಂಬರ ತಿಲಕವೆಂಬ ಬೆಟ್ಟದ ಮೇಲೆ ಪಿಹಿತಾಸ್ರವರೆಂಬ ಮುನಿಗಳನ್ನು ಕಂಡು ಅವರ ದರ್ಶನಭಾಗ್ಯವನ್ನು ಪಡೆದಳು. ತನ್ನ ಪೂರ್ವವೃತ್ತಾಂತವನ್ನು ತಿಳಿದುಕೊಂಡಳು. ತಾನು ಧನಶ್ರೀಯಾಗಿದ್ದಾಗ ಮಾಡಿದ ಪಾಪಕಾರ್ಯವೇ ಈ ಭವದ ಈ ಸ್ಥಿತಿಗೆ ಕಾರಣವೆಂದು ತಿಳಿದುಕೊಂಡಳು. ಮುಂದೆ ಸದ್ಗತಿ ಹೊಂದಲು ವ್ರತಶೀಲೆಯಾದಳು. ಅನಂತರ ಈಶಾನ ಕಲ್ಪದಲ್ಲಿ ಸ್ವಯಂಪ್ರಭೆಯೆಂಬ ದೇವಿಯಾಗಿ, ಅಲ್ಲಿಂದ ಶ್ರೀಮತಿಯಾಗಿ ಜನಿಸಿದಳು.

ದುಷ್ಕರ್ಮ-ದುರ್ವಿಧಿಯ ಫಲದಿಂದಾಗಿ ತಂದೆ ತಾಯಿಗಳನ್ನು, ಬಂಧು-ಬಾಂಧವರನ್ನು ಕಳೆದುಕೊಳ್ಳುವುದು, ಹುಟ್ಟಿನಲ್ಲಿ ದುರ್ಗಂಧತೆ ಅಥವಾ ಮತ್ತಾವುದೇ ಅನಿಷ್ಟಕಾರಕ ಅಂಶವನ್ನು ಪಡೆದುಕೊಳ್ಳುವುದು, ಸ್ಮಶಾನದಲ್ಲಿ ಮಗುವನ್ನು ಬೆಳೆಸುವುದು - ಇವೆಲ್ಲಾ ಕಥಾಶಯಗಳಾಗಿವೆ. ಮಹಾಭಾರತದಲ್ಲಿ ಬರುವ ಮತ್ಸ್ಯಗಂಧಿಯ ಕಥೆಯಲ್ಲಿ ಅವಳು ದುರ್ಗಂಧತ್ವವನ್ನು ಪಡೆದುಕೊಂಡದ್ದುದರ ಬಗೆಗೆ ಹೇಳುತ್ತದೆ. ಸ್ಮಶಾನದಲ್ಲಿ ಮಗುವನ್ನು ಬೆಳೆಸಿದರೆಂಬ ಆಶಯಕ್ಕೆ ಕರಕಂಡುವಿನ ಕಥೆ ಉದಾಹರಣೆಯಾದರೆ, ದುರ್ವಿಧಿಯ ಕಷ್ಟ ಕೋಟಲೆಗೆ ಚಂದ್ರಹಾಸನ ಕಥೆ ಉದಾಹರಣೆಯಾಗಿದೆ.

ಜಿನಸೇನರ ಪೂರ್ವಪುರಾಣಕ್ಕಿಂತ ಆದಿಪುರಾಣದಲ್ಲಿ ನಿರ್ನಾಮಿಕೆಯ ಕಥೆ ಆಕೆ ಪಟ್ಟ ಹಲವಾರು ಬವಣೆಗಳ ವಿವರಗಳೊಂದಿಗೆ ಬರುತ್ತದೆ. ಪಂಪನು ಬೇರೆ

ಮೂಲಗಳಿಂದಲೋ ಅಥವಾ ಪ್ರಚಲಿತವಿದ್ದ ಕಥಾಶಯಗಳಿಂದಲೋ ಈ ಕಥೆಯಲ್ಲಿ ಆ ವಿವರಗಳನ್ನು ತಂದಿರಬಹುದು. ನಾಗರಾಜನ ಪುಣ್ಯಾಸ್ರವದಲ್ಲಿ ಆಕೆಯ ಮೈಯ ದುರ್ಗಂಧದ ವಿಷಯವಾಗಲಿ, ಆಕೆಯನ್ನು ಸ್ಮಶಾನದಲ್ಲಿ ಬಚ್ಚಿಟ್ಟು ಬೆಳೆಸಿದ ವಿಷಯವಾಗಲಿ ಬರುವುದಿಲ್ಲ; ನಿರ್ನಾಮಿಕೆಯ ಪೂರ್ವಭವದ ಹೆಸರು ನಾಗಶ್ರೀ ಎಂದು ಬರುತ್ತದೆ. ಆದಿಪರಮೇಶ್ವರನ ಯಕ್ಷಗಾನದಲ್ಲಿ ಕಥೆಗೆ ಆದಿಪುರಾಣದ ಚೌಕಟ್ಟೇ ಇದ್ದರೂ ಕೆಲವು ಜಾನಪದೀಯವೆಂಬಂತಹ ವರ್ಣನಾಂಶಗಳನ್ನು ಸೇರಿಸಿದ್ದಾನೆ. ಎಲ್ಲರನ್ನೂ ಕಳೆದುಕೊಂಡ ನಿರ್ನಾಮಿಕ ಒಬ್ಬೊಂಟಿಗಳಾಗಿ ಪುರದ ಬಳಿಗೆ ಬಂದಾಗ-

'ಗಂಟು ಮೂಗಿನ ಮೆಳ್ಳೆಗಣ್ಣಿನ ಅಂಟು ಹುಬ್ಬಿನ ಜೋಲುದುಟಿಯ ಬಾಗಿದ ಬೆನ್ನಿನ ಇವಳಿಂದ ಮೈಯ ದುರ್ಗಂಧ ಇಟ್ಟಣಿಸಲು, ಕಂಡವರು ಇವಳಿಗೆ ಕಲ್ಲಿಗಿಂದ ಹೊಡೆದರು. ಕೆಟ್ಟ ಪೀಡೆ, ಪಿಶಾಚ ಬಂತೆಂದು ಈಕೆಯನ್ನು ಅಟ್ಟಿದರು. ಇವಳು ದಾರಿಕಾಣದೆ ತಿನ್ನುವುದಕ್ಕಿಲ್ಲದೆ ನೊಂದಳು' (ಪರಿಚ್ಛೇದ iii) ಎಂಬ ವಿವರವು ದೊರೆಯುತ್ತದೆ. ಈ ಭಾಗದಲ್ಲಿ ಕವಿ ಜನಪದರ ಪ್ರತಿಕ್ರಿಯೆಯನ್ನು, ಅವರ ಮನೋಧರ್ಮವನ್ನು ಚೆನ್ನಾಗಿ ಹಿಡಿದಿಟ್ಟಿದ್ದಾನೆ. ಜನಪದ ಕಲಾಸಾಹಿತ್ಯವಾದ ಯಕ್ಷಗಾನ ಕೃತಿಯಲ್ಲಿ ಇಂತಹ ಅಭಿವ್ಯಕ್ತಿ ಸಹಜವಾಗಿಯೇ ಮೂಡಿಬರುತ್ತದೆ. ಉಳಿದ ಕಾವ್ಯಗಳಾದ ಚಾವುಂಡರಾಯ ಪುರಾಣ ಮತ್ತು ಹಸ್ತಿಮಲ್ಲನ ಪೂರ್ವಪುರಾಣಗಳಲ್ಲಿ ಈ ಕಥೆ ರೇಖಾಮಾತ್ರವಾಗಿ ಕಂಡುಬರುತ್ತದೆ.

**ಚಿತ್ರಪಟ ವೃತ್ತಾಂತ:** ಚಿತ್ರಪಟದ ಚಿತ್ರಣ ತನ್ಮೂಲಕ ವಿರಹಿಗಳ ಮಿಲನ ಈ ಆಶಯವನ್ನು ಶ್ರೀಮತಿ ವಜ್ರಜಂಘರ ಪ್ರಸಂಗದಲ್ಲಿ ಕಾಣಬಹುದು (೩ನೇ ಅಧ್ಯಾಯ):

ಶ್ರೀಮತಿಯು ಬಿಡಿಸಿದ ಚಿತ್ರಪಟವನ್ನು ತೆಗೆದುಕೊಂಡು ಹೋಗಿ ಪಂಡಿತೆಯು ದೇವಾಲಯದಲ್ಲಿ ಹರಡಿದಳು. ಒಂದಿಬ್ಬರು ಆ ಚಿತ್ರಪಟದಲ್ಲಿ ಕಂಡ ಶ್ರೀಮತಿಯ ಸೌಂದರ್ಯಕ್ಕೆ ಮರುಳಾಗಿ ತಾವು ಹಿಂದಿನ ಜನ್ಮದಲ್ಲಿ ಆಕೆಯ ಪತಿಯಾಗಿದ್ದೆವೆಂದು ಹೇಳಿ ಮೂರ್ಛೆಹೋಗುವ ನಾಟಕವನ್ನು ಆಡಿದರು. ಆದರೆ ಪಂಡಿತೆಯು ಅವರಿಗೆ ಚಿತ್ರಪಟವನ್ನು ತೋರಿ ಕೆಲವು ರಹಸ್ಯದ ಪ್ರಶ್ನೆಗಳನ್ನು ಕೇಳಿ ಅವರು ಮೋಸಗಾರರೆಂದು ಪತ್ತೆಹಚ್ಚಿದಳು. ವಜ್ರಜಂಘನು ಆ ಚಿತ್ರಪಟವನ್ನು ಸರಿಯಾಗಿ

ಅರ್ಥಮಾಡಿಕೊಂಡು ಪ್ರತಿಯಾಗಿ ತಾನೂ ಒಂದು ಚಿತ್ರವನ್ನು ಪಟದಲ್ಲಿ ಬರೆದು ಕಳುಹಿಸಿದನು ಎಂಬಲ್ಲಿ ಜಾನಪದೀಯ ಆಶಯ -ಧೋರಣೆಗಳಿವೆ. ಉಳಿದ ಆದಿತೀರ್ಥಂಕರ ಕನ್ನಡ ಕಾವ್ಯಗಳಲ್ಲಿಯೂ ಸಹ ಈ ವೃತ್ತಾಂತವು ಎಡೆಮಾಡಿಕೊಂಡಿದೆ.

**ಅಕ್ಷಯ ತೃತೀಯೆ:** (ಹತ್ತನೇ ಅಧ್ಯಾಯ) ಹಬ್ಬ ಹರಿದಿನಗಳ ಹಿನ್ನೆಲೆಯಲ್ಲಿ ಬೆಳೆದುಬಂದಿರುವ ರೂಢಿಗತ ಅಂಶಗಳು ಜಾನಪದ ವಸ್ತು ವಿಷಯಕ್ಕೆ ಸೇರುತ್ತವೆ. ಪಂಪನು ನಿರೂಪಿಸುವ, ಜಿನಸೇನರ ಪೂರ್ವಪುರಾಣದಲ್ಲಿ ಕಂಡುಬಾರದ 'ಅಕ್ಷಯ ತೃತೀಯೆ'ಯ ಪರ್ವದಿನದ ಹಿನ್ನೆಲೆಯ ವಿವರವು ಸಾಂಸ್ಕೃತಿಕ ಐತಿಹ್ಯವನ್ನೊಳ-ಗೊಂಡಿದೆ. ಜೈನ ಜನಾಂಗದಲ್ಲಿ 'ಅಕ್ಷಯ ತೃತೀಯೆ' ಎಂಬುದು ಆಹಾರದಾನ ಪ್ರವರ್ತನೆಯನ್ನು ರೂಢಿಗೆ ತಂದ ಪವಿತ್ರವಾದ ದಿನ. ಅದರ ಹಿನ್ನೆಲೆ ಹೀಗಿದೆ:

ತಪೋನಿರತನಾಗಿದ್ದ ವೃಷಭನಾಥನು ಆರು ತಿಂಗಳ ನಂತರ ಚರಿಗೆಗಾಗಿ ಹೊರಟನು. ಆದರೆ ದಾನವನ್ನು ನೀಡುವ ವಿಧಾನ ಜನರಿಗೆ ತಿಳಿದಿರಲಿಲ್ಲ. ಜನರೇನೋ ತಮ್ಮನ್ನು ತೊರೆದು ಹೋದ ರಾಜ ಮರಳಿ ಬಂದನೆಂದು ಸಂಭ್ರಮಿಸಿದರು. ವಸ್ತ್ರಾಭರಣಗಳನ್ನು, ವಿವಿಧ ರೀತಿಯ ಭಕ್ಷ್ಯಭೋಜ್ಯಗಳನ್ನು ಸ್ವಾಮಿಗೆ ನೀಡಲು ಮುಂದಾದರು; ಮತ್ತೆ ಆರುತಿಂಗಳು ಚರ್ಯಾಪರ್ಯಟನವಾಯಿತು. ಕೊನೆಗೆ ಹಸ್ತಿನಾಪುರವನ್ನು ಆಳುವ ಕುರುವಂಶ ಶ್ರೇಷ್ಠನಾದ ಸೋಮಪ್ರಭನ ತಮ್ಮನಾದ ಶ್ರೇಯಾಂಸನು ದಿಗಂಬರ ರೂಪದಲ್ಲಿದ್ದ ವೃಷಭನನ್ನು ನೋಡಿ ಜಾತಿಸ್ಮರಣೆಯನ್ನು ಹೊಂದಿದನು. ತಾನು ಶ್ರೀಮತಿಯಾಗಿದ್ದಾಗ ವಜ್ರಜಂಘನೂ ತಾನೂ ಸರ್ಪಸರೋವರದ ಬಳಿ ಚಾರಣಯುಗಳಕ್ಕೆ ವಿಧಿವತ್ತಾಗಿ ಆಹಾರವನ್ನು ನೀಡಿದ ಭವಸಂಸ್ಕಾರವು ನೆನಪಿಗೆ ಬಂದಿತು. ನವವಿಧ ಭಕ್ತಿಯಿಂದ ವೃಷಭನಾಥನಿಗೆ ಶ್ರೇಯಾಂಸನು ಇಕ್ಷುರಸವನ್ನು ದಾನವಾಗಿತ್ತನು. ಶ್ರೀಧಾನತೀರ್ಥವು ಶ್ರೇಯಾಂಸನಿಂದ ಉಂಟಾದ ಆ ಪುಣ್ಯದಿನವೇ "ಅಕ್ಷಯ ತೃತೀಯೆ" ಎಂದು ಭೂಮಿಯಲ್ಲಿ ಪ್ರಸಿದ್ಧಗೊಂಡಿತು.

ಉತ್ತರಕಾಲೀನ ಆದಿತೀರ್ಥಂಕರರ ಚರಿತೆಯಲ್ಲಿಯೂ ಸಹ ಈ ಉಲ್ಲೇಖ ದೊರೆಯುತ್ತದೆ.

ಶಾಂತಿಪುರಾಣ:

ಕಥಾಸಾರ: (ಅನುಕ್ರಮ ಭವಾವಳಿಯೊಂದಿಗೆ)

ರತ್ನಪುರದ ಅರಸು ಶ್ರೀಷೇಣ. ಸಿಂಹನಂದೆ ಮತ್ತು ಅನಿಂದಿತೆ ಎಂಬುವರು ಆತನ ರಾಣಿಯರು. ಇವರಲ್ಲಿ ರಾಜನಿಗೆ ಇಂದ್ರ, ಉಪೇಂದ್ರರೆಂಬ ಇಬ್ಬರು ಪುತ್ರರಾದರು. ಒಮ್ಮೆ ಪುರೋಹಿತನ ಮಗಳಾದ ಸತ್ಯಭಾಮೆಯು ತನ್ನ ಗಂಡನಾದ ಕಪಟ ಬ್ರಾಹ್ಮಣ ಕಪಿಲನಿಂದ ರಕ್ಷಿಸಿಕೊಳ್ಳಲು ಶ್ರೀಷೇಣನ ಮೊರೆಹೊಕ್ಕಳು. ಹಿರಿಯ ಮಗನ ಹೆಂಡತಿಯ ದಾಸಿಯಾದ ವಸಂತಸೇನೆಗೆ ಉಪೇಂದ್ರನು ಮರುಳಾದನು. ಇದರಿಂದ ಅಣ್ಣ-ತಮ್ಮಂದಿರಲ್ಲಿ ಕಾದಾಟ ನಡೆಯಿತು. ವಸಂತಸೇನೆ ಪೂರ್ವಭವದಲ್ಲಿ ಇವರಿಗೆ ಒಡಹುಟ್ಟಿದವಳಾಗಬೇಕೆಂದು ತಿಳಿದು ಪಶ್ಚಾತ್ತಾಪಗೊಂಡು ಮುನಿಗಳ ಬಳಿ ದೀಕ್ಷಿತರಾದರು. ಶ್ರೀಷೇಣನು ಮಕ್ಕಳ ಅಗಲಿಕೆ ಸಹಿಸಲಾರದೆ ವಿಷಪೂರಿತ ಕನ್ನೈದಿಲೆಯನ್ನು ಆಘ್ರಾಣಿಸಿ ಅಸುನೀಗಿದನು. ಆತನ ರಾಣಿಯರು ಹಾಗೂ ಸತ್ಯಭಾಮೆ - ಇವರೂ ಕೂಡ ಅವನನ್ನೇ ಅನುಸರಿಸಿದರು. ಅವರೆಲ್ಲರೂ ಭೋಗಭೂಮಿಯಲ್ಲಿ ಜನಿಸಿದರು. ಶ್ರೀಷೇಣ ಸಿಂಹನಂದೆಯರು ಆರ್ಯ ದಂಪತಿಗಳಾದರು. ಅನಿಂದಿತೆಯು ಪುರುಷ ಜನ್ಮವನ್ನು ಪಡೆದು ಆರ್ಯನಾದಳು, ಸತ್ಯಭಾಮೆ ಆತನ ಪತ್ನಿಯಾದಳು. ಮುಂದೆ ಅವರೆಲ್ಲರೂ ದೇವಗತಿಯಲ್ಲಿ ಜನಿಸಿದರು. ಶ್ರೀಷೇಣನು ಶ್ರೀದೇವನಾಗಿಯೂ ಸಿಂಹನಂದೆಯು ಶ್ರೀಪ್ರಭೆಯೆಂಬ ಆತನ ಹೆಂಡತಿಯಾಗಿಯೂ ಜನಿಸಿದರು. ಆರ್ಯದಂಪತಿಗಳಾಗಿ ಜನಿಸಿದ ಅನಿಂದಿತಾರ್ಯ - ಸತ್ಯಭಾಮೆಯರು ಅಮಿತಪ್ರಭ ಮತ್ತು ಸುಪ್ರಭೆಯರಾದರು. ಮುಂದೆ ಶ್ರೀಧರ ದೇವನು ಅಮಿತ ತೇಜನಾಗಿಯೂ ಶ್ರೀಪ್ರಭೆಯು ಜ್ಯೋತಿಪ್ರಭೆಯೆಂಬ ಆತನ ಪತ್ನಿಯಾಗಿಯೂ ಜನಿಸಿದರು. ಅಮಿತಪ್ರಭ, ಶ್ರೀಪ್ರಭೆಯರು ಶ್ರೀವಿಜಯ ಸುತಾರೆಯರಾದರು. ಕಪಿಲನು ಸತ್ತು ಸಂಸಾರ ಚಕ್ರದಲ್ಲಿ ಸುತ್ತುತ್ತಿದ್ದು ಅಶನಿಘೋಷನಾಗಿ ಜನಿಸಿದನು.

ರಥನೂಪುರ ಎಂಬ ಪಟ್ಟಣ, ಜ್ವಲನಜಟಿ ಅಲ್ಲಿಯ ರಾಜ. ವಾಯುವೇಗೆ ಆತನ ಪತ್ನಿ. ಇವರಿಗೆ ಅರ್ಕಕೀರ್ತಿ, ಸ್ವಯಂಪ್ರಭೆ ಎಂಬ ಇಬ್ಬರು ಮಕ್ಕಳು. ಅರ್ಕಕೀರ್ತಿಯ ಪತ್ನಿ ಜ್ಯೋತಿರ್ಮಾಲೆ ಪೌದನ ಪುರದ ದೊರೆಯಾದ ಪ್ರಜಾಪತಿ ರಾಜನ ಮಗ ತ್ರಿಪೃಷ್ಟನಿಗೆ ಸ್ವಯಂಪ್ರಭೆಯನ್ನು ಕೊಟ್ಟು ಮದುವೆ ಮಾಡಿದಾಗ,

ಅರ್ಧಚಕ್ರಿ ಅಶ್ವಗ್ರೀವನು ಕೋಪಗೊಂಡು ಯುದ್ಧಕ್ಕೆ ಬಂದು ತ್ರಿಪೃಷ್ಠನೊಂದಿಗೆ ಹೋರಾಡಿ ಸತ್ತನು. ಕೆಲವು ಕಾಲದ ನಂತರ ಜ್ವಲನಜಟಿ ಹಾಗೂ ಪ್ರಜಾಪತಿ ರಾಜರು ವೈರಾಗ್ಯಪರರಾಗಿ ದೀಕ್ಷೆವಹಿಸಿದರು. ಅರ್ಕಕೀರ್ತಿಗೆ ಅಮಿತತೇಜನೆಂಬ ಮಗನೂ ಜನಿಸಿದನು. ತ್ರಿಪೃಷ್ಠ- ಸ್ವಯಂಪ್ರಭೆಯರಿಗೆ ಶ್ರೀವಿಜಯ, ವಿಜಯ ಎಂಬ ಪುತ್ರರೂ ಜ್ಯೋತಿಪ್ರಭೆ ಎಂಬ ಮಗಳೂ ಜನಿಸಿದರು. ತ್ರಿಪೃಷ್ಠನು ಕಾಲಾನುಕ್ರಮದಲ್ಲಿ ಸತ್ತು ಅಧೋಲೋಕಕ್ಕೆ ಹೋದನು. ಜ್ಯೋತಿಪ್ರಭೆಯು ಸ್ವಯಂವರದಲ್ಲಿ ಅಮಿತತೇಜನನ್ನು ವರಿಸಿದಳು. ಸುತಾರೆಯು ಶ್ರೀವಿಜಯನನ್ನು ವರಿಸಿದಳು. ಹೀಗಿರಲು ನಿಮಿತ್ತಜ್ಞನೊಬ್ಬನಿಂದ ಶ್ರೀವಿಜಯನಿಗೆ ಒದಗಿಬರಲಿರುವ ಗಂಡಾಂತರವು ತಿಳಿದು ಅದು ಉಪಾಯಾಂತರದಿಂದ ತಪ್ಪಿತು. ಅವನು ಒಮ್ಮೆ ಸುತಾರೆಯೊಡನೆ ವನವಿಹಾರಕ್ಕೆ ಹೋಗಿದ್ದಾಗ ಆಕೆಯನ್ನು ಕಪಿಲನಾಗಿದ್ದ ಅಶನಿಘೋಶನು ಅಪಹರಿಸಿದನು. ಅಶನಿಘೋಶನನ್ನು ಸೋಲಿಸಲಾಯಿತು. ಕೇವಲಿಗಳಿಂದ ಧರ್ಮಶ್ರವಣ ಮಾಡಿದ ಅಶನಿಘೋಶನು ತನ್ನ ಪೂರ್ವಭವ ವೃತ್ತಾಂತಗಳನ್ನು ತಿಳಿದು ದೀಕ್ಷೆಯನ್ನು ಕೈಗೊಂಡನು. ಅಮಿತತೇಜ-ಶ್ರೀವಿಜಯರು ಶ್ರಾವಕವ್ರತವನ್ನು ಸ್ವೀಕರಿಸಿದರು. ಆಯುಷ್ಯಾಂತದಲ್ಲಿ ಸತ್ತು ಅಮಿತತೇಜನು ಮಣಿಚೂಳನೆಂಬ ದೇವನಾದನು. ಶ್ರೀವಿಜಯನು ಸಾಮಾನಿಕ ದೇವನಾದನು. ಅಲ್ಲಿಂದ ಚ್ಯುತರಾಗಿ ಅವರು ಅಪರಾಜಿತ ಮತ್ತು ಅನಂತವೀರ್ಯರೆಂಬ ಬಲದೇವ-ವಾಸುದೇವರಾಗಿ ಹುಟ್ಟಿದರು.

ನಾರದನ ಸಂಚಿನಿಂದ ದಮಿತಾರಿ ವಿದ್ಯಾಧರ ಚಕ್ರವರ್ತಿಯು ಬರ್ಬರ-ಕಿರಾತೆಯರೆಂಬ ಗಾಯಕಿಯರನ್ನು ತನ್ನಲ್ಲಿಗೆ ಕಳುಹಿಸಿಕೊಡಬೇಕೆಂದು ಅಪರಾಜಿತನಿಗೆ ಹೇಳಿಕಳುಹಿಸಿದನು. ಅಪರಾಜಿತ-ಅನಂತವೀರ್ಯರು ಬರ್ಬರ - ಕಿರಾತೆಯರ ರೂಪವನ್ನು ಧರಿಸಿಕೊಂಡು ತಾವೇ ಅಲ್ಲಿಗೆ ಹೋಗಿ, ದಮಿತಾರಿಯ ಮಗಳಾದ ಕನಕಶ್ರೀಯನ್ನು ಅಪಹರಿಸಿಕೊಂಡು ಬಂದರು. ದಮಿತಾರಿ ಸತ್ತನು. ಕನಕಶ್ರೀ ದೀಕ್ಷಿತಳಾದಳು. ಮಗಳಾದ ಸುಮತಿಯು ತನ್ನ ಸ್ವಯಂವರದ ಕಾಲದಲ್ಲಿ, ಪೂರ್ವಜನ್ಮದಲ್ಲಿ ತನಗೆ ಅಕ್ಕನಾಗಿ ಇದೀಗ ಖೇಚರಿಯಾಗಿದ್ದ ಜೀವದಿಂದ ಎಚ್ಚರಿಕೆಯ ನುಡಿಗಳನ್ನು ಕೇಳಿ ವೈರಾಗ್ಯಪರಳಾದಳು. ಅನಂತವೀರ್ಯನು ಒಂದು ದಿನ ನಿದ್ದೆಯಲ್ಲಿ ಮರಣಹೊಂದಿದನು. ಅದನ್ನು ಕಂಡು ಅಪರಾಜಿತನು ದೀಕ್ಷೆಯನ್ನು ಕೈಗೊಂಡನು. ತಪೋಬಲದಿಂದ ಅಚ್ಯುತೇಂದ್ರನಾದನು. ಅನಂತವೀರ್ಯನು

ನರಕವಾಸವನ್ನು ಪಡೆದು, ಅನಂತರದಲ್ಲಿ ಮೇಘನಾದನೆಂಬ ಖೇಚರನಾದನು. ಖೇಚರನಿಗೆ ಅಚ್ಯುತೇಂದ್ರನನ್ನು ಕಂಡಾಗ ಸ್ನೇಹದ ಭಾವ ಉಂಟಾಯಿತು. ಅವರು ತಮ್ಮ ಪೂರ್ವಜನ್ಮದ ಬಗೆಗೆ ಅರಿತುಕೊಂಡರು. ಮೇಘನಾದನು ತನ್ನ ಮಗನಿಗೆ ಪಟ್ಟವನ್ನು ಕಟ್ಟಿ ದೀಕ್ಷಿತನಾಗಿ ಆಯುಷ್ಯಾಂತದಲ್ಲಿ ಸತ್ತು ಅಚ್ಯುತೇಂದ್ರ ಕಲ್ಪದಲ್ಲಿ ಪ್ರತೀಂದ್ರನಾದನು.

ಅಪರಾಜಿತನಾಗಿದ್ದ ಅಚ್ಯುತೇಂದ್ರನು ಸತ್ತು ವಜ್ರಾಯುಧನೆಂಬ ರಾಜನಾದನು. ಪ್ರತೀಂದ್ರನಾಗಿದ್ದವನು ವಜ್ರಾಯುಧನ ಮಗ ಸಹಸ್ರಾಯುಧನಾಗಿ ಜನಿಸಿದನು. ಸಹಸ್ರಾಯುಧನಿಗೆ ಕನಕಶಾಂತಿ ಎಂಬ ಮಗನಾದನು.

ವಜ್ರಾಯುಧನು ವಿದ್ಯುದಂಷ್ಟ್ರನೆಂಬುವನ ಕಡೆಯಿಂದ ಒದಗಿ ಬಂದ ನಾಗಪಾಶವನ್ನು ಕಿತ್ತೊಗೆದು ಆತನನ್ನು ಸೋಲಿಸಿದನು. ಅವನು ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಿರುವಾಗ ವಟುವೇಷಧಾರಿ ದೇವನೊಬ್ಬನು ಅವನ ಬಳಿಗೆ ಬಂದು ಜಿನಧರ್ಮವನ್ನು ವಿರೋಧಿಸಿ ವಾದ ಮಾಡಿದನು. ವಜ್ರಾಯುಧನು ಆತನನ್ನು ಪರಾಭವಗೊಳಿಸಿದನು. ಕನಕಶಾಂತಿಗೆ ಕನಕಮಾಲೆ ಮತ್ತು ಸಂತಸಸೇನೆಯೆಂಬುವರನ್ನು ತಂದು ಮದುವೆ ಮಾಡಿದನು. ಕಾಲಕ್ರಮದಲ್ಲಿ ಕನಕಶಾಂತಿ ವೈರಾಗ್ಯಪರನಾಗಿ ಕೇವಲಿಯಾದನು. ಮುಂದೆ ವಜ್ರಾಯುಧಾದಿಗಳೂ ಸಹ ದೀಕ್ಷಿತರಾಗಿ ಸತ್ತು ಅಹಮಿಂದ್ರರಾದರು. ಅಲ್ಲಿಂದ ಮುಂದೆ ವಜ್ರಾಯುಧ ಸಹಸ್ರಾಯುಧರು ಘನರಥನೆಂಬ ರಾಜನಿಗೆ ಮೇಘರಥ-ದೃಢರಥರೆಂಬ ರಾಜಪುತ್ರರಾಗಿ ಜನಿಸಿದರು. ಮೇಘರಥನು ತನ್ನ ಅವಧಿಜ್ಞಾನ ಶಕ್ತಿಯನ್ನು ಕೋಳಿಗಳ ಕಾಳಗದ ಕಥೆ ಹಾಗೂ ಅವುಗಳ ಜನ್ಮಾಂತರ ಕಥೆಯನ್ನು ನಿರೂಪಿಸಿ ಪ್ರಕಟಗೊಳಿಸಿದನು. ಹಿಂದೆ ಕೋಳಿಗಳಾಗಿ ಕಾದಾಡಿದ್ದ ಎರಡು ಜೀವಗಳು ಸಂನ್ಯಸನ ಸ್ವೀಕರಿಸಿ ವ್ಯಂತರದೇವತೆಗಳಾದವು. ಅವು ಮೇಘರಥನನ್ನು ವಿಮಾನದಲ್ಲಿ ಕುಳ್ಳಿರಿಸಿ ಮಾನುಷೋತ್ತರ ಲೋಕವನ್ನು ತೋರಿಸಿದವು. ತನಗೆ ತೊಂದರೆ ಕೊಟ್ಟ ಖೇಚರನೊಬ್ಬನನ್ನು ನಾಶಮಾಡಲು ಹೋದಾಗ ಆತನ ಪತ್ನಿಯ ಬೇಡಿಕೆಯ ಮೇರೆಗೆ ಮೇಘರಥನು ಬಿಡುಗಡೆ ಮಾಡಿದನು.

ಹೇಮರಥನೆಂಬ ಖೇಚರನು ಭವಚಕ್ರದಲ್ಲಿ ಸುತ್ತುತ್ತಿದ್ದು ಮೇಘರಥನನ್ನು ಪರೀಕ್ಷಿಸಲು ಬಂದು ಗಿಡುಗ - ಪಾರಿವಾಳಗಳಲ್ಲಿ ಹೊಕ್ಕು ಮಾತನಾಡಿಸಿದನು.

ಪಾರಿವಾಳವು ತನ್ನನ್ನು ಅಟ್ಟಿಸಿಕೊಂಡು ಬಂದ ಗಿಡುಗದಿಂದ ಪಾರುಮಾಡಬೇಕೆಂದು ಮೇಘರಥವನ್ನು ಕೇಳಿಕೊಂಡಾಗ ಮೇಘರಥನು ಅವುಗಳ ಪೂರ್ವಜನ್ಮ ವೃತ್ತಾಂತವನ್ನು ತಿಳಿಸಿದನು. ಹೇಮರಥನು ತನ್ನ ಪೂರ್ವಜನ್ಮದ ವೈರವನ್ನು ತೊರೆದನು. ಗಿಡುಗ - ಪಾರಿವಾಳಗಳು ಮುಂದೆ ಭವನವಾಸಿ ದೇವತೆಗಳಾದವು.

ಮೇಘರಾಜನು ಚಾರಣಮುನಿಗಳಿಗೆ ಆಹಾರದಾನವನ್ನು ನೀಡಿದನು. ನಂದೀಶ್ವರ ಮಹಾಪೂಜೆಯನ್ನು ಮಾಡಿ ಉಪವಾಸವಿದ್ದು ಪ್ರತಿಮಾಯೋಗದಲ್ಲಿ ಧ್ಯಾನಾರೂಢನಾಗಿದ್ದಾಗ ಈಶಾನೇಂದ್ರನು ಆತನನ್ನು ಹೊಗಳಿದನು. ಅದನ್ನು ಕೇಳಿ ಈರ್ಷೆಗೊಂಡ ದೇವಾಂಗನೆಯರಿಬ್ಬರು ಆತನಿಗೆ ತಪೋಭಂಗ ಮಾಡಲು ಹೊರಟು ವಿಫಲರಾಗಿ ಹಿಂದಿರುಗಿದರು.

ಮತ್ತೊಮ್ಮೆ ಈಶಾನೇಂದ್ರನು ಮೇಘರಥನ ಪತ್ನಿಯ ಸೌಂದರ್ಯವನ್ನು ಹೊಗಳಲು ಆ ದೇವಿಯರಿಬ್ಬರು ಆಕೆಯನ್ನು ಕಾಣಬಯಸಿ ಅದೃಶ್ಯಗೊಂಡು ಬಂದು ಆಕೆಯನ್ನು ಸ್ನಾನಗೃಹದಲ್ಲಿ ನೋಡಿದರು. ಮತ್ತೆ ಪ್ರತ್ಯಕ್ಷವಾಗಿ ಅವಳನ್ನು ನೋಡಬಯಸಿ ಅರಮನೆಯಲ್ಲಿ ನಿಂತು ಹೇಳಿಕಳುಹಿಸಿದರು. ಅಲಂಕರಿಸಿಕೊಂಡು ಬಂದ ರಾಣಿಯನ್ನು ಕಂಡು ಮೊದಲಿನ ರೂಪಾತಿಶಯ ಈಗ ಅವಳಲ್ಲಿ ಕಂಡುಬಾರದುದನ್ನು ತಿಳಿಸಿದರು. ತಾವು ಅದೃಶ್ಯರಾಗಿ ಆಕೆಯನ್ನು ಕ್ಷಣದ ಹಿಂದೆ ನೋಡಿದುದಾಗಿ ತಿಳಿಸಿದರು. ಮೇಘರಥನಿಗೆ ಅದೇ ವೈರಾಗ್ಯಕ್ಕೆ ಕಾರಣವಾಯಿತು. ಮೇಘರಥ - ದೃಢರಥರು ತಪೋಧಾರಿಗಳಾದರು; ಸತ್ತು ದೇವಲೋಕದಲ್ಲಿ ಜನಿಸಿದರು.

ಮೇಘರಥನಾಗಿದ್ದ ಅಹಮಿಂದ್ರನು ಮುಂದೆ ಹಸ್ತಿನಾಪುರದ ಅಶ್ವಸೇನ ರಾಜ ಹಾಗೂ ಐರಾದೇವಿಯರಿಗೆ ಶಾಂತಿನಾಥನಾಗಿ ಜನಿಸಿದನು. ವಿಶ್ವಸೇನನ ಕಿರಿಯ ರಾಣಿಗೆ ದೃಢರಥನಾಗಿದ್ದ ಅಹಮಿಂದ್ರನು ಚಕ್ರಾಯುಧನೆಂಬ ಹೆಸರಿನಿಂದ ಜನಿಸಿದನು. ಶಾಂತಿನಾಥನು ಯೌವನ ಸಂಪನ್ನನಾಗಿ ಮುಂದೆ ದಿಗ್ವಿಜಯ ಸಾಧಿಸಿ ಷಟ್ಖಂಡಾಧಿಪತಿಯಾದನು; ಅನಂತರ ಸಂಸಾರದಲ್ಲಿ ವೈರಾಗ್ಯಪಡೆದು ದೀಕ್ಷಿತನಾದನು. ತಪೋಬಲದಿಂದ ಕೇವಲಜ್ಞಾನವನ್ನು ಪಡೆದು ಮುಕ್ತಿಯನ್ನು ಹೊಂದಿದನು.

**ಶಾಂತಿಪುರಾಣದ ಉಪಕಥೆಗಳಲ್ಲಿ ಕಂಡುಬರುವ ಕಥಾಶಯಗಳು:**

ಶ್ರೀದತ್ತೆಯ ಕಥೆ (೪ನೇ ಅಧ್ಯಾಯ) (ಕನಕಶ್ರೀಯ ಪೂರ್ವಭವನ ಕಥೆ)

ಶಂಖಗ್ರಾಮ. ಅಲ್ಲಿ ದೇವಕನೆಂಬ ಒಕ್ಕಲು ಮಗ. ಅವನ ಹೆಂಡತಿ ಪೃಥ್ವಿಶ್ರೀ. ಅವರಿಗೆ ಏಳು ಹೆಣ್ಣು ಮಕ್ಕಳು. ಹಿರಿಯವಳಾದ ಶ್ರೀದತ್ತೆಯನ್ನುಳಿದು ಉಳಿದವರೆಲ್ಲರೂ ವಿಕಲಾಂಗರು. ಮೊದಲನೆಯವಳಿಗೆ ಒಂದು ಕಣ್ಣು ಕುರುಡು, ಎರಡನೆಯವಳಿಗೆ ಗೂನುಬೆನ್ನು, ಮೂರನೆಯವಳು ಕುಂಟಿ, ನಾಲ್ಕನೆಯವಳು ಹೆಳವಿ, ಐದನೆಯವಳು ಕುಷ್ಠರೋಗಿ, ಕೊನೆಯವಳು ಕುಬ್ಜೆ. ಬಡತನದ ಬೇಗೆಯಿಂದ ನರಳುತ್ತ ದೇವಕನು ಪ್ರಾಣಬಿಟ್ಟನು. ಅಂಟಿಬಂದ ಬಡತನದ ಕಷ್ಟ ಕಾರ್ಪಣ್ಯಕ್ಕೆ ಹೆದರದೆ, ಅರಿಷಡ್ವರ್ಗಗಳಂತೆ ಪೀಡಿಸುತ್ತಿದ್ದ ತಂಗಿಯರ ಕಾಟಕ್ಕೆ ಹೆದರದೆ ಶ್ರೀದತ್ತೆಯು ಸಂಸಾರವನ್ನು ನಿಭಾಯಿಸಿದಳು. ಮದುವೆಯಾಗದೆ ಕನ್ಯಾವ್ರತದಲ್ಲಿಯೇ ಉಳಿದಳು. ಒಮ್ಮೆ ತಂಗಿಯರು ಹಣ್ಣಿಗಾಗಿ ಕಾಡುತ್ತಿರಲು ಶಂಖಪರ್ವತಕ್ಕೆ ಬಂದು ಹಣ್ಣುಗಳನ್ನು ಕೊಯ್ದುಕೊಟ್ಟು ಬರುತ್ತಿರುವಾಗ ಮಾರ್ಗ ಮಧ್ಯದಲ್ಲಿ 'ಸರ್ವಯಶ'ರೆಂಬ ಮುನಿಗಳನ್ನು ಕಂಡಳು. ಇವಳ ಬೇಡಿಕೆಯಂತೆ ಮುನಿಗಳು ಅಣುವ್ರತವೇ ಮೊದಲಾದ ವ್ರತಗಳನ್ನು ನೀಡಿದರು. ವ್ರತಗಳಿಂದ ತನ್ನ ದೇಹವನ್ನು ಕುಗ್ಗಿಸಿಕೊಳ್ಳುತ್ತಾ ಇರಲು ಒಮ್ಮೆ ಅವಳು ಸುವ್ರತೆಯೆಂಬ ಆರ್ಯಿಕೆಯನ್ನು ಚರಿಗೆಗಾಗಿ ನಿಲ್ಲಿಸಿದಳು. ಆಹಾರವು ಆ ಆರ್ಯಿಕೆಯ ಮೈಗೆ ಒಗ್ಗದೆ, ಒಂದೇ ಸಮನೆ ವಾಂತಿಮಾಡಿಕೊಂಡಳು. ಅದಕ್ಕೆ ಹೇಸಿಕೊಂಡ ಶ್ರೀದತ್ತೆ ಮನೆಯಿಂದ ಆಚೆ ಹೊರಟುಹೋದಳು. ನೆರೆಮನೆಯ ಹಿರಿಯರು ಬಂದು ಆ ಆರ್ಯಿಕೆಯನ್ನು ಬೀಡಿಗೆ ಕಳುಹಿಸಿಕೊಟ್ಟರು. ಮತ್ತೊಂದು ದಿನ ಶಂಖಪರ್ವತದಲ್ಲಿ ಖೇಚರದಂಪತಿಗಳು ವಿಮಾನವನ್ನೇರಿ ವೈಭವದಿಂದ ಹೋಗುತ್ತಿರುವುದನ್ನು ಕಂಡು ತನಗೂ ಅಂತಹದೇ ವೈಭವ ಬರಬಾರದೇ ಎಂದು ಕೊರಗುತ್ತಾ ನಿದಾನ ಶಲ್ಯದಿಂದ ಕಾಲಕ್ರಮದಲ್ಲಿ ತೀರಿ ದಮಿತಾರಿಗೂ ಆತನ ಹೆಂಡತಿ ಮಂಗಳೆ ಎಂಬುವಳಿಗೂ ಕನಕಶ್ರೀ ಎಂಬ ಮಗಳಾಗಿ ಹುಟ್ಟಿದಳು.

ಶ್ರೀದತ್ತೆಯು ಆಹಾರದಾನವನ್ನು ಮಾಡಿದರೂ ಅಲ್ಲಿ ಜುಗುಪ್ಸೆಯನ್ನು ತೋರಿದಳು. ವಾಂತಿಯಾದ ಆಹಾರವನ್ನು ತೆಗೆದು ಹಸನುಗೊಳಿಸದೆ ಹೋದುದರಿಂದ ಅಲ್ಲಿ ಹರಡಿದ್ದ ಆಹಾರಕ್ಕೆ ಮುಸುರಿಕೊಂಡು ನೊಣಗಳೇ ಮೊದಲಾದ ಅನೇಕ ಜೀವಿಗಳು ಮಡಿದವು. ಇದರಿಂದಾಗಿ ಕನಕಶ್ರೀ ಎಂಬ ವಿದ್ಯಾಧರೆಯಾಗಿ ಹುಟ್ಟಿದರೂ ತಂದೆಯನ್ನು ಕಳೆದುಕೊಂಡು ಅತೀವ ದುಃಖವನ್ನು

ಅನುಭವಿಸಬೇಕಾಯಿತು. ಕನಕಶ್ರೀ ಕೊನೆಗೆ ಆರ್ಯಿಕೆಯಾಗಿ ತಪಸ್ಸು ಮಾಡಿ ಸ್ವರ್ಗ ಲೋಕಕ್ಕೆ ಹೋದಳು. ಅನಂತರ ಅಪರಾಜಿತನಿಗೆ ವಿಜಯೆಯೆಂಬ ಅರಸಿಯಾದಳು.

ಪ್ರತಿಫಲ ಸ್ವರೂಪದ ಆಶಯವನ್ನು ತಿಳಿಸುವ ಎಷ್ಟೋ ಜನಪದ ಕಥೆಗಳು ನಮ್ಮಲ್ಲುಂಟು. ಉತ್ತಮ ಪುನರ್ಜನ್ಮ, ಸ್ವರ್ಗ, ನರಕಪ್ರಾಪ್ತಿ ಹೀಗೆ ಆಯಾ ಕೃತ್ಯಗಳಿಗನುಸಾರವಾಗಿ ಅದು ಪ್ರಾಪ್ತಿಯಾಗುತ್ತದೆ.[??] ಅಂತಹ ಆಶಯವನ್ನು ನಾವಿಲ್ಲಿ ಕಾಣಬಹುದು.

ಮೇಲಿನ ಆಶಯವೇ ಅಲ್ಲದೆ, ಬಡತನದ ಬೇಗೆಯಲ್ಲಿ ನರಳುವುದು, ಮನೆಯಲ್ಲಿ ಬಹಳ ಮಂದಿ ಒಡಹುಟ್ಟಿದವರೊಂದಿಗೆ ಕಷ್ಟಕಾರ್ಪಣ್ಯದಿಂದ ಬದುಕನ್ನು ನೂಕುವುದು ಇದೂ ಸಹ ಒಂದು ಕಥಾಶಯವೇ ಆಗಿದೆ. ಆದಿಪುರಾಣದಲ್ಲಿ ಉಪಕಥೆಯಾಗಿ ಬರುವ ನಿರ್ನಾಮಿಕೆಯ ಕಥೆಯಲ್ಲಿ ಈ ಆಶಯವನ್ನು ಕಾಣುತ್ತೇವೆ. ಆರ್ಯಿಕೆ ಮುನಿಗಳಿಗೆ ಸೇವೆ ಮಾಡದೆ ಇರುವುದು, ನಿದಾನ ಶಲ್ಯ ಇವುಗಳೂ ಸಹ ಜೈನ ಕಥಾಶಯಗಳಾಗಿವೆ.

**ಅನಂತಶ್ರೀ - ಧನಶ್ರೀಯರ ಕಥೆ (ಅಧ್ಯಾಯ- ೪)**

ನಂದನವೆಂಬ ನಗರ. ಅದನ್ನು ಆಳುತ್ತಿದ್ದವನು ಮಹೇಂದ್ರನೆಂಬ ರಾಜ. ಆತನ ಮಹಾರಾಣಿ ಅನಂತಮತಿ. ಇವರಿಗೆ ಅನಂತಶ್ರೀ - ಧನಶ್ರೀಯರೆಂಬ ಹೆಣ್ಣು ಮಕ್ಕಳು.

ವನಕ್ರೀಡೆಗೆಂದು ಹೋದ ಇವರು ಒಮ್ಮೆ ಸಿದ್ಧಾಚಲದಲ್ಲಿ ನಂದಗುಪ್ತರೆಂಬ ಮುನಿಗಳ ಬಳಿ ಉಪವಾಸವ್ರತವನ್ನು ಸ್ವೀಕರಿಸಿದರು. ಇವರು ಪ್ರೋಷಧೋಪವಾಸದಿಂದ ಇದ್ದು, ಉಯ್ಯಾಲೆ ತೂಗಿಕೊಳ್ಳುವಾಗ ವಜ್ರಾಂಗನೆಂಬ ಖೇಚರನು ಇವರನ್ನು ಬಲಾತ್ಕಾರವಾಗಿ ಹಿಡಿದೆಳೆದುಕೊಂಡು ಆಕಾಶಕ್ಕೆ ನೆಗೆದನು. ಆತನ ಹೆಂಡತಿ ಅದನ್ನು ಕಂಡು ಕುರುಬಿ, ಹರಿತವಾದ ಖಡ್ಗವನ್ನೆಳೆದುಕೊಂಡು ಆತನನ್ನು ಬೆನ್ನಟ್ಟಿ ಬಂದು ಇರಿದಳು. ಅವನು ನೋವಿನಿಂದ ಕೈಬಿಟ್ಟನು. ಇವರು ಭೂಮಿಗೆ ಬೀಳುತ್ತಿರುವಾಗ ಇವರಿಗೆ ನೋವಾಗದಿರಲೆಂದು ಪರ್ಣಲಘುವಿದ್ಯೆಗೆ ಅಪ್ಪಣೆಯನ್ನು ನೀಡಿದಾಗ ವಿದ್ಯಾದೇವತೆಯು ಇವರನ್ನು ಮೃದುವಾಗಿ ಎತ್ತಿಕೊಂಡು

ಒಂದು ಕೊಳದ ದಂಡೆಯಲ್ಲಿ ಇರಿಸಿದಳು. ಅವರು ಕಂಗೆಡದೆ ನಾಲ್ಕು ಬಗೆಯ ಆಹಾರವನ್ನು ತ್ಯಾಗಮಾಡಿ, ಸಮಾಧಿಮರಣ ಹೊಂದಿ ಸೌಧರ್ಮೇಂದ್ರ ಕಲ್ಪದಲ್ಲಿ ಹುಟ್ಟಿದರು. ನವಮಿಕೆ - ರತಿ ಎಂಬ ದೇವಿಯರಾದರು. ಮನುಷ್ಯಲೋಕದಲ್ಲಿ ಮುಂದೇನಾದರೂ ಹುಟ್ಟಿ ಸಂಸಾರಮೋಹಕ್ಕೆ ಒಳಗಾದರೆ, ಒಬ್ಬರು ಮತ್ತೊಬ್ಬರನ್ನು ಎಚ್ಚರಿಸಬೇಕೆಂದು ಪ್ರತಿಜ್ಞೆಮಾಡಿಕೊಂಡರು. ರತಿಯು ಅನಂತರದಲ್ಲಿ ಅಪರಾಜಿತ ಮತ್ತು ವಿಜಯೆಯರಿಗೆ ಸುಮತಿಯೆಂಬ ಮಗಳಾಗಿ ಹುಟ್ಟಿದಳು. ಆಕೆಗೆ ಸ್ವಯಂವರವು ಏರ್ಪಟ್ಟ ಕಾಲದಲ್ಲಿ ನವಮಿಕೆಯು ಬಂದು ಎಚ್ಚರಿಕೆಯನ್ನು ನೀಡಿದಳು. ಸುಮತಿಯು ತಂದೆ-ತಾಯಿಯರಿಂದ ಅಪ್ಪಣೆ ಪಡೆದು ಸುವ್ರತೆಯೆಂಬ ಆರ್ಯಿಕೆಯ ಸನ್ನಿಧಿಯಲ್ಲಿ ತಪೋದೀಕ್ಷೆಯನ್ನು ಕೈಗೊಂಡಳು.

ಈ ಕಥೆಯಲ್ಲಿ ಮುನಿಗಳಿಂದ ವ್ರತಸ್ವೀಕಾರ, ಖೇಚರನು ಕನ್ಯೆಯರನ್ನು ಅಪಹರಿಸಿಕೊಂಡು ಹೋಗುವುದು, ಕಷ್ಟದಿಂದ ಹೇಗೋ ಪಾರಾಗುವುದು, ಪ್ರತಿಬೋಧನೆ ಇವು ಆಶಯಗಳಾಗಿ ಬಂದಿವೆ. ಖೇಚರನು ಕನ್ಯೆಯನ್ನು ಅಪಹರಿಸಿಕೊಂಡು ಹೋಗುವ, ಪಾರಾಗುವ ಕಥಾಶಯವನ್ನು ಬೇರೆ ಕಡೆಗಳಿಂದಲೂ ಗುರುತಿಸಿಕೊಳ್ಳಬಹುದಾಗಿದೆ (ಉದಾಹರಣೆಗೆ ಚಂದನಾಂಬಿಕೆಯ ಕಥೆ). ಪ್ರತಿಬೋಧನೆಯ ಆಶಯವೂ ಸಹ ಹಲವಾರು ಕಥೆಗಳಲ್ಲಿ ತಲೆದೋರಿದೆ (ಉದಾ.ಗೆ ಸಗರನ ಕಥೆ).

**ವಜ್ರನಾಭಿ ಚಕ್ರವರ್ತಿಯು ಸಭೆಯಲ್ಲಿ ನಿರೂಪಿಸಿದ ಶಾಂತಿಮತಿಯ ಕಥೆ (೯ನೇ ಆ)**

ಶುಕ್ಲಪ್ರಭವೆಂಬ ಪಟ್ಟಣ. ಪ್ರಭಂಜನ - ಶುಭಕಾಂತಿ ಎಂಬುವರು ಆ ಪಟ್ಟಣದ ರಾಜ-ರಾಣಿಯರು. ಇವರಿಗೆ ಶಾಂತಿಮತಿ ಎಂಬ ಮಗಳು.

ಶಾಂತಿಮತಿಯು ಮುನಿಸಾಗರ ಪರ್ವತದಲ್ಲಿ ಶ್ರೇಷ್ಠವಾದ ಒಂದು ವಿದ್ಯಾಸಾಧನೆಗಾಗಿ ತಪಸ್ಸನ್ನು ಮಾಡುತ್ತಿರುವಾಗ ಖೇಚರನೊಬ್ಬನು ಇವಳ ಯೌವನ ರೂಪಸಂಪನ್ನತೆಗೆ ಮನಸೋತು ಈಕೆಯ ತಪಸ್ಸಿಗೆ ವಿಘ್ನವುಂಟುಮಾಡಿದನು. ಆದರೂ ಆಕೆ ನಿಶ್ಚಲಳಾಗಿದ್ದು ವಿದ್ಯಾಸಾಧನೆಯಲ್ಲಿ ತೊಡಗಿದಳು. ಅದನ್ನು ವಶಪಡಿಸಿಕೊಂಡ ಬಳಿಕ ಇವಳು ಆತನ ಮೇಲೆ ಕೋಪಕೊಂಡು ಗುರಾಣಿ, ಕತ್ತಿಗಳನ್ನು ಹಿಡಿದುಕೊಂಡು ಬೆನ್ನಟ್ಟಿಬಂದಳು. ಅವನು

ರಕ್ಷಣಾರ್ಥವಾಗಿ ವಜ್ರನಾಭಿಯನ್ನು ಮೊರೆಹೊಕ್ಕನು. ಪ್ರಭಂಜನನು ತನ್ನ ಮಗಳು ಇಲ್ಲಿರುವುದನ್ನು ಅವಲೋಕಿನೀ ವಿದ್ಯೆಯ ಸಹಾಯದಿಂದ ತಿಳಿದು ಅಲ್ಲಿಗೆ ಬಂದನು.

ಚಕ್ರವರ್ತಿ ನಿರೂಪಿಸಿದ ತಮ್ಮ ಭವಾವಳಿಯ ಕಥೆಗಳನ್ನು ಕೇಳಿ ಆ ಮೂವರೂ ಜಿನದೀಕ್ಷೆಯನ್ನು ಕೈಗೊಂಡರು.

ಅವಲೋಕಿನೀ ವಿದ್ಯೆಯ ಸಹಾಯದಿಂದ ತಮಗೆ ಬೇಕಾದ ವ್ಯಕ್ತಿಯ ಬಗೆಗೆ ತಿಳಿಯುವುದು, ಖೇಚರನು ಹೆಣ್ಣಿನ ರೂಪಕ್ಕೆ ಮರುಳಾಗುವುದು, ಮಂತ್ರವಿದ್ಯೆಯ ವಶೀಕರಣ - ಈ ಆಶಯಗಳನ್ನು ಇಲ್ಲಿ ಗುರುತಿಸಬಹುದು.

**ಮುಂಡ ಕೌಶಿಕನ ಕಥೆ (೬ನೇ ಅಧ್ಯಾಯ):**

(ಶ್ರೀವಿಜಯನ ಮಂತ್ರಿ ಮಣಿಭೂಷಣನೆಂಬುವನು ನಿರೂಪಿಸಿದ ಕಥೆ)

ಕುಂಭಕಾರ ಕಟವೆಂಬ ಪಟ್ಟಣ. ಅಲ್ಲಿ ಚಂಡಕೌಶಿಕನೆಂಬ ದುರಾಚಾರಿಯಾದ ಬ್ರಾಹ್ಮಣ. ಆತನ ಹೆಂಡತಿ ಸೋಮಶ್ರೀ ವ್ಯಂತರ ದೇವರನ್ನು ಆರಾಧಿಸಿ ಮುಂಡ ಕೌಶಿಕನೆಂಬ ಮಗನನ್ನು ಪಡೆದಳು. ಆ ಮಗನು ಬೆಳೆಯುತ್ತಿರುವಾಗ ಅವನನ್ನು ಕೊಲ್ಲಲು ಬಂದ ಕುಂಭನೆಂಬ ರಾಕ್ಷಸನಿಗೆ ಹೆದರಿ ಚಂಡಕೌಶಿಕನು ತನ್ನ ಮಗನನ್ನು ಒಯ್ದು ಬೆಟ್ಟವೊಂದರ ಗವಿಯಲ್ಲಿ ಬಚ್ಚಿಟ್ಟು ಕಾಯುತ್ತಿದ್ದನು. ಆದರೆ ಮುಂಡಕೌಶಿಕನು ಆ ಗವಿಯಲ್ಲಿದ್ದ ಹೆಬ್ಬಾವೊಂದರಿಂದ ಕಚ್ಚಿಸಿಕೊಂಡು ಸತ್ತನು.

ಈ ಕಥೆ ಮಹಾಪುರಾಣ, ಚಾವುಂಡರಾಯ ಪುರಾಣ, ಶಾಂತಿಕೀರ್ತಿ, ಬಂಧುವರ್ಮರಲ್ಲಿ ಕಂಡುಬರುತ್ತದೆ. ಚಾವುಂಡರಾಯನು ಮಹಾಪುರಾಣವನ್ನು ಅನುಸರಿಸಿ ಈ ಕಥೆಯನ್ನು ಇನ್ನಷ್ಟು ವಿಸ್ತೃತರೂಪದಲ್ಲಿ ನೀಡಿದ್ದಾನೆ.[೧೨]

ದೇವನನ್ನು ಒಲಿಸಿಕೊಂಡು ಇಷ್ಟಾರ್ಥವನ್ನು ಪಡೆಯುವುದು, ನರಭಕ್ಷಕ ರಕ್ಕಸ ಇವುಗಳು ಜನಪದ ಆಶಯಗಳಾಗಿವೆ. ಒಟ್ಟಾರೆ ನಿಯತಿಯನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಧಾರ್ಮಿಕ ಆಶಯವನ್ನು ಈ ಕಥೆ ಸಾರುತ್ತದೆ.

**ಕಪಿಲನ ಕಥೆ (೬ನೇ ಅಧ್ಯಾಯ):**

ಅಚಲವೆಂಬ ಗ್ರಾಮ. ಅಲ್ಲಿ ಧರಣೀಜಟನೆಂಬ ಬ್ರಾಹ್ಮಣ. ಈತನಿಗೆ ಯಶೋಭದ್ರೆ ಎಂಬ ಹೆಂಡತಿ. ಇವರಿಗೆ ಶ್ರೀಭೂತಿ ಮತ್ತು ನಂದನಭೂತಿ ಎಂಬ

ಇಬ್ಬರು ಮಕ್ಕಳು. ಬ್ರಾಹ್ಮಣನ ದಾಸಿ ಪುತ್ರ ಕಪಿಲ. ಕಪಿಲನು ಚುರುಕಾಗಿದ್ದನು. ಒಮ್ಮೆ ಕೇಳಿದರೆ ಸಾಕು ಅದನ್ನು ಗ್ರಹಿಸಿಬಿಡುತ್ತಿದ್ದನು. ಧರಣೀಜಟ ಬ್ರಾಹ್ಮಣನು ತನ್ನ ಇಬ್ಬರು ಔರಸ ಪುತ್ರರಿಗೆ ಸ್ಮೃತಿ ಶಾಸ್ತ್ರಗಳ ಅಧ್ಯಯನ ಮಾಡಿಸುವಾಗ ಕಪಿಲನು ಅವುಗಳನ್ನೆಲ್ಲಾ ಚೆನ್ನಾಗಿ ಕಲಿತುಕೊಂಡನು. ಆದರೆ ಮಂದಬುದ್ಧಿಯವರಾದ ಬ್ರಾಹ್ಮಣನ ಔರಸಪುತ್ರರು ಏನನ್ನೂ ಕಲಿಯಲಿಲ್ಲ. ಗಂಡನು ತೊತ್ತಿನ ಮಗನಿಗೆ ಮಾತ್ರ ಪಾಠ ಹೇಳಿ ಈ ಮಕ್ಕಳಿಗೆ ಏನೂ ಕಲಿಸಲಿಲ್ಲವೆಂದುಕೊಂಡು ಯಶೋಭದ್ರೆ ಅಸಮಾಧಾನಗೊಂಡಳು. ಯಶೋಭದ್ರೆಗೆ ಬ್ರಾಹ್ಮಣನು ನಿಜಾಂಶವನ್ನು ತಿಳಿಸಿದನು. ಕೊನೆಗೊಂದು ದಿನ ಕಪಿಲನನ್ನು ಉಪಾಯಾಂತರದಿಂದ ಮನೆಯಿಂದ ಓಡಿಸಿದರು.

ಪುರೋಹಿತ ಸತ್ಯಕಿ ಹಾಗೂ ಜಂಬೂವತಿಯರ ಮಗಳು ಸತ್ಯಭಾಮೆ. ಈಕೆಯನ್ನು ಕಪಿಲನಿಗೆ ಕೊಟ್ಟು ಮದುವೆ ಮಾಡಿದರು. ಕೆಲವು ದಿನಗಳ ನಂತರ ಕಪಿಲನ ದುರಾಚಾರವನ್ನು ಕಂಡು ಸತ್ಯಭಾಮೆ ಜುಗುಪ್ಸೆಗೊಂಡಳು. ಅದೇ ಸಮಯಕ್ಕೆ ಅಲ್ಲಿಗೆ ಬಂದ ಕಪಿಲನ ತಂದೆಯನ್ನು ದಾನ ಸತ್ಕಾರದಿಂದ ಸಂತೋಷಗೊಳಿಸಿ ಕಪಿಲನ ವೃತ್ತಾಂತವನ್ನು ತಿಳಿದುಕೊಂಡಳು. ಅದೇ ದಿನ ಕಪಿಲನು ಕಗ್ಗತ್ತಲೆಯ ರಾತ್ರಿಯಲ್ಲಿ ಉಟ್ಟ ವಸ್ತ್ರವನ್ನು ಕಳೆದು ಕಂಕುಳಲ್ಲಿರಿಸಿಕೊಂಡು ಮನೆಯ ಅಂಗಳಕ್ಕೆ ಬಂದು ಮತ್ತೆ ಅವುಗಳನ್ನು ಧರಿಸಿಕೊಂಡು ತಾನು ವಿದ್ಯಾ ಪ್ರಭಾವದಿಂದ ಬಟ್ಟೆ ಒದ್ದೆಯಾಗದವನಂತೆ ಬಂದುಬಿಟ್ಟೆನೆಂದು ಹೇಳಿದನು. ಅವಳನ್ನು ಬಲಾತ್ಕಾರಮಾಡಿ ಭೋಗಿಸಲು ಹೋದನು. ಸತ್ಯಭಾಮೆ ಆತನಿಂದ ತಪ್ಪಿಸಿಕೊಂಡು ಬಂದು ದೊರೆ ಶ್ರೀಷೇಣನನ್ನು ಮೊರೆಹೊಕ್ಕಳು. ರಾಜನು ಕಪಿಲನನ್ನು ಅಪಮಾನಗೊಳಿಸಿ ಪಟ್ಟಣದಿಂದ ಹೊರದೂಡಿ ಸತ್ಯಭಾಮೆಯನ್ನು ಅಂತಃಪುರದಲ್ಲಿ ರಾಣಿಯರೊಂದಿಗೆ ಸುರಕ್ಷಿತವಾಗಿರಿಸಿದನು.

'ಮಾರಿಕೋಣ', 'ಬ್ರಾಹ್ಮಣನ ಮಗಳು', 'ಮಾರಿಕೋಣದ ಬಲಿ' - ಈ ಮೂರು ಜನಪದ ಕಥೆಗಳಲ್ಲಿ ಕಂಡುಬರುವ ಆಶಯಗಳು ಈ ಕಥೆಯಲ್ಲಿ ಕಂಡುಬರುವುದಾಗಿ ತಿಳಿಯುತ್ತದೆ.[೧೩]

ಈ ಮೇಲಿನ ಕಥೆ ಅಂದಿನ ಹಲವಾರು ಸಾಮಾಜಿಕ ವ್ಯವಸ್ಥೆಗಳ ಬಗೆಗೆ ಬೆಳಕನ್ನು ಚೆಲ್ಲುತ್ತಾ ಅವುಗಳನ್ನೇ ಆಶಯಗಳನ್ನಾಗಿ ಪಡೆದುಕೊಂಡ ಕಥೆಯಾಗಿದೆ. ವರ್ಣಭೇದ ವಿಚಾರ, ವಿದ್ಯಾರ್ಹತೆಯಲ್ಲಿ ಜಾತಿಯ ಹಿನ್ನೆಲೆ, ವರ್ಣಸಂಕರ

ಆಗದಂತೆ ರಾಜರು ಎಚ್ಚರಿಕೆ ವಹಿಸುತ್ತಿದ್ದುದು- ಈ ಹಲವಾರು ಸಂಗತಿಗಳು ಇಲ್ಲಿ ಕಂಡುಬರುತ್ತವೆ. ಶಾಂತಿತೀರ್ಥಂಕರನ ಪೂರ್ವಭವಾವಳಿಗಳಲ್ಲಿ ಒಂದಾದ ಶ್ರೀಷೇಣನ ಭವದಲ್ಲಿ, ಆಹಾರದಾನದ ಮಹಿಮೆಯನ್ನು ಸಾರುವ ಹಿನ್ನೆಲೆಯಲ್ಲಿ ಈ ಕಥೆ ಸೇರ್ಪಡೆಯಾಗಿದೆ. ಶ್ರೀಷೇಣನು ಮುನಿಗಳಿಗೆ ಆಹಾರದಾನವನ್ನು ನೀಡಿದಾಗ ಆತನ ರಾಣಿಯರು ಹಾಗೂ ಸತ್ಯಭಾಮೆ ಅದನ್ನು ಅನುಮೋದಿಸಿದರು. ಅಲ್ಲಿಂದ ಶ್ರೀಷೇಣನು ಅಮಿತತೇಜನಾಗಿಯೂ ಸತ್ಯಭಾಮೆಯು ಆತನ ತಂಗಿ ಸುತಾರೆಯೂ ಜನ್ಮ ಪಡೆದರು. ಕಪಿಲನು ಅಶನಿಘೋಶನಾಗಿ ಹುಟ್ಟಿ ಪರಸತಿಯಾಗಿದ್ದ ಸುತಾರೆಯನ್ನು ಅಪಹರಿಸಿದನು. ಕೊನೆಗೆ ಜನ್ಮಾಂತರದಿಂದ ಬೆಳೆದು ಬಂದಿದ್ದ ವೈರವು ವಿಜಯ ಕೇವಲಿಗಳ ಸನ್ನಿಧಿಯಲ್ಲಿ ಕೊನೆಗೊಂಡಿತು. ಅಂದರೆ ರಾಗ-ದ್ವೇಷಾದಿಗಳ ಕರ್ಮ ಪರಿಪಾಕವನ್ನು ನಿರೂಪಿಸುವ ಹಿನ್ನೆಲೆಯನ್ನು ಈ ಕಥೆ ಒಳಗೊಂಡಿದೆ.

**ಅಜಿತಪುರಾಣ:**

**ಕಥಾಸಾರ:** ಸಾಕೇತಪುರದಲ್ಲಿ ಜಿತಶತ್ರು ಎಂಬ ರಾಜ. ವಿಜಯಸೇನಾದೇವಿ ಆತನ ರಾಣಿ. ಈತ ಭೋಗ ಭಾಗ್ಯಗಳನ್ನು ಅನುಭವಿಸುತ್ತಾ ಶತ್ರುಗಳಿಗೆ ಅಜೇಯನಾಗಿದ್ದು ಹೆಸರಿಗೆ ತಕ್ಕಂತಿದ್ದನು.

ಸುಸೀಮಾನಗರದಲ್ಲಿ ವಿಮಲವಾಹನನೆಂಬ ರಾಜ. ಒಮ್ಮೆ ಆ ರಾಜ ಕೆನ್ನೆಯಲ್ಲಿ ನೆರೆಗೂದಲನ್ನು ಕಂಡು ವೈರಾಗ್ಯಪರವಾಗಿ ದೀಕ್ಷಿತನಾದನು. ತಪಸ್ಸನ್ನು ಕೈಗೊಂಡು ಸತ್ತು ಸರ್ವಾರ್ಥಸಿದ್ಧಿಯಲ್ಲಿ ದೇವನಾಗಿ ಜನಿಸಿ ಅಲ್ಲಿಂದ ಬಂದು ಜಿತಶತ್ರುವಿಗೂ ವಿಜಯಸೇನಾದೇವಿಗೂ ಅಜಿತನಾಥನೆಂಬ ಮಗನಾಗಿ ಜನಿಸಿದನು. ಅಜಿತನಾಥನು ಬೆಳೆದು ಯೌವನಾವಸ್ಥೆಗೆ ಕಾಲಿಡಲು ಆತನಿಗೆ ಸಾವಿರ ಕನ್ಯೆಯರೊಡನೆ ಮದುವೆ ಮಾಡಿಸಿದನು. ರಾಜ್ಯಾಭಿಷೇಕವನ್ನು ಮಾಡಿದನು. ಒಮ್ಮೆ ಆಕಾಶದಲ್ಲಿ ಉಲ್ಕಾಪಾತವಾದುದನ್ನು ಕಂಡು ಸಂಸಾರದ ಕ್ಷಣಿಕತೆಯೇ ಮೊದಲಾದ ದ್ವಾದಶಾನುಪ್ರೇಕ್ಷೆಗಳನ್ನು ಕುರಿತು ಚಿಂತಿಸಿ ಸಂಸಾರವನ್ನು ತ್ಯಜಿಸಿ ದೀಕ್ಷಿತನಾದನು. ಘಾತಿಕರ್ಮಗಳನ್ನು ನಾಶಮಾಡಿ ಕೇವಲಿಯಾದನು. ಸಮವಸರಣ ಸಭೆಯಲ್ಲಿ ಉಪದೇಶವನ್ನು ನೀಡಿ ತೀರ್ಥಂಕರ ಎನಿಸಿದನು. ಅನಂತರ ಮುಕ್ತನಾದನು.

ಪಥ್ವೀನಗರದಲ್ಲಿ ಜಯಸೇನನೆಂಬ ರಾಜ. ಅವನಿಗೆ ವಿಜಯಸೇನೆ ಎಂಬುವಳು ರಾಣಿ. ಇವರಿಗೆ ರತಿಷೇಣ ಧೃತಿಷೇಣ ಎಂಬ ಇಬ್ಬರು ಮಕ್ಕಳು. ರತಿಷೇಣನು ಅಕಾಲ ಮರಣಕ್ಕೆ ತುತ್ತಾಗಲು ಜಯಸೇನನು ಅತೀವ ಸಂತಾಪಕ್ಕೆ ಒಳಗಾದನು. ಆಗ ಆತನ ಮೈದುನ ಮಹಾರುತನು ಜಿನದೀಕ್ಷೆಯನ್ನು ವಹಿಸಿ ಶಾಂತಚಿತ್ತನಾಗಿರುವಂತೆ ಸೂಚಿಸಿದನು. ಅವನು ಅದರಂತೆ ಮಾಡಿ ಸಮಾಧಿಮರಣದಿಂದ ಹದಿನೈದನೆಯ ಕಲ್ಪದಲ್ಲಿ ಮಹಾಬಲದೇವನಾಗಿ ಹುಟ್ಟಿದನು. ಮೈದುನನೂ ಸಹ ಅಲ್ಲಿಯೇ ಮಣಿಕೇತುವಾಗಿ ಹುಟ್ಟಿದನು. ಒಮ್ಮೆ ಅವರಿಬ್ಬರಲ್ಲಿ ಯಾರು ಮೊದಲು ಮನುಷ್ಯಲೋಕಕ್ಕೆ ಹೋಗುವರೋ ಅವರನ್ನು ದೇವಲೋಕದಲ್ಲಿದ್ದವರು ಬಂದು ಎಚ್ಚರಿಸಬೇಕು ಎಂಬ ಒಪ್ಪಂದವಾಯಿತು. ಕಾಲಾಂತರದಲ್ಲಿ ಜಯಸೇನನಾಗಿದ್ದ ಮಹಾಬಲನು ಸತ್ತು ಅಯೋಧ್ಯೆಯಲ್ಲಿ ಸಗರನೆಂಬ ರಾಜಕುಮಾರನಾಗಿ ಹುಟ್ಟಿದನು. ಅವನಿಗೆ ಅರುವತ್ತು ಸಾವಿರ ಮಕ್ಕಳು. ಸಂಸಾರಸುಖದಲ್ಲಿ ಮೈಮರೆತಿದ್ದ ಸಗರನನ್ನು ಎಚ್ಚರಿಸಲು ಮಣಿಕೇತುವು ಪ್ರಯತ್ನಿಸಿ ವಿಫಲನಾದನು. ಕೊನೆಗೆ ಕೈಲಾಸಪರ್ವತದ ಬಳಿ ಅಗಳು ತೆಗೆಯಲು ಬಂದ ಸಗರನ ಮಕ್ಕಳಲ್ಲಿ ಭಗೀರಥನೊಬ್ಬನನ್ನು ಬಿಟ್ಟು ಉಳಿದೆಲ್ಲರನ್ನೂ ದೃಷ್ಟಿ ವಿಷಸರ್ಪರೂಪದಲ್ಲಿ ಕೊಂದು, ಸುಟ್ಟು ಬೂದಿ ಮಾಡುವ ಕಪಟ ವ್ಯಾಜ್ಯವನ್ನು ಹೂಡಿ ಸಗರನನ್ನು ಎಚ್ಚರಿಸಿದನು. ಕೊನೆಗೆ ಸಗರಾದಿಗಳು ಮೋಕ್ಷನನ್ನು ಪಡೆದರು.

**ಅಜಿತಪುರಾಣದಲ್ಲಿ ಕಂಡುಬರುವ ಕಥಾಶಯಗಳು:**

ರನ್ನನ ಅಜಿತಪುರಾಣದ ವಿನ್ಯಾಸವು 'ಆದಿಪುರಾಣ' ಹಾಗೂ 'ಶಾಂತಿಪುರಾಣ'ಗಳಂತೆ ಸಂಕೀರ್ಣತೆಯನ್ನು ಪಡೆದುಕೊಂಡಿಲ್ಲ. ಇಲ್ಲಿಯ ಕಥೆ ಸರಳ. ಆದಿಪುರಾಣ ಮತ್ತು ಶಾಂತಿಪುರಾಣಗಳಲ್ಲಿ ಭವಾವಳಿಯ ವಿಸ್ತೃತ ವರ್ಣನೆಗಳೊಂದಿಗೆ ಉಪಕಥೆಗಳೂ ಸೇರಿಕೊಂಡಿವೆ. ಅಜಿತಪುರಾಣದಲ್ಲಿ ಅಜಿತನಾಥನ ಎರಡು ಪೂರ್ವಭವಗಳು (ವಿಮಲವಾಹನ ಸರ್ವಾರ್ಥಸಿದ್ಧೇಶ್ವರ) ಹಾಗೂ ಸಗರ ಚಕ್ರವರ್ತಿಯ ಎರಡು ಪೂರ್ವಭವಗಳು (ಜಯಸೇನ, ಮಹಾಬಲ) ಮಾತ್ರ ಬರುತ್ತವೆ.

ಸಗರನ ಕಥೆಯ ನಿರೂಪಣೆಯಲ್ಲಿ ಬೌದ್ಧ ಸಾಹಿತ್ಯದಲ್ಲಿ ಕಂಡುಬರುವ ಕಿಸಾಗೌತಮಿಯ ಕಥಾಶಯವು ದೊರಕುತ್ತದೆ. ಸಾವಿಲ್ಲದ ಮನೆಯಲ್ಲಿ ಸಾಸಿವೆಯನ್ನು

ತಂದುಕೊಟ್ಟರೆ ಮಗನನ್ನು ಬದುಕಿಸಿಕೊಡುತ್ತೇನೆಂಬ ಬುದ್ಧನ ಆಶ್ವಾಸನೆಯ ಮೇರೆಗೆ ಅದನ್ನು ತರಲು ಹೊರಟ ಗೌತಮಿಗೆ ನಿಜಸ್ಥಿತಿಯ ಅರಿವಾಗುತ್ತದೆ. ಸಾವು ಹುಟ್ಟಿನೊಂದಿಗೆ ಹೇಗೆ ಅನಿವಾರ್ಯ ಎಂಬುದರ ಅರಿವು ಉಂಟಾಗುತ್ತದೆ. ಇಂತಹದೇ ಒಂದು ಸನ್ನಿವೇಶವು ಅಜಿತಪುರಾಣದ ಸಗರನ ಕಥೆಯಲ್ಲಿದೆ.

ಭೋಗಭಾಗ್ಯಗಳಲ್ಲಿ ಮುಳುಗಿದ್ದ ಸಗರಚಕ್ರವರ್ತಿಯನ್ನು ಎಚ್ಚರಿಸಲು ಮಣಿಕೇತು ಎಂಬ ದೇವನು ಭೂಲೋಕಕ್ಕೆ ಬಂದನು. ಹಾಗೆ ಬಂದುದು ಅವರ ಪರಸ್ಪರ ಒಪ್ಪಂದದ ಪ್ರಕಾರವೇ ಆಗಿದ್ದಿತು. ಆದರೆ ಮಣಿಕೇತುವಿನ ಮಾತುಗಳನ್ನು ಮೊದಲಲ್ಲಿ ಸಗರನು ಕಿವಿಯಮೇಲೆ ಹಾಕಿಕೊಳ್ಳಲಿಲ್ಲ. ಸಗರನ ಮಗ ಭಗೀರಥನೊಬ್ಬನನ್ನು ಉಳಿಸಿ ಉಳಿದ ಮಕ್ಕಳನ್ನು ಭಸ್ಮಗೊಳಿಸಿದಂತೆ ಮಾಡಿ ಬ್ರಾಹ್ಮಣವೇಷದಿಂದ ಮಣಿಕೇತನು ಸಗರ ಚಕ್ರವರ್ತಿಯ ಆಸ್ಥಾನಕ್ಕೆ ಬಂದನು. ವಿವಾಹ ಸಂದರ್ಭದಲ್ಲಿ ಸತ್ತುಹೋದ ತನ್ನ ಒಬ್ಬನೇ ಮಗನನ್ನು ಬದುಕಿಸಿಕೊಡುವಂತೆ ಗೋಳಿಟ್ಟನು. ಬುದ್ಧಿಸಾಗರನೆಂಬ ಮಂತ್ರಿಯು ತನ್ನ ಬುದ್ಧಿ ಚಾತುರ್ಯವನ್ನು ಉಪಯೋಗಿಸಿ, ಯಾರೂ ಸತ್ತಿರದ ಮನೆಯಿಂದ ಹುಲ್ಲು ಮತ್ತು ಬೆಂಕಿಯನ್ನು ತೆಗೆದುಕೊಂಡು ಬಂದರೆ ಮಗನನ್ನು ಬದುಕಿಸಿಕೊಡಬಹುದೆಂದನು. ಹಾಗೇ ಆಗಲಿ ಎಂದು ಸ್ವಲ್ಪ ದೂರ ಹೋದವನಂತೆ ನಟಿಸಿದ ಬ್ರಾಹ್ಮಣ ವೇಷಧಾರಿ ದೇವನು ಹಿಂದಿರುಗಿ ಬಂದು ಸಾವಿಲ್ಲದ ಮನೆಯೇ ಇಲ್ಲ, ಆದ್ದರಿಂದ ಅವುಗಳನ್ನು ಪಡೆಯಲಾಗಲಿಲ್ಲ ಎಂದನು. ಬುದ್ಧಿಸಾಗರನು ಆತನಿಗೆ ಬದುಕಿನ ನಶ್ವರತೆ, ಸಾವಿನ ಕಟುಸತ್ಯಗಳ ಬಗೆಗೆ ಉಪದೇಶವನ್ನು ನೀಡಿದನು. ಇದು ತನಗೆ ಮಾತ್ರ ಅನ್ವಯಿಸುತ್ತದೋ? ಅಥವಾ ನಿನಗೂ ಅನ್ವಯಿಸುತ್ತದೋ? ಎಂದು ಚಕ್ರವರ್ತಿಯನ್ನು ದೇವನು ಪ್ರಶ್ನಿಸಿದಾಗ ಸಗರ ಚಕ್ರವರ್ತಿಯು ಅದು ತನಗೂ ಅನ್ವಯಿಸುತ್ತದೆ ಎಂದು ನುಡಿದನು. ಆ ಸಮಯದಲ್ಲಿ ದೇವನು ಸಗರನ ಮಕ್ಕಳು ಸತ್ತರೆಂಬ ವೃತ್ತಾಂತವನ್ನು ತಿಳಿಸಿದನು. ಭಗೀರಥನು ಅದೇ ವೇಳೆಗೆ ಅಲ್ಲಿಗೆ ಬಂದು ತನ್ನ ಸಹೋದರರು ಸತ್ತುದನ್ನು ದೃಢಪಡಿಸಿದನು. ಮಣಿಕೇತುವಿನ ಉಪಾಯ ಫಲಿಸಿತು. ಸಗರ ಚಕ್ರವರ್ತಿ ಸಂಸಾರವನ್ನು ತೊರೆದು ವೈರಾಗ್ಯಪರನಾದನು.

ಒದಗಿಬಂದ ಸಂದಿಗ್ಧತೆಯಿಂದ ಜಾಣ್ಮೆಯನ್ನು ತೋರಿ ಪಾರಾಗುವ ಕಥಾಶಯವು ಈ ಕಥೆಯಲ್ಲಿ ಕಂಡುಬರುತ್ತದೆ. ಬುದ್ಧಿಸಾಗರನು ಸಾವಿಲ್ಲದ

ಮನೆಯಿಂದ ಹುಲ್ಲು ಮತ್ತು ಬೆಂಕಿ ತರಲು ಸೂಚಿಸುವಲ್ಲಿ ಅದನ್ನು ಗುರುತಿಸಬಹುದು. ಅಲ್ಲದೆ 'ಹುಲ್ಲು-ಬೆಂಕಿ'ಗಳು ಇಲ್ಲಿ ಪ್ರತಿಮಾರೂಪವಾಗಿ ಬಂದಂತೆ ತೋರುತ್ತದೆ. ಹುಲ್ಲು ದೇಹವನ್ನೂ ಬೆಂಕಿ ಸಾವನ್ನೂ ಧ್ವನಿಸುತ್ತವೆ. ಹುಲ್ಲು- ಬೆಂಕಿಯ ಸಂಸರ್ಗದಂತೆಯೇ ಈ ದೇಹದ ನಶ್ವರತೆ ಎಂಬ ಅಂತರಾರ್ಥವನ್ನು ಕಂಡುಕೊಳ್ಳಬಹುದಾಗಿದೆ.

ರತ್ನತ್ರಯರು ನಿರೂಪಿಸಿರುವ ಪುರಾಣಾಂತರ್ಗತವಾಗಿ ಬಂದಿರುವ ಮೇಲಿನ ಕಥೆಗಳಲ್ಲಿ ಜನಪದ ಆಶಯಗಳೇ ಅಲ್ಲದೆ ಜೈನ ಕಥಾ ಆಶಯಗಳೆಂದೇ ವಿಶಿಷ್ಟವಾಗಿ ಗುರುತಿಸಿ ಹೇಳಬಹುದಾದ ಅನೇಕ ಆಶಯಗಳು ಕಂಡುಬರುತ್ತವೆ. ಈ ಆಶಯಗಳು ಕೆಲವೆಡೆ ಉತ್ತಮಾಚರಣೆಗಳನ್ನು ಎತ್ತಿಹಿಡಿಯುವ ಧರ್ಮಾಚರಣೆಗಳಾಗಿಯೂ ಕಂಡುಬರುತ್ತವೆ (ಉದಾ.ಗೆ - ಆಹಾರದಾನ, ದಾನಾನುಮೋದನೆ).

**ಜೈನ ಪುರಾಣಗಳಲ್ಲಿ ಕಂಡುಬರುವ ಆಶಯಗಳು:**

ಪಂಪಾದ್ಯರ ಆಗಮಿಕ ಕಾವ್ಯಗಳಲ್ಲಿ ಬರುವ ಆಶಯಗಳನ್ನು ಜೈನ ಪುರಾಣಗಳ ಆಶಯಗಳೆಂದು ಕರೆಯಬಹುದಾಗಿದೆ. ಈ ಆಶಯಗಳ ಸೂತ್ರವು ಯಾವುದೇ ಜೈನ ಪುರಾಣದಲ್ಲಿ ಪುರಾಣದುದ್ದಕ್ಕೂ ಕಂಡುಬರುತ್ತದೆ. ಕಥಾಂಶಗಳು ಪುರಾಣದಿಂದ ಪುರಾಣಕ್ಕೆ ಬೇರೆಯಾಗುತ್ತ ಹೋದರೂ ಈ ಆಶಯಗಳು ಎಲ್ಲ ಜೈನಪುರಾಣಗಳಲ್ಲಿಯೂ ಎರಕಹೊಯ್ದಂತೆ ಕಂಡುಬರುತ್ತವೆ. ಅವುಗಳು ಹೀಗೆ ಕಂಡುಬರುತ್ತವೆ:

೧. ದೇವತೆಗಳು, ಚಾರಣಮುನಿಗಳು, ವಿದ್ಯಾಧರರು ಅಕೃತ್ರಿಮ ಚೈತ್ಯಾಲಯಗಳ ದರ್ಶನಭಾಗ್ಯವನ್ನು ಪಡೆಯುವುದು.
೨. ದೇವ-ನಾರಕ- ತಿರ್ಯಕ್-ಮನುಷ್ಯಗತಿಗಳಲ್ಲಿ ಜೀವನು ತನ್ನ ಕರ್ಮಗಳಿಗನುಸಾರವಾಗಿ ಸುತ್ತುವುದು.
೩. ದೇವಗತಿಯಲ್ಲಿರುವಾಗ ಆಯುಷ್ಯವು ಇನ್ನಾರು ತಿಂಗಳಿದೆ ಎನ್ನುವಾಗ ಹುಟ್ಟಿನಿಂದಲೇ ಸಹಜವಾಗಿ ಬಂದ ಹೂವಿನ ಹಾರವು ಬಾಡುವುದು.
೪. ದೇವತೆಗಳು ಮರಣಭೀತಿಯಿಂದಿರುವಾಗ ಸಾಮಾನಿಕ ದೇವತೆಗಳು ಅವರಿಗೆ ಉಪದೇಶವನ್ನು ನೀಡುವುದು.

೫. ನಾನಾ ಕಾರಣಗಳಿಂದ ವೈರಾಗ್ಯವನ್ನು ಪಡೆದು ದೀಕ್ಷಿತರಾಗುವುದು.

೬. ಅನುಪ್ರೇಕ್ಷೆಗಳ ಭಾವವನ್ನು ಚಿಂತಿಸುವುದು.

೭. ಪಂಚನಮಸ್ಕಾರವನ್ನು ಕೊನೆಯಕಾಲದಲ್ಲಿ ಬಿಡದೆ ಜಪಿಸುವುದು ಅಥವಾ ಜಪಿಸುವಂತೆ ಮಾಡುವುದು.

೮. ದಾನಾನುಮೋದನೆಯಿಂದ ಸದ್ಗತಿ ಪ್ರಾಪ್ತಿಯಾಗುವುದು.

೯. ಯಾವುದೋ ಒಂದು ವಿಶೇಷ ಸಂದರ್ಭದಲ್ಲಿ ಜಾತಿಸ್ಮರಣೆ ಉಂಟಾಗುವುದು.

೧೦. ಮುನಿಗಳು ತಪಸ್ಸಿಗೆ ನಿಂತ ಭೂಮಿಯ ಮೇಲೆ ವಿಮಾನವು ಚಲಿಸದೆ ನಿಲ್ಲುವುದು.

೧೧. ನಿದಾನ ಶಲ್ಯದಿಂದ ಪ್ರಾಣಬಿಡುವುದು.

೧೨. ಅವಧಿ ಜ್ಞಾನಿಗಳಾದ ಮುನಿಗಳಿಂದ ಪೂರ್ವಜನ್ಮವೃತ್ತಾಂತವನ್ನು ತಿಳಿಯುವುದು.

೧೩. ತೀರ್ಥಂಕರನಾಗುವ ಜೀವನು ಭೂಮಿಯಲ್ಲಿ ತಾಯಿಯ ಗರ್ಭಕ್ಕೆ ಬಂದು ನೆಲೆಸಿದಾಗ ದೇವೇಂದ್ರನ ಆಸನ ಕಂಪನವಾಗುವುದು.

೧೪. ತೀರ್ಥಂಕರ ಮಾತೆ ಹದಿನಾರು ಸ್ವಪ್ನಗಳನ್ನು ಕಾಣುವುದು.

೧೫. ತೀರ್ಥಂಕರರು ಹುಟ್ಟುವ ರಾಜ್ಯದಲ್ಲಿ ರತ್ನವೃಷ್ಟಿಮಾಡುವಂತೆ ದೇವೇಂದ್ರನು ಕುಬೇರನಿಗೆ ಆಜ್ಞೆ ಮಾಡುವುದು.

೧೬. ದೇವತೆಗಳು ಬಂದು ಜಿನಮಾತೆಯ ಸೇವೆಯಲ್ಲಿ ನಿಲ್ಲುವುದು.

೧೭. ಜಿನಶಿಶುವು ಗರ್ಭದಲ್ಲಿರುವಾಗ ತಾಯಿಗೆ ಗರ್ಭಧಾರಣೆಯ ಯಾವ ಬಾಧೆಯೂ ಆಗದಿರುವುದು.

೧೮. ಜಿನಮಾತೆಗೆ ಮಾಯಾನಿದ್ರೆಯನ್ನುಂಟುಮಾಡಿ, ಮಾತೆಯ ಮುಂದೆ ಮಾಯಾಶಿಶುವನ್ನಿರಿಸಿ ಶಚೀದೇವಿಯು ಜಿನಬಾಲಕನನ್ನು ಜನ್ಮಾಭಿಷೇಕಕ್ಕಾಗಿ ಕರೆದೊಯ್ಯುವುದು.

೧೯. ತೀರ್ಥಂಕರರು ಗರ್ಭದಲ್ಲಿ ಉದಯಿಸುವುದರಿಂದ ಹಿಡಿದು ಮುಕ್ತರಾಗುವವರೆಗೆ ದೇವತೆಗಳು ಪಂಚಕಲ್ಯಾಣವನ್ನು ನೆರವೇರಿಸುವುದು.

೨೦. ತೀರ್ಥಂಕರರ ತಪೋಭೂಮಿ ಸುಭಿಕ್ಷವಾಗಿರುವುದು.

೨೧. ಪ್ರಾಣಿಗಳು ಪರಸ್ಪರ ವೈರಭಾವವನ್ನು ತೊರೆಯುವುದು.

೨೨. ದೇವತೆಗಳಿಂದ ಸಮವಸರಣ ಸಭೆಯು ರಚನೆಯಾಗುವುದು.

ಹೀಗೆ ಸಿದ್ಧವಾದ ಕೆಲವು ಆಶಯಗಳು ಪುರಾಣಕಾವ್ಯದುದ್ದಕ್ಕೂ ಕಂಡುಬರುತ್ತವೆ. ಇವುಗಳೇ ಅಲ್ಲದೆ ಕುಲಕರರ ವಿಚಾರ, ಭೋಗಭೂಮಿಯ ವಿವರ, ಲೋಕವಿಚಾರ, ಸಮವಸರಣ ರಚನಾ ವಿನ್ಯಾಸವೇ ಮೊದಲಾದ ಎಡೆಗಳಲ್ಲಿಯೂ ಜೈನ ಪೌರಾಣಿಕತೆಯ ಸಿದ್ಧ ಸ್ವರೂಪಗಳನ್ನು ಕಾಣುತ್ತೇವೆ.

**ಲೌಕಿಕ ಕಾವ್ಯಗಳು (ವೈದಿಕ ಪುರಾಣ ಆಶಯಗಳು):**

ಕವಿ ರತ್ನತ್ರಯರ ಪೌರಾಣಿಕ ಮನೋಧರ್ಮವು ವಿಭಿನ್ನ ದೃಷ್ಟಿಕೋನಗಳಲ್ಲಿ ಕೆಲಸಮಾಡಿದೆ. ಜೈನಪುರಾಣಗಳಲ್ಲಿ ಜೈನ ಪುರಾಣದ ಪರಿಕಲ್ಪನೆಯೂ ಲೌಕಿಕ ಕಾವ್ಯಗಳಲ್ಲಿ ವೈದಿಕ ಪುರಾಣ ಪರಿಕಲ್ಪನೆಯೂ ಈ ಕವಿಗಳಲ್ಲಿ ಕಂಡುಬರುತ್ತದೆ. ಪಂಪ-ರನ್ನರ ಆಗಮಿಕ-ಲೌಕಿಕ ಕಾವ್ಯಗಳ ಹಿನ್ನೆಲೆಯಲ್ಲಿ ಅವರ ಈ ದೃಷ್ಟಿಭೇದ ಕಂಡುಬರುತ್ತದೆಯಲ್ಲದೆ ಅವರ ವಿಶಾಲ ಮನೋಧರ್ಮವನ್ನು ಈ ಮೂಲಕ ಗುರುತಿಸಿಕೊಳ್ಳಬಹುದಾಗಿದೆ. ಮುಂದೆ ಪಂಪ-ರನ್ನರ ಲೌಕಿಕ ಕೃತಿಗಳ ಸಂಕ್ಷಿಪ್ತ ಕಥಾಸಾರವನ್ನು ನೀಡಲಾಗಿದೆ:

**ವಿಕ್ರಮಾರ್ಜುನ ವಿಜಯ: ಕಥಾಸಾರ**

ಹಸ್ತಿನಪುರದ ರಾಜ ಶಂತನು. ಆತನ ಮಗ ಭೀಷ್ಮ, ತನ್ನ ತಂದೆ ಇಷ್ಟಪಟ್ಟ ಸತ್ಯವತಿಯನ್ನು ಆತನಿಗೆ ಮದುವೆ ಮಾಡಿಸಿಕೊಡಬೇಕೆಂಬ ಹಿನ್ನೆಲೆಯಲ್ಲಿ ಭೀಷ್ಮನು ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿ ರಾಜ್ಯತ್ಯಾಗಮಾಡಿದನು. ಶಂತನು ಸತ್ಯವತಿಯರಿಗೆ ಕಾಲಕ್ರಮದಲ್ಲಿ ಚಿತ್ರಾಂಗ ಮತ್ತು ವಿಚಿತ್ರವೀರ್ಯರೆಂಬ ಮಕ್ಕಳು ಹುಟ್ಟಿದರು. ಶಂತನು ಹಾಗೂ ಆತನ ಮಕ್ಕಳೂ ತೀರಿಕೊಂಡಾಗ ವಿಚಿತ್ರ ವೀರ್ಯನ ಪತ್ನಿಯರಾದ ಅಂಬಿಕೆ ಮತ್ತು ಅಂಬಾಲಿಕೆಯರಿಗೆ ವ್ಯಾಸಮುನಿಗಳಿಂದ ಧೃತರಾಷ್ಟ್ರ ಮತ್ತು ಪಾಂಡು ಎಂಬುವರು ಹುಟ್ಟಿದರು.

ಶೂರಸೇನನ ಮಗಳಾದ ಕುಂತಿಯು ತನಗೆ ದುರ್ವಾಸರು ಕೊಟ್ಟಿದ್ದ ಐದು ವರಗಳಲ್ಲಿ ಒಂದನ್ನು ಪರೀಕ್ಷಿಸಲಾಗಿ ಅವಳಿಗೆ ಸೂರ್ಯದೇವನ ಮೂಲಕ ಕರ್ಣನು

ಜನಿಸಿದನು. ಕುಂತಿಯು ತನ್ನ ಕನ್ಯಾವಸ್ಥೆಯಲ್ಲಿಯೇ ಮಗನನ್ನು ಪಡೆದುದರಿಂದ ಭೀತಳಾಗಿ ಆ ಮಗುವನ್ನು ಗಂಗೆಯಲ್ಲಿ ತೇಲಿಬಿಟ್ಟಳು. ಸೂತನೊಬ್ಬನು ಆ ಮಗುವನ್ನು ಪಡೆದು ಸಾಕಿದನು. ಕುಂತಿ- ಮಾದ್ರಿಯರು ಪಾಂಡುವನ್ನು ಮದುವೆಯಾದರು. ಶಾಪಗ್ರಸ್ತನಾದ ಪಾಂಡುವಿನಿಂದ ಮಕ್ಕಳನ್ನು ಪಡೆಯಲಾಗದೆ ತನಗೆ ಲಭಿಸಿದ್ದ ವರಗಳ ಮೂಲಕ ಕುಂತಿಯು ಮಕ್ಕಳನ್ನು ಪಡೆದುಕೊಂಡಳು. ಮಾದ್ರಿಯೂ ಕೂಡ ಅಕ್ಕ ಕುಂತಿಯ ಬಳಿಯಿದ್ದ ವರಗಳ ಸಹಾಯದಿಂದ ಮಕ್ಕಳನ್ನು ಪಡೆದಳು. ಕುಂತಿಗೆ ಧರ್ಮರಾಯ, ಭೀಮ, ಅರ್ಜುನರೂ ಮಾದ್ರಿಗೆ ನಕುಲ-ಸಹದೇವರೂ ಜನಿಸಿದರು.

ಧೃತರಾಷ್ಟ್ರನು ಗಾಂಧಾರಿಯಲ್ಲಿ ನೂರು ಮಕ್ಕಳನ್ನು ಪಡೆದನು. ಪಾಂಡವ ಕೌರವರು ದ್ರೋಣರಿಂದ ವಿದ್ಯಾಭ್ಯಾಸವನ್ನು ಪಡೆದುಕೊಂಡರು. ಚಿಕ್ಕಂದಿನಿಂದಲೇ ಇವರ ನಡುವೆ ವೈರವು ಬೆಳೆದು ಬಂದಿತು. ಕರ್ಣನು ದುರ್ಯೋಧನನ ಆಪ್ತನಾದನು.

ಪಾಂಡವರನ್ನು ವಾರಣಾವತದಲ್ಲಿ ಇರಿಸಲಾಯತು. ಮುಂದೆ ದ್ರುಪದನು ಏರ್ಪಡಿಸಿದ್ದ ಸ್ವಯಂವರದಲ್ಲಿ ಅರ್ಜುನನು ಪಂಥವನ್ನು ಗೆದ್ದು ದ್ರೌಪದಿಯನ್ನು ಮದುವೆಯಾದನು. ಅನಂತರ ಕೃಷ್ಣನ ತಂಗಿ ಸುಭದ್ರೆಯನ್ನು ಮದುವೆಯಾದನು. ಧರ್ಮರಾಯನು ರಾಜಸೂಯಯಾಗವನ್ನು ಕೈಗೊಂಡನು. ದುರ್ಯೋಧನನಿಗೆ ಅವರ ಏಳಿಗೆಯನ್ನು ಕಂಡು ವೈರವು ಹೆಚ್ಚುತ್ತಾ ಹೋಯಿತು. ಉಪಾಯಾಂತರದಿಂದ ಧರ್ಮರಾಯನನ್ನು ದ್ಯೂತಕ್ಕೆ ಎಳೆದು ಮೋಸದಿಂದ ಅವನನ್ನು ಸೋಲಿಸಿದನು. ಧರ್ಮರಾಯನು ತನ್ನ ತಮ್ಮಂದಿರಾದಿಯಾಗಿ ಸರ್ವಸ್ವವನ್ನೂ ಸೋತನು. ಸಭೆಯಲ್ಲಿ ದ್ರೌಪದಿಯನ್ನು ದುಶ್ಶಾಸನನು ಅವಮಾನಗೊಳಿಸಿದನು. ಆತನ ಕರುಳಿನ ಮಾಲೆಯನ್ನು ತಲೆಗೆ ಮುಡಿಯುವವರೆಗೆ ತನ್ನ ಬಿಚ್ಚಿದ ಕೂದಲನ್ನು ಕಟ್ಟುವುದಿಲ್ಲವೆಂದು ದ್ರೌಪದಿ ಶಪಥ ಮಾಡಿದಳು. ಭೀಮನು ಆ ಶಪಥವನ್ನು ತಾನು ಪೂರೈಸಿಕೊಡುವುದಾಗಿ ಪ್ರತಿಜ್ಞೆ ಮಾಡಿದನು.

ಮುಂದೆ ಪಾಂಡವರ ವನವಾಸ ಕಾಲ ಮುಗಿಯಿತು. ವಿರಾಟನಗರದಲ್ಲಿ ವೇಷ ಮರೆಸಿಕೊಂಡು ಅಜ್ಞಾತವಾಸವನ್ನು ಅವರು ಮಾಡಿದರು. ಕೃಷ್ಣನ ದೌತ್ಯ ಫಲಕಾರಿಯಾಗದೆ ಪಾಂಡವ - ಕೌರವರಲ್ಲಿ ಘನಘೋರಯುದ್ಧ ನಡೆಯಿತು.

ಭೀಮ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಂಡನು. ಕೊನೆಗೆ ಪಾಂಡವರಿಗೇ ವಿಜಯ ದೊರೆಯಿತು. ಧರ್ಮರಾಯನ ಅಪೇಕ್ಷೆಯಂತೆ ಅರ್ಜುನನಿಗೆ ಸುಭದ್ರೆಯೊಡನೆ ರಾಜ್ಯಪಟ್ಟಾಭಿಷೇಕವು ನಡೆಯಿತು.

**ಸಾಹಸಭೀಮವಿಜಯ:**

**ಕಥಾಸಾರ:** ಧರ್ಮರಾಯ ಎಲ್ಲಿಯಾದರೂ ಹಿರಿಯರ ಬೋಧನೆಗೆ ಓಗೊಟ್ಟು ಸಂಧಿಯನ್ನು ಮಾಡಿಕೊಂಡುಬಿಟ್ಟರೆ ತನ್ನ ಶಪಥದ ಗತಿಯೇನು ಎಂದು ಚಿಂತಿಸಿ ದ್ರೌಪದಿ ಕಳವಳಗೊಂಡು ಭೀಮನಿದ್ದೆಡೆಗೆ ಬಂದಳು. ಕುರುಕ್ಷೇತ್ರದಲ್ಲಿ ಭೀಮನನ್ನು ಕಂಡು ಹೊಗಳಿ, ತನ್ನ ಶಪಥವನ್ನು ಹಾಗೂ ಭೀಮಸೇನನ ಪ್ರತಿಜ್ಞೆಯನ್ನು ನೆನಪು ಮಾಡಿಕೊಡುವವಳಂತೆ ನುಡಿದು, ಭೀಮಸೇನನಿಂದ ಆಶ್ವಾಸನೆ ಪಡೆದು ಹಿಂದಿರುಗಿದಳು.

ಭೀಷ್ಮ ದ್ರೋಣಾದಿಗಳನ್ನು ಕಳೆದುಕೊಂಡ ದುರ್ಯೋಧನನು ಅವರು ಜೋಳದ ಪಾಳಿಯನ್ನು ತೀರಿಸಲಿಲ್ಲವೆಂದು ನಿಂದಿಸಿದನು. ಸಂಜಯನ ಬುದ್ಧಿವಾದವನ್ನಾಗಲಿ, ಗಾಂಧಾರಿ - ಧೃತರಾಷ್ಟ್ರರ ಬುದ್ಧಿವಾದವನ್ನಾಗಲಿ ದುರ್ಯೋಧನನು ಕೇಳಲಿಲ್ಲ. ಪಾಂಡವರೊಂದಿಗೆ ಸಂಧಿಮಾಡಿಕೊಳ್ಳಲು ಒಪ್ಪದೆ, ಭೀಷ್ಮರನ್ನು ಕಂಡು ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ನಿರ್ಧರಿಸಿದನು. ಭೀಷ್ಮರ ಸಲಹೆಯಂತೆ ಬಲರಾಮಾದಿಗಳು ಬರುವವರೆಗೆ ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡನು. ಪಾಂಡವರು ಅಲ್ಲಿ ಅವನಿರುವ ಸುಳಿವನ್ನು ಅರಿತು ಅವನನ್ನು ಕೊಳದಿಂದ ಹೊರಗೆ ಎಬ್ಬಿಸಲು ಪ್ರಯತ್ನಿಸಿದರು. ಭೀಮಸೇನನ ಸಿಂಹನಾದದಂತಹ ನುಡಿಗಳನ್ನು ಕೇಳಿ ಮೇಲೆದ್ದು ಬಂದು ದುರ್ಯೋಧನನು ಯುದ್ಧಕ್ಕೆ ಸಿದ್ಧನಾದನು. ಬಲರಾಮನೂ ಅಷ್ಟರಲ್ಲಿ ಅಲ್ಲಿಗೆ ಬಂದನು. ಭೀಮ-ದುರ್ಯೋಧನರಲ್ಲಿ ಗದಾಯುದ್ಧವಾಯಿತು. ದುರ್ಯೋಧನನೇ ಮೊದಲು ಮೇಲ್ಮೆಯನ್ನು ಹೊಂದಿದನು. ಕೃಷ್ಣನ ಸೂಚನೆಯಂತೆ ಭೀಮನು ದುರ್ಯೋಧನನ ತೊಡೆಯ ಭಾಗಕ್ಕೆ ಪೆಟ್ಟು ಕೊಟ್ಟು ಆತನನ್ನು ಕೆಳಗುರುಳಿಸಿದನು. ದ್ರೌಪದಿ-ಭೀಮಸೇನರ ಪ್ರತಿಜ್ಞೆ ನೆರವೇರಿತು.

ಅಶ್ವತ್ಥಾಮನು ದುರ್ಯೋಧನನಿಗಾದ ಅವಸ್ಥೆಯನ್ನು ಕಂಡು ಮರುಗಿದನು. ಪ್ರತೀಕಾರಕ್ಕಾಗಿ ಪಾಂಡವರ ತಲೆಯನ್ನು ತರುತ್ತೇನೆಂದು ಹೋದವನು,

ಪಾಂಡುಪುತ್ರರ ತಲೆಗಳನ್ನು ಕತ್ತರಿಸಿ ತಂದನು. ದುರ್ಯೋಧನನು ಇದರಿಂದ ಬಹಳವಾಗಿ ದುಃಖಿಸಿದನು; ಪಶ್ಚಾತ್ತಾಪಗೊಂಡನು. ಶಿಶುಹತ್ಯಾ ದೋಷ ನಿವಾರಣೆಗಾಗಿ ತಪವನ್ನು ಕೈಗೊಳ್ಳಲು ಅಶ್ವತ್ಥಾಮನಿಗೆ ಸೂಚಿಸಿದನು. ಕೊನೆಗೆ ಕುರುಕುಲಾರ್ಕನಾದ ದುರ್ಯೋಧನನು ಸೂರ್ಯಾಸ್ತದೊಂದಿಗೆ ತಾನೂ ಅಸ್ತಂಗತನಾದನು. ಕರ್ಣನು ತಮ್ಮ ಹಿರಿಯಣ್ಣನಾಗಬೇಕೆಂಬುದನ್ನು ತಿಳಿದ ಪಾಂಡವರು, ಅವನನ್ನು ಕೊಂದುದಕ್ಕಾಗಿ ದುಃಖಿಸಿದರು. ಭೀಮನ ಪಟ್ಟಾಭಿಷೇಕ ನೆರವೇರಿತು. ಕುಂತಿ, ಗಾಂಧಾರಿ, ಧೃತರಾಷ್ಟ್ರರು ತಪೋವನಕ್ಕೆ ತೆರಳಿದರು.

**ವೈದಿಕ ಪುರಾಣಾಶಯಗಳು :**

ಲೌಕಿಕ ಕಾವ್ಯದಲ್ಲಿ ಅವರು ತೆಗೆದುಕೊಂಡಿರುವ ಕಥೆ ವ್ಯಾಸಭಾರತದ್ದು. ಕವಿಗಳು ಜೈನ ಧರ್ಮೀಯರಾದರೂ ವೈದಿಕ ಭಾರತದ ಕಥೆಯನ್ನು ನಿರೂಪಿಸುವಾಗ ಅಲ್ಲಿಯ ಮನೋಧರ್ಮಕ್ಕೆ ತಮ್ಮನ್ನು ರೂಢಿಸಿಕೊಂಡಂತೆ ಕಂಡುಬರುತ್ತಾರೆ. ಪಂಪನಲ್ಲಂತೂ ಈ ಅಂಶ ನಿಚ್ಚಳವಾಗಿ ಕಂಡುಬರುತ್ತದೆ.

ಪಂಪನ ತಂದೆ ಮೂಲತಃ ಬ್ರಾಹ್ಮಣನಾಗಿದ್ದವನು. ಅನಂತರದಲ್ಲಿ ಜೈನಧರ್ಮದ ಶ್ರೇಷ್ಠತೆಗೆ ಮನವೊಲಿದು ಜೈನ ಮತಾವಲಂಬಿಯಾದವನು. ಹೀಗಾಗಿ ಪಂಪನಲ್ಲಿ ಆ ಸಂಸ್ಕಾರದ ಹಿನ್ನೆಲೆ ಇದ್ದಿತು. ಆದ್ದರಿಂದಲೇ ಅವನ ವಿಕ್ರಮಾರ್ಜುನ ವಿಜಯ ಕಾವ್ಯದಲ್ಲಿ ವೈದಿಕ ಪುರಾಣ ಪರಿಕಲ್ಪನೆಗೆ ವಿಶೇಷ ಎಡೆ ಇದೆ. ಅದೇ ರನ್ನನಲ್ಲಿ, ಕಾವ್ಯ ಕಿರಿದಾದುದರಿಂದಲೂ ಗದಾಯುದ್ಧ ಪ್ರಸಂಗವನ್ನುಳಿದು ಉಳಿದ ವಿಚಾರಗಳನ್ನು ಸಿಂಹಾವಲೋಕನ ಕ್ರಮದಿಂದ ಹೇಳಿರುವುದರಿಂದಲೂ ಪೌರಾಣಿಕಾಂಶಗಳೂ ಸಹ ರೇಖಾಮಾತ್ರವಾಗಿ ಕಂಡುಬರುತ್ತವೆ. ಪಂಪನಲ್ಲಿ ಕಂಡುಬರುವಷ್ಟು ದಟ್ಟವಾದ ವೈದಿಕ ಪೌರಾಣಿಕ ವಿವರಗಳು ರನ್ನನಲ್ಲಿ ಕಂಡುಬಾರವು. ಇದಕ್ಕೆ ಅವನು ಬೆಳೆದುಬಂದ ಸಂಸ್ಕಾರವೂ ಒಂದು ಕಾರಣವಾಗಿರಬಹುದು.

ಪಂಪ - ರನ್ನರಿಬ್ಬರೂ ತಮ್ಮ ಲೌಕಿಕ ಕಾವ್ಯವನ್ನು ನಾರಾಯಣನ ಸ್ತುತಿಯಿಂದ ಪ್ರಾರಂಭಿಸಿದ್ದಾರೆ. ಪೌರಾಣಿಕತೆಯ ನಿರೂಪಣೆ ಅಲ್ಲಲ್ಲಿ ಉಪಮೆಗಳ ಮೂಲಕ, ವಾಕ್ಯಗಳ ಮೂಲಕ, ವಾಕ್ಯಸರಣಿಗಳ ಮೂಲಕ, ಕಥಾ ಮಾದರಿಯ ಮೂಲಕ ಕಂಡುಬರುತ್ತದೆ.

ಉದಾ. ಗೆ: 'ಪೊಸತಲರ್ದ ಬಿಳಿಯ ತಾವರೆಯೆಸಟ್ಗಳ ನಡುವಿರ್ಪ ಸಿರಿ' (ವಿಕ್ರವಿ. I-40), 'ಹರಜಟಾಜೂಟಕ್ಕೆ ಚಂದ್ರಲೇಖೆಯಿರ್ಪಂತೆ' (ವಿಕ್ರವಿ. Iನೇ ಆಶ್ವಾಸ), 'ಕೈಟಭಾರಾತಿಯ ವಿಶಾಲೋರಸ್ಥಳಕ್ಕೆ ಕೌಸ್ತುಭಮಿರ್ಪಂತೆ' (ವಿಕ್ರವಿ. I ನೇ ಆಶ್ವಾಸ)- ಎಂಬ ಎಡೆಗಳಲ್ಲಿ ಲಕ್ಷ್ಮಿ ತಾವರೆಯಲ್ಲಿ ವಾಸಿಸುವವಳೆಂದೂ ಹರನ ಜಟೆಯಲ್ಲಿ ಚಂದ್ರಮನಿರುವನೆಂದೂ, ವಿಷ್ಣುವಿನ ಎದೆಯಲ್ಲಿ ಕೌಸ್ತುಭಹಾರ ಅಲಂಕರಿಸಿರುವುದೆಂದೂ ಬಂದಿರುವ ನಿರೂಪಣೆಗಳು ಜನಪದರ ಮನದಲ್ಲಿ ಬೇರೂರಿರುವ ಪೌರಾಣಿಕ ಚಿತ್ರರೂಪಗಳೇ ಆಗಿವೆ.

ದುರ್ಯೋಧನನು ಯುದ್ಧಸನ್ನಾಹ ಭೇರಿಯನ್ನು ಮಾಡಿದಾಗ ತಾವರೆಯ ಆಸನದಿಂದ ಬ್ರಹ್ಮನೇ ಕೆಳಗುರುಳಿದನು. ಭಯದಿಂದ ಗೌರಿ ತಲ್ಲಣಿಸಿ ಈಶ್ವರನನ್ನು ಭದ್ರವಾಗಿ ತಬ್ಬಿಕೊಂಡಳು (ವಿಕ್ರವಿ. X-26). ಎರಡೂ ಪಕ್ಷದ ಚದುರಂಗ ಸೇನೆಯು ಘರ್ಷಿಸಿದಾಗ ಸೈನ್ಯದ ಹೊರೆಗೆ ಕುಗ್ಗಿ ಆದಿಶೇಷನು ತಲೆ ಕೊಡಹಲು ಭೂಮಿಯು ಬೊದಿಲ್ಲನೆ ಬಿದ್ದು ಹೋಯಿತು; ಮಹಾಕೂರ್ಮನ ಬೆನ್ನು ನುಚ್ಚು ನೂರಾಯಿತು. (ವಿಕ್ರ.ವಿ X-70). ಕುರುಕ್ಷೇತ್ರದಲ್ಲಿ ಪಾಂಡವರ ಚದುರಂಗ ಸೇನೆ ನೆರೆದಾಗ ಭೂಭಾರವು ಇಮ್ಮಡಿಸಲು ಆದಿಶೇಷನು ಇಂದಿನ ಈ ಹಿಂಸೆ ಎಂದಿನ ರೀತಿಯದಲ್ಲವೆಂದು ಕಣ್ಣು ಕತ್ತಲೆಯಾಗಲು ಹೆಡೆಯಿಂದ ರತ್ನಗಳು ಚೆಲ್ಲಾಪಿಲ್ಲಿಯಾಗಿ ಸೂಸಲು ಸಹಿಸಲಾರದೆ ಮುಲಕಿದನು (ವಿಕ್ರ ವಿ. X 99). ಕೃತಯುಗ ಪ್ರಾರಂಭದಲ್ಲಿ ತ್ರಿಪುರವು ರುದ್ರನಿಂದ ಬೆಂದಿತು (ಸಾಹಭೀ.), ಅಷ್ಟದಿಕ್ಪಾಲಕರು ಪರಬ್ರಹ್ಮ, ಶಿವ, ಪಾರ್ವತಿ, ಷಣ್ಮುಖ, ಗಣಪತಿ ಮೊದಲಾದವರು ಕುತೂಹಲಗೊಂಡು ಗದಾಯುದ್ಧವನ್ನು ನೋಡಲು ನಭದಲ್ಲಿ ನೆರೆದರು (ಸಾಹಭೀ. VII-66), ಲಕ್ಷ್ಮಿ ಸಾಗರದಲ್ಲಿ ಹುಟ್ಟಿದವಳು, ಪದ್ಮನಾಭನ ಹೃದಯದಲ್ಲಿ ನೆಲೆಸಿದವಳು (ಸಾಹಭೀ. IX-4)- ಎಂಬೀ ಎಡೆಗಳಲ್ಲಿ ಜೈನೇತರ ಪುರಾಣಾಂಶಗಳಿವೆ.

**ವೈದಿಕ ಪುರಾಣ ಕಥೆಗಳು:**

ಪಂಪನಲ್ಲಿ ಕಥಾರೂಪದಲ್ಲಿಯೂ ವೈದಿಕ ಪುರಾಣ ವಿವರಗಳು ಲಭಿಸುತ್ತವೆ.

ಮನುಕುಲದ ಆರಂಭದ ವಿವರಗಳ ಬಗೆಗೆ, ವಂಶೋತ್ಪತ್ತಿಯ ವಿವರಗಳ ಬಗೆಗೆ ಜೈನಪುರಾಣಕ್ಕಿಂತ ಬೇರೆಯದೇ ಆದ ಪ್ರಪಂಚಕ್ಕೆ ಪಂಪ ನಮ್ಮನ್ನು ಕರೆದುಕೊಂಡು ಹೋಗಿದ್ದಾನೆ.

ವಿಷ್ಣುವಿನ ನಾಭಿಕಮಲದಿಂದ ಬ್ರಹ್ಮನು ಜನಿಸಿದನು. ಅವನ ಹೃತ್ಕಮಲದಿಂದ ಪುಲಹ, ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ ಮತ್ತು ಕ್ರತುಗಳು ಹುಟ್ಟಿದರು. ಹೀಗೆ ಹಿರಣ್ಯಗರ್ಭ ಬ್ರಹ್ಮನ ಮನಸ್ಸಿನಿಂದ ಹುಟ್ಟಿದ ಆರು ಮಕ್ಕಳಲ್ಲಿ ಮರೀಚಿಯ ಮಗ ಕಶ್ಯಪ. ಅವನ ಮಗ ಸೂರ್ಯ. ಅವನಿಂದ ಬಂದ ವಂಶವಾದುದರಿಂದ ಸೂರ್ಯವಂಶವೆಂದು ಹೆಸರು ಬಂತು......... ಅತ್ರಿಯ ಮಗ ಸೋಮ. ಸೋಮವಂಶವು ಅವನಿಂದಲೇ ಪ್ರಸಿದ್ಧಿಗೆ ಬಂದಿತು. ಸೋಮವಂಶದ ರಾಜರಲ್ಲಿ ದುಷ್ಯಂತನ ಮಗ ಭರತನೆಂಬುವನು ತುಂಬ ಪ್ರಸಿದ್ಧನು. ಸಚ್ಚರಿತ್ರನೂ ಅಪಾರ ಗುಣಶಾಲಿಯೂ ಆದ ಭರತನು ತನ್ನ ಯಶಸ್ಸಿನಿಂದಾಗಿ ತನ್ನ ಕುಲವೂ ಕಥೆಯೂ ಭಾರತ ಎಂದೇ ಪ್ರಸಿದ್ಧವಾಗುವ ಹಾಗೆ ಆಳಿದನು......... (I-59-63).

ಆದಿ ಪುರಾಣದಲ್ಲಿ ವೃಷಭನ ಮಗ ಭರತನಿಂದ ಈ ದೇಶಕ್ಕೆ 'ಭಾರತ' ಎಂಬ ಹೆಸರು ಬಂದಿತೆಂದು ನಿರೂಪಿಸಿದ್ದರೆ, ಇಲ್ಲಿ ವೈದಿಕ ಪರಂಪರೆಗೆ ಅನುಗುಣವಾಗಿ ದುಷ್ಯಂತನ ಮಗ ಭರತನಿಂದ ಆ ಹಿರಿಮೆ ಸ್ಥಾಪಿತವಾದುದರ ಬಗೆಗೆ ಹೇಳಿದ್ದಾನೆ. ಈ ಭಾರತದ ಕಥೆಯಲ್ಲಿ ಮುಖ್ಯ ಕಥೆಯ ಜೊತೆ ಜೊತೆಗೇ ಅನೇಕ ಪೌರಾಣಿಕ ಉಪಕಥೆಗಳು ಕಂಡುಬರುತ್ತವೆ. ಕೆಲವೆಡೆ ಅವುಗಳಲ್ಲಿ ಜನಪದ ಕಥಾಶಯಗಳು ಕಂಡುಬರುತ್ತವೆ.

ಒಮ್ಮೆ ಗಂಗಾ ಪ್ರಾಂತದಲ್ಲಿ ಉಪಚರಿತನೆಂಬ ರಾಜನು 'ಮುಕ್ತಾವತಿ' ಎಂಬ ತೊರೆಯ ಬಳಿ ವಿಶ್ರಮಿಸಿಕೊಳ್ಳುತ್ತಿದ್ದನು. ಕೋಳಾಹಳವೆಂಬ ಪರ್ವತರಾಜನ ಮಗಳಾದ ಗಿರಿಜೆ ಎಂಬ ಕನ್ಯೆಯನ್ನು ಕಂಡು ಪ್ರೀತಿಸಿ, ಮದುವೆಯಾದನು. ಒಂದು ದಿನ ಉಪಚರಿತನು ಇಂದ್ರನ ಸಭೆಗೆ ಹೋಗಿದ್ದು ಋತುಕಾಲ ಪ್ರಾಪ್ತಿಯಾಗಿದ್ದ ತನ್ನ ನಲ್ಲೆಯ ಬಳಿಗೆ ಹಿಂದಿರುಗಲಾರದೆ ಅವಳನ್ನೇ ನೆನೆಯುತ್ತಿದ್ದನು. ಆಗ ಇಂದ್ರಿಯ ಸ್ಖಲನವಾಗಲು ಅದನ್ನು ಒಂದು ಬಾಳೆಯ ಎಲೆಯಲ್ಲಿಟ್ಟು ಮುಚ್ಚಿ ಅವಳ ಬಳಿಗೆ ತಾನು ಸಾಕಿದ್ದ ಗಿಣಿಯ ಕೈಯಲ್ಲಿ ಕೊಟ್ಟು ಕಳುಹಿಸಿದನು. ಅದನ್ನು ತರುತ್ತಿದ್ದ ಗಿಣಿಯು ಯಮುನಾ ನದಿಯ ಮೇಲೆ ಹಾರುತ್ತಿದ್ದಾಗ ಒಂದು ಗಿಡುಗವು ಅಟ್ಟಿಸಿಕೊಂಡು ಬಂದು ಅದನ್ನು ಪರಚಿ ಗಾಯಗೊಳಿಸಿತು. ಗಿಣಿಯು ಕಚ್ಚಿಕೊಂಡು ತರುತ್ತಿದ್ದ ಬಾಳೆಲೆಯು ಜಾರಿಬಿದ್ದು ನದಿಯಲ್ಲಿದ್ದ ಒಂದು ಬಾಳೆಮೀನು ಆ ವೀರ್ಯವನ್ನು ನುಂಗಿತು. ಅದು ಗರ್ಭಧರಿಸಿತು. ಒಂದು ದಿನ ಬೆಸ್ತರವನು ಬಲೆಹಾಕಿ ಆ ಮೀನನ್ನು ಹಿಡಿದು ತನ್ನ ಅರಸನ ಬಳಿಗೆ ತೆಗೆದುಕೊಂಡು ಹೋದನು. ಅಲ್ಲಿ

ಕೊಯ್ದು ನೋಡಿದರೆ ಅದರ ಗರ್ಭದಲ್ಲಿ ಒಂದು ಗಂಡು ಮಗು ಮತ್ತು ಒಂದು ಹೆಣ್ಣು ಮಗು! ಅವರಿಗೆ ಮತ್ಸ್ಯಗಂಧಿ ಮತ್ತು ಮತ್ಸ್ಯಗಂಧ ಎಂದು ಹೆಸರಿಟ್ಟು, ದಾಶರಾಜನು ಸಾಕಿದನು (ವಿಕ್ರ. ವಿ. ಪ್ರಥಮಾಶ್ವಾಸ).

ಜನಪದ ಕಥೆಗಳಲ್ಲಿ ಗಿಳಿ-ಗಿಡುಗಗಳ ಪಾತ್ರ ಹಿರಿದು. ಇಲ್ಲಿ ಇಂದ್ರಸಭೆಗೆ ಹೋದದ್ದು, ಬಾಳೆ ಎಲೆಯಲ್ಲಿ ವೀರ್ಯವನ್ನು ಮುಚ್ಚಿ ಕಳುಹಿಸಿಕೊಟ್ಟದ್ದು, ಗಿಳಿ ಅದನ್ನು ತಲುಪಿಸಲು ಹೋದದ್ದು, ಮೀನು ಅದನ್ನು ನುಂಗಿ ಗರ್ಭಧರಿಸಿದ್ದು, ಮತ್ಸ್ಯಗಂಧ -ಮತ್ಸ್ಯಗಂಧಿಯರು ಮೀನಿನ ಹೊಟ್ಟೆಯಲ್ಲಿ ಹುಟ್ಟಿದ್ದು ಇವು ಇಲ್ಲಿ ಕಂಡು ಬರುವ್ ಪೌರಾಣಿಕ ಕಥಾಶಯಗಳಾಗಿವೆ. ಈ ಕಥೆಗಳು ನಮ್ಮನ್ನು ಅವಾಸ್ತವ ಪ್ರಪಂಚಕ್ಕೆ ಕರೆದೊಯ್ದರೂ ಅಲ್ಲಿಯ ರೋಚಕತೆಗೆ ಓದುಗರು ಮರುಳಾಗಬೇಕಾಗುತ್ತದೆ.

ಪರಾಶರ ಮುನಿಗಳ ವೃತ್ತಾಂತದಲ್ಲಿಯೂ ಈ ರೋಚಕತೆ ಅಡಗಿದೆ: ಪರಾಶರರು ಮತ್ಸ್ಯಗಂಧಿಯ ದುರ್ಗಂಧವನ್ನು ದೂರಮಾಡಿ ಯೋಜನಗಂಧಿಯನ್ನಾಗಿ ಮಾಡಿದುದು, ಜ್ಞಾನ ಸ್ವರೂಪಿಯಾದ ಮಹಾಮುನಿ ವ್ಯಾಸನು ಹುಟ್ಟುತ್ತಿದ್ದಂತೆ ಜಟೆಗಳಿಂದ ಕೂಡಿ, ಕೈಯಲ್ಲಿ ಭಿಕ್ಷಾಪಾತ್ರೆ, ಯೋಗ ದಂಡಗಳನ್ನು ಹಿಡಿದು ಜಿಂಕೆಯ ಚರ್ಮ ಧರಿಸಿ ಹುಟ್ಟಿದುದೂ ಪರಾಶರರು ಸತ್ಯವತಿಗೆ (ಮತ್ಸ್ಯಗಂಧಿಗೆ) ಮತ್ತೆ ಕನ್ಯತನವನ್ನು ಅನುಗ್ರಹಿಸಿದ್ದು - ಇಲ್ಲೆಲ್ಲಾ ಪೌರಾಣಿಕ ಆಶಯಗಳು ಕಂಡುಬರುತ್ತವೆ (ವಿಕ್ರವಿ. ಪ್ರಥಮಾಶ್ವಾಸ).

ಕೃಪ ಕೃಪೆಯರ ಹುಟ್ಟಿನ ಬಗೆಯ ವಿವರಗಳಲ್ಲಿಯೂ ಪೌರಾಣಿಕಾಂಶವು ಕಂಡುಬರುತ್ತದೆ.

ಗಂಗಾತೀರದಲ್ಲಿ ಸೂರ್ಯಪುರವೆಂಬ ಋಷಿಗಳ ಆಶ್ರಮದಲ್ಲಿ ಗೌತಮನೆಂಬ ಬ್ರಹ್ಮರ್ಷಿ ತಪಸ್ಸು ಮಾಡುತ್ತಿದ್ದನು. ಅವನಿಗೆ ಬಿಲ್ಲು ಬಾಣಗಳೊಂದಿಗೆ 'ಶರದ್ವತ'ನೆಂಬ ಮಗನು ಹುಟ್ಟಿದನು. ಅವನು ಬೆಳೆದು ದೊಡ್ಡವನಾಗಿ ತಪಸ್ಸು ಮಾಡುತ್ತಿರುವಾಗ ಜಲಕ್ರೀಡೆಗೆಂದು ಬಂದಿದ್ದ 'ಜಲಚರೆ' ಎಂಬ ಇಂದ್ರನ ಅಪ್ಸರೆಯೊಬ್ಬಳನ್ನು ಕಂಡನು. ಅವಳೊಂದಿಗೆ ಕೂಡಲು ಹೋದಾಗ ಅವನ ರೇತಸ್ಸು ಜೊಂಡು ಹುಲ್ಲಿನ ಮೇಲೆ ಎರಡು ಭಾಗವಾಗಿ ಸುರಿಯಿತು. ಅದನ್ನು ಕಂಡ ಶರದ್ವತನು ನಾಚಿ ಹಿಂದಿರುಗಿದನು. ಅಷ್ಟರಲ್ಲಿ ಬೇಟೆಗಾಗಿ ಬಂದಿದ್ದ ಶಂತನಿಗೆ

ಅವನ ಕಡೆಯವರು ವೀರ್ಯದಿಂದ ಮೂಡಿದ್ದ ಗಂಡು ಹೆಣ್ಣು ಮಕ್ಕಳನ್ನು ತಂದು ಕೊಟ್ಟರು. ಶಂತನು ಆ ಮಕ್ಕಳನ್ನು ಹಸ್ತಿನಾಪುರಕ್ಕೆ ಕರೆದೊಯ್ದು ಕೃಪ-ಕೃಪೆ ಎಂದು ಹೆಸರಿಟ್ಟನು. ಸ್ವಲ್ಪ ಕಾಲಾನಂತರ ಶರದ್ವತನು ಬಂದು ತನ್ನ ಮಗನಿಗೆ ಚೌಲೋಪನಯನಾದಿ ಕ್ರಿಯೆಗಳನ್ನು ಧನುರ್ವಿದ್ಯೋಪದೇಶವನ್ನೂ ಮಾಡಿದನು (ದ್ವಿತೀಯ ಆಶ್ವಾಸ).

ಈ ಕತೆಯಲ್ಲಿ ವೀರ್ಯವು ಮಗುವಾಗಿ ಪರಿವರ್ತನೆಗೊಳ್ಳುವ ಆಶಯವನ್ನು ಕಾಣಬಹುದು. ದ್ರೋಣರ ಹುಟ್ಟಿನ ಹಿನ್ನೆಲೆಯಲ್ಲಿಯೂ ಇದೇ ಆಶಯವಿದೆ. ಆ ವೃತ್ತಾಂತ ಹೀಗಿದೆ:

ಗಂಗಾತೀರದಲ್ಲಿ ಭಾರದ್ವಾಜನೆಂಬ ಬ್ರಹ್ಮರ್ಷಿ. ಒಂದು ದಿನ ಅವನು ಸ್ನಾನಕ್ಕೆಂದು ಒಂದು ಕೊಡವನ್ನು ಹಿಡಿದುಕೊಂಡು ಬರುವಾಗ ಅಪ್ಸರ ಸ್ತ್ರೀಯನ್ನು ಕಂಡು ಆಕೆಯ ರೂಪಕ್ಕೆ ಮರುಳಾದನು. ಮನಸ್ಸಿನ ಸ್ಥಿರತೆಯೂ ಮುನಿಯ ಇಂದ್ರಿಯವೂ ಸೇರಿದುವು. ಅದನ್ನು ಋಷಿಯು ಒಂದು ಪಾತ್ರೆಯಲ್ಲಿ ಹಿಡಿದನು. ಅಲ್ಲೇ ಒಂದು ಮಗು ಹುಟ್ಟಿತು. ದ್ರೋಣದಲ್ಲಿ ಹುಟ್ಟಿದ ಕಾರಣ ಮಗುವಿಗೆ ದ್ರೋಣ ಎಂದೇ ಭಾರದ್ವಾಜನು ಹೆಸರಿಟ್ಟನು (ದ್ವಿತೀಯ ಆಶ್ವಾಸ).

ಈ ಮೇಲಿನ ಕಥೆಗಳಲ್ಲಿ ಹುಟ್ಟಿನ ರಹಸ್ಯದ ಹಿನ್ನೆಲೆಯಲ್ಲಿ ಆದಿಮಾನವನ ಪರಿಕಲ್ಪನೆಯ ಹಂತವನ್ನು ಗುರುತಿಸಬಹುದಾಗಿದೆ. ಈ ಅಂಶಗಳಿಂದ ಮಹಾಭಾರತವನ್ನು ಇಂದು ಚರಿತ್ರೆಯಾಗಿ ನೋಡುವುದಕ್ಕಿಂತ ಪುರಾಣವನ್ನಾಗಿ ನೋಡುವ ಕ್ರಮವೇ ಕಂಡುಬರುತ್ತದೆ.

**ಐತಿಹ್ಯಗಳು:**

ಸ್ಥಳನಾಮಗಳ ಬಗೆಗೂ ಐತಿಹ್ಯವೆಂಬಂತಹ ಉಲ್ಲೇಖಗಳು ವಿಕ್ರಮಾರ್ಜುನವಿಜಯದಲ್ಲಿ ದೊರೆಯುತ್ತದೆ.

ಅರ್ಜುನನು ದೇಶಸಂಚಾರಕ್ಕೆ ಹೊರಟಾಗ ಹಿಮಾಚಲ ಪರ್ವತಕ್ಕೆ ಬಂದನು. ಆ ಪರ್ವತದ ವಿಚಾರವಾಗಿ ಬರುವ ಐತಿಹ್ಯ ಹೀಗಿದೆ:

ಭಗೀರಥನು ತನ್ನ ಅಜ್ಜಂದಿರಾದ ಸಗರಪುತ್ರರ ಬೂದಿಯ ಮೇಲೆ ಗಂಗೆಯನ್ನು ಹರಿಸಬೇಕೆಂದು ಗಂಗೆಯನ್ನು ಕುರಿತು ತಪಸ್ಸು ಮಾಡಿದನು. ಗಂಗೆಯು ಮೆಚ್ಚಿ

ಆಕಾಶದಿಂದ ಧುಮುಕಿ ಬಂದು ಮೊದಲಿಗೆ ಅಂಧಕ ವೈರಿಯಾದ ಶಿವನ ಜಟೆಯಲ್ಲಿ ಸಿಕ್ಕಿಕೊಂಡು ಅಲ್ಲಿಂದ ಚಿಮ್ಮಿ ನೀಲ ಪರ್ವತದ ಮೇಲೆ ಮನೋಹರವಾಗಿ ಹರಿದಳು. ಅದೇ ಹಿಮಾಚಲ ಪರ್ವತ - ಗಂಗಾದ್ವಾರ (ವಿಕ್ರ ವಿ. IV-13,14,15).

ದಕ್ಷಾಧ್ವರ ಧ್ವಂಸಕನ ನೊಸಲ ಕಣ್ಣು ಮನ್ಮಥನನ್ನು ಬೂದಿ ಮಾಡಿದುದು ಇಲ್ಲಿಯೇ. ಲಂಕಾಧಿಪತಿಯು ತನ್ನ ತೋಳ್ಬಲದ ಹಿರಿಮೆಯನ್ನು ಪ್ರಕಟಮಾಡುವ ಉದ್ದೇಶದಿಂದ ಇದನ್ನು ಕಿತ್ತು ಎತ್ತಿರಲು ಶಿವನು ಅವನಿಗೆ ವರವನ್ನು ನೀಡಿದ್ದು ಇಲ್ಲಿಯೇ. ಪಾರ್ವತಿ ಗಂಗೆಯನ್ನು ತೊರೆ ಎಂದು ದುಂಬಾಲು ಬಿದ್ದಾಗ ಒಂದೆರಡು ಕವಲು ತೊರೆಗಳನ್ನು ಜಟೆಯಿಂದ ಬಿಟ್ಟು ಆಕಾಶಗಂಗೆಯನ್ನು ಅಲ್ಲೇ ಮರೆಮಾಡಿಕೊಂಡನು. ಅದು ಜರುಗಿದುದು ಇದೇ ಪ್ರದೇಶದಲ್ಲಿಯೇ (ವಿಕ್ರ ವಿ. VII-74-75).

ಕರ್ಣನ ದಹನ ಸಂಸ್ಕಾರ ನಡೆದ ಕಡೆ 'ಕರ್ಣಸ್ಥಳಿ' ಎಂಬ ತೀರ್ಥವನ್ನು ನಿರ್ಮಿಸಿದರು (ವಿಕ್ರ ವಿ. XIV-10 ವ).

ಹಿಮಾಲಯ ಸಂಬಂಧವಾಗಿ ಕಂಡುಬರುವ ಮೇಲಿನ ಕೆಲವು ಸಂಗತಿಗಳು ಇಂದಿಗೂ ಜನಪದರಲ್ಲಿ ಐತಿಹ್ಯವಾಗಿ ಉಳಿದಿವೆ.

**ಇತರ ಜಾನಪದ ಅಂಶಗಳು:**

ಇದುವರೆಗೆ ಆಗಮಿಕ ಹಾಗೂ ಲೌಕಿಕ ಕೃತಿಗಳಲ್ಲಿ ಪಂಪಾದ್ಯರು ಪ್ರಕಟಗೊಳಿಸಿರುವ ಕಥಾಮಾದರಿಗಳನ್ನು, ಕಥಾಶಯಗಳನ್ನು, ಪುರಾಣಾಶಯಗಳನ್ನು, ಐತಿಹ್ಯಗಳನ್ನು ಗಮನಿಸಿದ್ದಾಯಿತು. ಮುಂದೆ ಆ ಕಾವ್ಯಗಳಲ್ಲಿ ಒಟ್ಟಾರೆ ಕಂಡುಬರುವ ಜಾನಪದೀಯ ಅಭಿವ್ಯಕ್ತಿಗಳನ್ನು, ಗಾದೆಗಳನ್ನು, ನಂಬಿಕೆ -ಆಚಾರ-ವಿಚಾರ ಸಂಬಂಧ ವಿಷಯಗಳನ್ನು ಪರಿಶೀಲಿಸಲಾಗಿದೆ.

**ಗಾದೆಗಳು, ಹೇಳಿಕೆಗಳು, ಅಭಿವ್ಯಕ್ತಿಗಳು:**

ಜನಪದ ಪರಂಪರೆ ಹಾಗೂ ಶಿಷ್ಟ ಪರಂಪರೆಗಳೆರಡರಲ್ಲಿಯೂ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ಸಾಹಿತ್ಯಕ ಮೌಲ್ಯವನ್ನು ಬಿಂಬಿಸುವ ಗಾದೆಗಳು ರತ್ನತ್ರಯರ ಕೃತಿಗಳಲ್ಲಿ ಪ್ರಭಾವಯುತವಾಗಿ ಬಳಕೆಗೊಂಡಿವೆ. ಕಾವ್ಯಸ್ಥವಾಗಿರುವ ಗಾದೆಗಳು ಕಾವ್ಯಗಳಲ್ಲಿ ಸ್ವಸ್ವರೂಪದಿಂದಲೇ ಮೂಡಿರುತ್ತವೆಂದು ಹೇಳುವಂತಿಲ್ಲ.

ಛಂದಸ್ಸಿನ ನಿಯಮಗಳಿಗನುಗುಣವಾಗಿ ಅವನ್ನು ಬದಲಾವಣೆಗಳೊಂದಿಗೆ ತರಲೂಬಹುದು. ಅಲ್ಲದೆ ಕಾವ್ಯಗಳಲ್ಲಿ ಬಳಕೆಯಾಗಿರುವ ಸೂಕ್ತಿಗಳಲ್ಲಿ ಗಾದೆಗಳಾಗಿ ಬಳಕೆಯಾಗುತ್ತಿದ್ದುವಾವುವು ಅಲ್ಲದವಾವುವು ಎಂಬುದನ್ನು ಪತ್ತೆಹಚ್ಚುವುದು ಕಷ್ಟವಾಗುತ್ತದೆ. ಗ್ರಂಥಸ್ಥ ಗಾದೆಗಳಲ್ಲಿ ಪ್ರಚಲಿತವಿದ್ದಿರಬಹುದಾದ ಗಾದೆಗಳು, ಗಾದೆಗಳ ಮೌಲ್ಯವಿರುವ ಕವಿಸೂಕ್ತಿಗಳು, ಇನ್ನು ಕೆಲವು ಹೇಳಿಕೆಗಳು ಎಡೆಮಾಡಿಕೊಂಡಿವೆ. ಮುಂದೆ ಅಂತಹ ಕೆಲವನ್ನು ಸಂಗ್ರಹಿಸಿಕೊಡಲಾಗಿದೆ:

**ಆದಿಪುರಾಣ:**

"ವಂಧ್ಯಾಸ್ತನಂಧಯ ಸಮಾಗಮ ಸಮಾನಂ" (iii-43 ವ), "ನಿಧಾನಮಂ ತೋರಿ ಕಣ್ಣಂ ಕಳೆವಂತೆ" (III-51 ವ), "ಕಟ್ಟಿದುದೆ ಸುರಿಗೆ ಮೆಟ್ಟಿದುದೆ ಕಳು" (III-72), "ಇರುಳ್ ಕಂಡ ಕನಸಂ ಮರುದೆವಸಂ ನೆನೆವಂತೆ" (IV), "ನೂಕೆ ಪಾಸೆಂಬ ಮಾತಿನ ಪಾಂಗಿನಿಂ" (V-70), "ಇಕ್ಷು ಯಂತ್ರದೊಳ್ ಕಬ್ಬಂ ಪಿಳಿವಂತೆ" (V), "ಪಡೆಯಲ್ಕಾಗದ ನಿಧಿಯಂ ಬಡವಂ ಪಡೆವಂತೆ" (VII-46), "ಖಾತ್ವಾಸಮೀಕರಣಂ" (VIII-45 ವ), "ಸುತಂಗೆ ಕಥೆ ವೇಟ್ಟಿರೆಂಬಂತೆ" VIII-14), "ಎರಲೆಗೆ ಪಾಡುವ ಗೋರಿಯನರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ" (XIV-80), "ಯಥಾ ರಾಜಾ ತಥಾ ಪ್ರಜಾಃ" (XV-40), "ಜಿನಧರ್ಮಂ ಪ್ರಾಣಿಗಾರ್ಮಂ" (II-20), "ಉಪಕಾರಮನಱಿಯದಾತನುಂ ಮಾನಸನೇ" (V-98)

ವಿಕ್ರಮಾರ್ಜನವಿಜಯ "ಪಂದೆಯಂ ಪಾವಡರ್ದಂತು" (II 82 ವ) "ಪಾಲನೆಱೆವಿರ್ ಪಾವಿಂಗೆ" (II-89), "ಪಡೆನೋಡಲ್ ಬಂದವರು ಗುಡಿವೂಜೆಸಿದರೆಂಬುದಾಯ್ತು" (III-15), "ತಣಿಯುಂಡಮರ್ದಂ ಗೋಮೂತ್ರದಿಂದೆ ಬಾಯ್ಕೂಸಿದವೋಲ್" (VI-48), "ಡೊಂಬರ ಕೋಡಗದಂತೆ" (VI-72), "ನಿಯತಿಃ ಕೇನ ಲಂಘ್ಯತೇ" (VI-68 ವ), "ಕೃಷ್ಣೋರಗನಂ ಪಿಡಿದ ಬೆಳ್ಳಾಳಂತು" (VII-5 ವ), "ಬಡಿಗಂಡನಿಲ್ಲ ಪಾಲನೆ ಕಂಡಂ" (VII-99), " ಪಗೆಯಿಱೆಯ ಬಂದರ ಮೂಗನರಿದರೆಂಬಂತೆ" (VII-32 ವ), "ಕನಕನ ಬೇಳ್ವೆ ತಗುಳ್ದುದು ಕನಕನಂ" (VIII-44), "ಕಾಯ್ದ ಬೆನ್ನೀರ್ ಮನೆಸುಡುದು" (IX-38), "ರಕ್ಕಸಿಯರ ಕಂಡ ಕುಂಬಳದ ಮಾಟ್ಕೆವೊಲ್"

(IX-48), "ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನ್" (IX-65), "ತನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತಕ್ಕುಂ" (X-13), "ಪೆಣವನಿಱಿದು ಪಗೆಗೊಂಡರ್" (XII-29ವ), "ಮುಳಿಸರಿವಾಗಲೆನಿತ್ತಪುದೇ" (XII-30), "ಸೆಟ್ಟಿಯ ಬಳ್ಳಂ ಕಿಱಿದು" (XII-175), "ಸೂಜಿಯ ಕೂರ್ಪು ಕುಂಬಳದೊಳಡಂಗುವಂತೆ" (XIII-65 ವ), "ಬಿದಿಯ ಕಟ್ಟಿದುದಂ ಕಳೆಯಲ್ಕೆ ತೀರ್ಗುಮೇ" (XII-74).

**ಶಾಂತಿನಾಥಪುರಾಣ** : "ಗೂಗೆವೊಂಗುವೊಂಗದೆ ರಜದಿಂ" (II-35), "ತನ್ನ ಮೇಲೆ ತಾಂ ಮರಗಡಿವೊಂ" (II-41), "ಮತ್ತ ಹಸ್ತಿಗೆ ಪಕ್ಕಾದ ಗುಬ್ಬಿಯ ಮೆಯ್ಯಂತೆ" (II-60 ವ), "ನೆಱದಾಯುಷ್ಯವೆ ಮಿಱುತ್ತುವನಱಸುವ ತೆಱದಿ" (III-74), "ಕಂಡಲ್ಲದಱಯೆನೆಂಬರ್" (VIII-141 ವ), "ಕಿಱುಕುಳನೊಳ್ ಪಡೆದ ಗೆಲ್ಲದಿಂದಂ ಪಿರಿಯನೊಳ್ ಪಡೆವ ಸೋಲ ಮುತ್ತಮಂ" (VIII-150 ವ), "ತಾಂ ತಿರಿವ ಗೊರವಿ ಬೆನಕನುಮಂ ತಿರಿಯಿಪಳ್" (VIII-130), "ಆರ್ ಕಾವರ್..... ತಾಯ್ವಾಲೆ ನಂಜಾದೊಡಂ", "ವಿಷಂ ವಿಷಸ್ಯೌಷಧಂ" (V-62), "ಯಥಾರಾಜ ತಥಾ ಪ್ರಜಾಃ" (X-67), "ಅರ್ಥೀ ದೋಷಂನ ಪಶ್ಯತಿ" (X-174), "ಮೊಲಕ್ಕೊಡ್ಡಿದ ಬಲೆಯೊಳ್ ಮೃಗರಾಜಂ ತೊಡರ್ಗುಮೆ" (III-93 ವ), "ಕೊಡದ ನೀರಂ ಕೊಡದೊಳ್ ಪೊಯ್ವಂತೆ" (VII-114), "ಪೆರೆಸುಲಿದ ಪಾವಿನಂತೆ".

**ಅಜಿತನಾಥಪುರಾಣ** : "ಕಱದ ನೀರ್ಗೆ ಬಂದಪುದೆ ಬಱಕ ಜರೆಗಂ ತಿರ್ದಲ್" (II-59), "ತಿಂಬರನಲ್ಲದೆ ಕುಱ ಮುಚ್ಚದು" (II-64), "ಪಶುವಿನ ಪಾಲಂ ಪೋಲುವುದೆ ನಾಯ ಕಳ್ಳಿಯ ಪಾಲ್ಗಳ್" (II-71), "ಮದುವೆಗಳುಪಿದ ಮನೆಯಂದದಿ" (VI-90).

**ಸಾಹಸಭೀಮವಿಜಯ** : "ಕೃಪೆ ಸೋರೆಯ ಕುಡಿಯೇಂ ಮಿಡಿಯೇಂ" (III-61), "ಕಡುಗೂರಿತಕ್ಕು ಮುಕ್ಕಿನೊಳೊಡಗೂಡಿದ ಪಚ್ಚೆ" (III-65), "ನೀನೊಂದಂ ಬಗೆದರೆ ವಿಧಿ ತಾನೊಂದಾ ಬಗೆದಿತ್ತು" (VII-4), "ಅತ್ತಪುಲಿಯಿತ್ತದರಿ" (IX-16), "ಮೌನಂ ಸರ್ವತ್ರ ಸಾಧನಂ" (III-58 ವ).

ಮುಂದೆ ಕೆಲವು ಗಾದೆಗಳ ಸ್ವಾರಸ್ಯವನ್ನು ಗಮನಿಸೋಣ. "ತಾಂ ತಿರಿವಗೊರವಿ ಬೆನಕನುಮಂ ತಿರಿಯಿಪಳೆಂಬ ತೆಱದಿ" ಎಂಬ ಗಾದೆಯು ಶಾಂತಿನಾಥಪುರಾಣದಲ್ಲಿ ಬಳಕೆಯಾಗಿರುವ ಸನ್ನಿವೇಶ ಹೀಗಿದೆ:

ವಟುವೇಷವನ್ನು ಧರಿಸಿದ ಓರ್ವ ದೇವನು ವಜ್ರಾಯುಧನ ಮೇಲಿನ ಪೂರ್ವಜನ್ಮದ ವೈರದಿಂದ ಆತನನ್ನು ವಾದಮಾಡಿ ಅವಮಾನಗೊಳಿಸಲೆಂದು ವಜ್ರಾಯುಧನ ಆಸ್ಥಾನಕ್ಕೆ ಬಂದನು. ಜೀವತತ್ವವೆಂಬುದಿಲ್ಲ ಎಂಬ ವಾದವನ್ನು ಮಂಡಿಸುವುದಕ್ಕಾಗಿ ತನ್ನ ವಾದವನ್ನು ಮುಂದೊಡ್ಡಿದನು. ಜೀವವಿದೆ ಎಂಬುದೆತ್ತ? ಪರಲೋಕದಲ್ಲಿ ಫಲವೆಂಬುದೆತ್ತ? ಹಾಗೆ ಫಲವುಂಟೆಂದು ಆಚರಿಸುವ ತಪವೆತ್ತ? ಊಟವಿಲ್ಲದೆ, ಸ್ನಾನವಿಲ್ಲದೆ ಕೊರಗಿ ನಿರ್ಜೀವವಾಗುವುದೆತ್ತ? 'ತಿರುಕಳಾದ ಗೊರವಿ ಬೆನಕನನ್ನೂ ತಿರುಪೆಗೆ ಕಳಿಸಿದಳೆಂಬಂತೆ' ಮುನಿಗಳು ತಪಸ್ಸಿನಲ್ಲಿ ತಾವು ಬೇಯುವುದಲ್ಲದೆ ತಮ್ಮ ಶಿಷ್ಯರನ್ನೂ ನಮೆಯಿಸುವರು ಇತ್ಯಾದಿಯಾಗಿ ಜಿನಮತವನ್ನು - ಮತಾವಲಂಬಿಗಳನ್ನು ಟೀಕಿಸಿದನು. ಪರಸ್ಪರ ಮತದರ್ಶನಗಳಲ್ಲಿ ನಡೆಯುತ್ತಿದ್ದ ಖಂಡನ-ಮಂಡನ ಪ್ರವೃತ್ತಿಯ ಹಿನ್ನೆಲೆಯಲ್ಲಿ ಈ ಗಾದೆಯು ಬಳಕೆಯಾಗಿದೆ. ಅಲ್ಲದೆ ಗೊರವ ಜನಾಂಗವು ಭಿಕ್ಷೆ ಬೇಡುತ್ತಿದ್ದ ರೀತಿಯನ್ನು ಸಹ ಈ ಗಾದೆಯು ಪ್ರಕಟಮಾಡುತ್ತದೆ. ದೇವರ ಪ್ರತಿಕೃತಿ ಎಂಬಂತಹ ಚಿತ್ರಪಟವನ್ನೋ, ಮೂರ್ತಿಯನ್ನೋ ಇಟ್ಟುಕೊಂಡು ಆ ಹೆಸರಿನಿಂದ ತಿರಿಯುವವರು ಈಗಲೂ ನಮ್ಮ ಜಾನಪದರಲ್ಲಿ ಉಂಟು. ಗೊರವರು ಶಿವಭಕ್ತರು. ಶಿವಭಕ್ತೆಯೊಬ್ಬಳು ಭಿಕ್ಷೆ ಬೇಡುವಾಗ ಶಿವನ ಮಗನಾದ ಬೆನಕನ ಚಿತ್ರಪಟವನ್ನು, ಮೂರ್ತಿಯನ್ನು ಇಟ್ಟುಕೊಂಡು ಭಿಕ್ಷೆ ಬೇಡುವ ಜನಪದವೆಂಬಂತಹ ಚಿತ್ರಣವನ್ನು ಈ ಗಾದೆ ನೀಡುತ್ತದೆ.

ಬೆನಕ ಜನಸಾಮಾನ್ಯರ ಪ್ರೀತಿಪಾತ್ರನಾದ ದೈವ. ವಿಘ್ನನಾಶಕ; ವಿದ್ಯಾಧಿದೇವತೆ, ಮೋದಕಾದಿ ಭಕ್ಷ್ಯಗಳ ಪ್ರಿಯ, ದೊಡ್ಡ ಹೊಟ್ಟೆಯವ ಇತ್ಯಾದಿ ಪರಿಕಲ್ಪನೆ ಜನಪದರಲ್ಲಿ ಉಂಟು. ಭಕ್ತಾದಿಗಳೇ ಆತನಲ್ಲಿಗೆ ಹೋಗಿ ನೈವೇದ್ಯವನ್ನು ಅರ್ಪಿಸಬೇಕು. ಆದರೆ ಗೊರವಿಯಿಂದಾಗಿ ಬೆನಕನಿಗೆ ಬಂದ ಸ್ಥಿತಿ-ತಿರುಪೆ ಬೇಡುವುದು! 'ಕೋತಿ ತಾನು ಕೆಡುವುದಲ್ಲದೆ ವನವನ್ನೆಲ್ಲಾ ಕೆಡಿಸಿತು' ಎಂಬ ಗಾದೆಯ ಆಶಯವನ್ನೇ ಮೇಲಿನ ಗಾದೆ ಸೂಚಿಸುತ್ತದೆ.

ಅನೇಕ ಗಾದೆಗಳ, ನ್ಯಾಯಗಳ ಹಿಂದೆ ಕಥೆಗಳು ಅಡಗಿರುವುದುಂಟು. 'ಆದಿಪುರಾಣ'ದಲ್ಲಿ ಬರುವ 'ಖಾತ್ಮಾ ಸಮೀಕರಣಂ ಭೌತಿಕ ಮೋದಕ ವ್ಯತಿಕರಂ ತಾನಾಗದೇಂ ಪೋಕಮೇಂ' ಎಂಬ ನ್ಯಾಯದ ಹಿನ್ನೆಲೆಯಲ್ಲಿ ಅಡಗಿರುವ ಕಥೆಯೊಂದನ್ನು ಗುರುತಿಸಲಾಗಿದೆ.[೧೪]

ಒಬ್ಬ ಭೌತಿಕ ಭಿಕ್ಷೆಗೆ ಹೋದನು. ಆತನಿಗೆ ಲಡ್ಡು ದೊರೆಯಿತು. ತರುವಾಗ ಅದು ಕೈಯಿಂದ ಜಾರಿ ಕಸದಲ್ಲಿ ಬಿತ್ತು. ಆತ ಅದನ್ನು ಎತ್ತಿಕೊಂಡನು. ಪಕ್ಕದಲ್ಲಿ ಬರುತ್ತಿದ್ದವನು 'ಚೀ, ಅದನ್ನೇಕೆ ಎತ್ತಿಕೊಂಡಿರಿ?' ಎಂದನು. ಅದಕ್ಕೆ ಅವನು 'ತೊಳೆದು ಬಿಸಾಡಲು ಎತ್ತಿಕೊಂಡೆ' ಎಂದು ನಗಿಸಿದನಂತೆ. ಇದು ಜೀವಸಂಬೋಧನೆಯಲ್ಲಿ ಬರುವ ಕಥೆ.

ಮೇಲಿನ ದೃಷ್ಟಾಂತವು ಆದಿಪುರಾಣದಲ್ಲಿ ಬರುವ ಸಂದರ್ಭ ಹೀಗಿದೆ: ವಜ್ರದಂತನು ವೈರಾಗ್ಯಪರನಾಗಿ ತಪಸ್ಸಿಗೆ ಹೋಗಲು ನಿಶ್ಚಯಿಸಿದನು. ತನ್ನ ಹಿರಿಯ ಮಗ ಅಮಿತತೇಜನಿಗೆ ರಾಜ್ಯಭಾರವನ್ನು ಒಪ್ಪಿಸಲು ಹೋದಾಗ ಆತ ವಿನೀತನಾಗಿಯೇ ಅದನ್ನು ನಿರಾಕರಿಸಿದನು. ಈಗ ನೀಡಿದ ರಾಜ್ಯಭಾರವನ್ನು ಸ್ವೀಕರಿಸಿ ಅನಂತರ, 'ಈ ಧರಣೀಭಾರವನ್ನು ಬಿಸುಟರೆ ಅದು ಚೀಃ ಲೋಕಕ್ಕಿದು ಖಾತ್ವಾಸಮೀಕರಣವೂ ಭೌತಿಕ ಮೋದಕ ವ್ಯತಿಕರವೂ' ಆಗಿದೆ ಎಂದು ಅರ್ಥಪೂರ್ಣವಾಗಿ ನುಡಿದು ತನ್ನ ಅಭಿಪ್ರಾಯವನ್ನು ಸೂಚಿಸಿದನು. ಅವನು ಹಲವಾರು ಮಾತುಗಳನ್ನು ಆಡಿ ಸ್ಪಷ್ಟಪಡಿಸಲಾಗದುದನ್ನು' ಪ್ರಭಾವ ಬೀರಲಾಗದುದನ್ನು ಈ ನುಡಿಗಳು ಸಾಧಿಸಿವೆ.

ಮೇಲಿನ ಹಲವಾರು ಗಾದೆಗಳು-ಹೇಳಿಕೆಗಳಲ್ಲಿಯೇ ಅಲ್ಲದೆ, ಇನ್ನು ಕೆಲವು ನುಡಿಗಟ್ಟುಗಳಲ್ಲಿ, ಪದಪುಂಜಗಳಲ್ಲಿ, ವಾಕ್ಯಗಳಲ್ಲಿ ಜಾನಪದೀಯತೆ ಕಂಡುಬರುತ್ತದೆ. ಉದಾಗೆ: **ಆದಿಪು**. "ಅರಣ್ಯರುದಿತಂ" (I-23), "ಅಂತಿಂತುಂತೆನಬರ್ಕುಮೇ" (I-25-37), "ಮೊಗಂಗಳ್ ಕರಿಂಕುವರಿದಂತೆ ಕಂದಿಕುಂದಿರೆ" (II-23), "ಮುಸುಮುತ್ತಂತೆ" (II-45), "ಅಳ್ಳೆಜೊಳ್ಳೆತನ" (II-45), "ಚರ್ವಿತ ಚರ್ವಣ" (III-69), "ಗುಜುಗುಮ್ಮೆಂದು ಪಸಿದಿದ್ದು ಕಟ್ಟಿಕೊಳ್ವ ಕಣೆಯೇ ಪೇಟಿಂ" (IX), "ಮೆಯ್ಯೊಳೊಂದು ಮರುಳಕ್ಕುಂ" (ವಿಕ್ರವಿ. III-62),"ಕಣ್ಣುಂ ಕಾಲುಂ ಬಾತೊಡೆ ಬರ್ಕುಮೆ ಪುಣ್ಯಂ" (ಶಾಂತಿಪು: I-14), "ಪರಾಬಲಂ ತಗುಳೆ ತಗುಣೆಗಾಟಂಗಾಡಲ್" (VIII-68).

**ಆಜಿಪು**: "ಕುಕ್ಕುಟಿಗುದಿ" (II-61), "ತಿಜ್ಜನೆ ತಿರಿ" (II-61,62), "ಬೆದ ಬೆದ ಬೆಂದಪಯ್" (II-62), "ಮೆಯ್ಯನೀರ್ ತೆಗೆ" (II-69), "ಅಳ್ಳೆ ಜೊಳ್ಳೆಯನಾದೆಂ" (II-82), "ಬಡವರ ನಂಟ" (VI-120),

ಸಾಹಭೀ: "ಕೊರಲೊಳ್ ಕೊಂಕುಂಟೆ" (II-6), "ಕರಗಂ ಬೊತ್ತ ಡಾವರಡಾಕಿನಿಯೆನಿಸಿದ ಪಾಂಚಾಲಿಯುಂ" (II-8 ವ), "ಪಾಳುಡುವಂ ಬಡಿವಂತಿರೆ" (III-2), "ಕಪಿಗೆ ಚಪಲತೆ ಸಹಜಂ" (III-41), "ಜವಂಗೆ ಬಾಣಸುಗೆಯ್ದು" (III-9), "ಕುಱಿದಱಿದಱಿದಂ" (III-10,17), "ಬಡಿಗೊಂಡು ಗೋಣಿ ಪಣ್ಣಂ ಬಡಿವಂತಿರೆ"- "ಪೆಕುಂಳಿನಾಯುಂ ಬಡಿವಂತಿರೆ" (III-2), "ನುರ್ಗುನುಱಿಮಾಡು" (VI-15 ವ), "ನೀರೊಳಗೆಸಡಿರ್ಕುಂ ಮೀನಿರ್ಕುಂ ಕಪ್ಪೆಯಿರ್ಕುಮಿರ್ಪವರೆ ಗಂಡರ್" (VII-6), "ಸೊಪ್ಪುಸೊವಡಪ್ಪಿನಂ" (VIII-2), "ಎಸರನಿಡುವ ಅಕ್ಕಿಗರ್ಚುವ ಬೆಸನ್" (VII-38), "ನೇರ್ಪಿಂಗೆ ನೇರ್ಪುಗೊಳ್" (VII-47)-

ಹಾಗೆಯೇ ಜನಪದರ ಮನೋಭಿತ್ತಿಯಲ್ಲಿ ಅಚ್ಚೊತ್ತಿ ನೆಲೆನಿಂತಿರುವಂತಹ ಸೂಕ್ತಿಗಳು ಕಂಡುಬರುತ್ತವೆ. ಉದಾ.ಗೆ:

'ಸುಪುತ್ರನಿಲ್ಲದ ಭವನಂ', 'ಚಲಮಿಲ್ಲದ ಗಂಡಂ', 'ತಂಬುಲಮಿಲ್ಲದ ವದನಂ', 'ಫಲಮಿಲ್ಲದ ತರು', 'ಗಾಡಿಯಿಲ್ಲದ ಬೆಲೆವೆಣ್', 'ಮೂಗಿಲ್ಲದ ಮೊಗಂ', 'ಆನೆಯಿಲ್ಲದರಮನೆ', 'ದಯೆಯಿಲ್ಲದ ಧರ್ಮಂ'...... ಒಪ್ಪುಗುಮೇ? (ಅಜಿಪು. VI-92,95,96). ಇಂತಹ ಕೆಲವು ಎಡೆಗಳಲ್ಲಿ ಜನಪದರ ಮನದಾಳದಲ್ಲಿ ಬೇರೂರಿ ನಿಂತಿರುವ ಅಭಿಪ್ರಾಯಗಳು, ಭಾವನೆಗಳು ಸ್ಪಂದಿಸುತ್ತವೆ.

ಈ ಮೇಲಿನ ಕೆಲವು ಅಭಿವ್ಯಕ್ತಿಗಳಲ್ಲಿ ಲಲಿತವೂ ಮಧುರವೂ ಆದ ದೇಸಿಯ ಚೆಲುವಿದೆ.

**ನಂಬಿಕೆಗಳು, ಆಚಾರ - ವಿಚಾರ ಇತ್ಯಾದಿ ವಿಷಯಗಳು:**

**ಕನಸುಗಳು:** ಕನಸುಗಳು ಇದೇ ಜನಸಮುದಾಯದ ಅತ್ಯಂತ ಕುತೂಹಲಕಾರಿಯಾದ ವಿಷಯಗಳಾಗಿವೆ. ಮನಃಶಾಸ್ತ್ರದ ಹಿನ್ನೆಲೆಯಲ್ಲಿಯೂ ಇವುಗಳಿಗೆ ಒಂದು ಮೌಲಿಕ ಸ್ಥಾನವುಂಟು. ಮನಃಶಾಸ್ತ್ರಜ್ಞರ ಪ್ರಕಾರ ಕನಸುಗಳು ವ್ಯಕ್ತಿಯ ಮನೋಭೂಮಿಕೆಯ ಸುಪ್ತ ಸಂವೇದನೆಗಳಾಗಿವೆ; ಕಾಮನೆಗಳಾಗಿವೆ. ಆಯಾ ಕನಸಿನ ಹಿನ್ನೆಲೆಯಲ್ಲಿ ಶುಭಾಶುಭ ಮುನ್ಸೂಚನೆಗಳನ್ನು ಜಾನಪದರು ಕಂಡುಕೊಳ್ಳುತ್ತಾರೆ.

ಆದಿಪುರಾಣದಲ್ಲಿ ಬರುವ, ಮಹಾಬಲಭವದ ಮೂರು ಕನಸುಗಳ ವೃತ್ತಾಂತವು ಸ್ವಾರಸ್ಯಕರವಾಗಿದೆ (II-35):

- ಮೂವರು ಮಂತ್ರಿಗಳು ತನ್ನನ್ನು ಕಟ್ಟಿಹಾಕಿ ದುರ್ಗಂಧಯುಕ್ತವಾದ ಬಾವಿಯಲ್ಲಿ ಮುಳುಗಿಸಿದಂತೆಯೂ,

- ಸ್ವಯಂಬುದ್ಧನು ಉಳಿದ ಮಂತ್ರಿಗಳನ್ನು ಶರಣಾಗಿಸಿ ತನ್ನನ್ನು ಸಿಂಹಾಸನದ ಮೇಲೆ ಕೂರಿಸಿ ಅಭಿಷೇಕಮಾಡುವಂತೆಯೂ,

- ದಳ್ಳುರಿಯು ನಂದುವಂತೆಯೂ ಮಹಾಬಲನು ಕನಸುಗಳನ್ನು ಕಂಡನು.

ಕನಸಿನಲ್ಲಿ ದಳ್ಳುರಿಯು ಆರಿದುದನ್ನು ಕಂಡುದು ಮಹಾಬಲನ ಸಾವಿನ ಸೂಚನೆಯಾಗಿದೆ. ಮೂವರು ಮಂತ್ರಿಗಳು ಮಹಾಬಲನನ್ನು ಕೆಸರಿನಲ್ಲಿ ತಳ್ಳುವ ವೃತ್ತಾಂತವು ಮಹಾಬಲನನ್ನು ಅವರು ಮಿಥ್ಯಾತ್ವದತ್ತ ತಳ್ಳುತ್ತಿರುವ ಸಂಗತಿಯನ್ನು ಸ್ವಯಂಬುದ್ಧನು ಅವನನ್ನೆತ್ತಿ ಸಿಂಹಾಸನದಲ್ಲಿ ಕೂರಿಸುವನೆಂಬ ಕನಸಿನ ವೃತ್ತಾಂತವು ಸ್ವಯಂಬುದ್ಧನು ಮಹಾಬಲನನ್ನು ಧರ್ಮದಲ್ಲಿ ಸ್ಥಿರವಾಗಿಸುವನೆಂಬ ಸೂಚನೆಯನ್ನು ನೀಡುವುದಾಗಿದೆ.

ಭರತ ಚಕ್ರವರ್ತಿಯ ಬೆಳಗಿನ ಜಾವದಲ್ಲಿ ಕಾಣುವ ಕನಸುಗಳು ಹಾಗೂ ಅವುಗಳ ಮುನ್ಸೂಚನೆಗಳು:

ಕಾಗೆಗಳಿಂದ ಬಳಸಲ್ಪಟ್ಟ ಗೂಬೆಗಳನ್ನು ಕಂಡುದರಿಂದ ಜೈನಮುನಿಗಳನ್ನು ಬಿಟ್ಟು ಜನರು ಪಾಷಂಡಿಗಳನ್ನು ಸೇವಿಸುವರು; ಆಡುತ್ತಿರುವ ಪೈಶಾಚ್ಯವನ್ನು ಕನಸಿನಲ್ಲಿ ಕಂಡಕಾರಣ ಜಡಬುದ್ಧಿಯುಳ್ಳ ಜನರು ಮಕ್ಕಳಿಗೆ ವ್ಯಂತರ ದೇವತೆಗಳ ಹೆಸರಿಡುವರು; ಕೊನೆಯಲ್ಲಿ ಮಾತ್ರ ನೀರಿದ್ದು ಮಧ್ಯದಲ್ಲಿ ಬತ್ತಿದ ಕೆರೆಯನ್ನು ಕಂಡ ಕಾರಣ, ನಡುನಾಡಿನಲ್ಲಿ ಧರ್ಮದ ಚ್ಯುತಿಯೂ ಗಡಿಯಲ್ಲಿ ಅದರ ನೆಲೆಯೂ ಉಂಟಾಗುವುದು.

ಕಾಗೆ-ಗೂಬೆ, ಆರುತ್ತಿರುವ ಬೆಂಕಿ ಮೊದಲಾದವು ಕನಸಿನಲ್ಲಿ ಬಂದರೆ ಅವು ಜನಪದ ನಂಬಿಕೆಯ ಪ್ರಕಾರ ಅಶುಭ ಸೂಚನೆಗಳು.

ಹಾಗೆಯೇ ತೀರ್ಥಂಕರ ಜನನಿಯು ಕಾಣುವ ೧೬ ಸ್ವಪ್ನವಿಷಯಗಳಾದ ಹೊನ್ನಿನ ಕಳಶ, ಹೂಮಾಲೆ, ಸಿಂಹಾಸನಾದಿಗಳು ಮಂಗಳಕರವಾದವುಗಳು.

ಅರ್ಜುನನು ಕುಂತಿಯ ಗರ್ಭದಲ್ಲಿ ಅಂಕುರಿಸಿದಾಗ ಅಂದು ರಾತ್ರಿ ಬೆಳಗಿನ ಜಾವದ ವೇಳೆಗೆ ಕುಂತಿ ಸುಖನಿದ್ರೆಯಲ್ಲಿ - ಏಳು ಸಮುದ್ರಗಳನ್ನು ಕುಡಿದಂತೆ, ಕುಲಪರ್ವತಗಳನ್ನೇರಿದಂತೆ, ಬಾಲಸೂರ್ಯನು ತೊಡೆಯ ಮೇಲಕ್ಕೆ ಬಂದಂತೆ, ದಿಗ್ಗಜಗಳು ಬಂದು ತಾವರೆ ಎಲೆಗಳಿಂದ ನೀರು ತುಂಬಿ ಸ್ನಾನ ಮಾಡಿಸಿದಂತೆ - ಇಂತಹ ದಿವ್ಯ ಕನಸುಗಳನ್ನು ಕಂಡಳು. ಇದರಿಂದಾಗಿ ಸಾಗರ ಪರ್ಯಂತ ಭೂಮಿಗೆ ಒಡೆಯನಾಗುವವನೂ ಕುಲಪರ್ವತಗಳು ಸುತ್ತುವರಿದ ರಾಜ್ಯವುಳ್ಳವನೂ ಯಾವಾಗಲೂ ಉಚ್ಛ್ರಾಯ ಸ್ಥಿತಿಯಲ್ಲಿರುವವನೂ ಕಮಲದಂತೆ ಸುಂದರವಾದವನೂ ಆದ ಪುತ್ರನು ಜನಿಸುವ ಸೂಚನೆಯು ಇದರಿಂದ ತಿಳಿದುಬಂದಿತು.

ಪಂಪಭಾರತದಲ್ಲಿ ಅರ್ಜುನನೇ ನಾಯಕ. ತನ್ನ ಸ್ವಾಮಿಯಾದ ಅರಿಕೇಸರಿಯಲ್ಲಿ ಆತನ ಪ್ರತಿರೂಪವನ್ನು ಕಂಡವನು ಪಂಪ. ಜೈನಪುರಾಣಗಳಲ್ಲಿ ಮಹಾಪುರುಷನ ಹುಟ್ಟಿನ ಹಿನ್ನೆಲೆಯಲ್ಲಿ ಕನಸಿನ ವೃತ್ತಾಂತವು ಆಶಯವಾಗಿ ಬರುತ್ತದೆ. ಇಲ್ಲಿಯೂ ಸಹ ಪಂಪ ಆ ಆಶಯಕ್ಕೆ ಎಡೆನೀಡಿದ್ದಾನೆ.

**ಶಕುನಗಳು:**

ಕೆಲವರ ಹುಟ್ಟಿನ ಹಿನ್ನೆಲೆಯಲ್ಲಿ ಅಪಶಕುನಗಳು ಕಂಡಬಂದುದಾಗಿ ಭಾವಿಸಿ ಅದಕ್ಕಾಗಿ ಶಾಂತಿಕ್ರಿಯೆಯನ್ನು ಮಾಡಿಸುವುದು ಜನಪದರಲ್ಲಿ ಬೆಳೆದುಬಂದ ರೂಢಿ. ದುರ್ಯೋಧನನು ಹುಟ್ಟಿದಾಗ ಅಪಶಕುನಗಳಾದುವೆಂದೂ ಅದಕ್ಕಾಗಿ ಶಾಂತಿಕ್ರಿಯೆಗಳನ್ನು ಮಾಡಿಸಲಾಯಿತೆಂದೂ ವಿಕ್ರಮಾರ್ಜುನ ವಿಜಯದಲ್ಲಿ ಹೇಳಲಾಗಿದೆ (I-132).

ದುರ್ಯೋಧನನು ಯುದ್ಧಕ್ಕೆ ಹೊರಟಾಗ ಕೆಲವು ಅಪಶಕುನಗಳು ಕಾಣಿಸಿಕೊಂಡವಂತೆ. ಭೂಮಿ ನಡುಗಿತು; ಧೂಮಕೇತುಗಳು ಕಾಣಿಸಿಕೊಂಡವು; ವೀರವನಿತೆಯರು ಅಕ್ಷತೆ ತಳಿಯುತ್ತಿದ್ದರೆ ಅದರ ಜೊತೆ ಜೊತೆಗೆ ರಕ್ತದ ಮಳೆ ಕರೆಯಿತು; ಪುರೋಹಿತರ ಜಯಧ್ವನಿಯ ಜೊತೆಗೆ ಆಕಾಶದಲ್ಲಿ ಗೋಳಿನ ಧ್ವನಿ ಕೇಳಿಸಿತು (ವಿಕ್ರವಿ. X-26 ವ).

ದಮಿತಾರಿಯು ಯುದ್ಧಕ್ಕೆ ಹೊರಟಾಗ ಧೂಮಕೇತುಗಳು ಕಂಡವು (ಶಾಂತಿಪು. III-102), ಹಗಲುಲ್ಕೆಗಳು ಬಿದ್ದುವು (ಶಾಂತಿಪು. III-103), ಪುತ್ಥಳಿಗಳು ಅತ್ತವು,

ಉಪ್ಪರಿಗೆಗೋಡೆ ಕುಸಿದು ಓರೆಯಾಯಿತು (III-104). ಇಂತಹ ವಿವರಗಳು ಜನಪದ ನಂಬಿಕೆಯ ಹಿನ್ನೆಲೆಯುಳ್ಳವುಗಳೇ ಆಗಿವೆ.

ಬಲಭುಜ, ಬಲಗಣ್ಣು ಅದುರಿದರೆ ಆದೆ ಪುರುಷರಿಗೆ ಶುಭಶಕುನ ಎಂಬ ನಂಬಿಕೆ ಜನಪದರಲ್ಲಿ ಉಂಟು. ಕೃಷ್ಣನು ಅರ್ಜುನನನ್ನು ಭೇಟಿಮಾಡುವ ಮುನ್ನ ಆ ಶುಭಶಕುನವು ಕೃಷ್ಣನಿಗೆ ಉಂಟಾಯಿತಂತೆ (ವಿಕ್ರ ವಿ. 4ನೇ ಅಧ್ಯಾಯ).

**ವಿಧಿ-ಪುಣ್ಯ ಪ್ರಭಾವ ಹಾಗೂ ಇತರ ಲೋಕನೀತಿಗಳು:**

ತಮ್ಮ ತಮ್ಮ ಕರ್ಮಗಳಿಗೆ, ಪುಣ್ಯಕ್ಕೆ ಅನುಸಾರವಾಗಿ, ವಿಧಿಲಿಖಿತದ ಅನುಸಾರವಾಗಿ ತಾವು ನಡೆಯಬೇಕು ಎಂಬುದು ಜನಪದರ ನಂಬಿಕೆ; ವಿಚಾರ. ಇದು ಜನಪದರಲ್ಲಿ ಬೇರೂರಿರುವ ಸಾಮಾನ್ಯ ತತ್ವ. ಅದನ್ನು ಪ್ರತಿಬಿಂಬಿಸುವ ಮಾತುಗಳು ಈ ಕಾವ್ಯಗಳಲ್ಲಿ ದೊರೆಯುತ್ತವೆ:

ಉದಾ.ಗೆ: "ಕರ್ಮಮೆ ಕಡುಬಲ್ಲಿತ್ತದಱ ತಿರಿವದೇಂ ಬಹುವಿಧವೋ" (ಆದಿಪು. V-97), "ಕಟ್ಟಿದುದಂ ಕಳೆಯಲಾರ್ಗುಮೇಂ ತೀರ್ದಪುದೇ" (ವಿಕ್ರವಿ. XIII-30), "ಸಮರಜಯಂ ದೈವಾಯತ್ತಂ" (ಸಾಹಭೀ. III-46), "ಜಯಮೆಂಬುದು ದೈವಾಯತ್ತಂ" (ಸಾಹಭೀ. VI-4), "ಸಂಧಿಯಂ ಮಾಡುವುದೆಂಬರ ನುಡಿಯಂ ಕೇಳಲ್ಕೆಂದೆರಡುಂ ಕಿವಿಗಳುಮನೆನಗೆ ಬಿದಿಮಾಡಿದನೇ" (ಸಾಹಭೀ. VI-8), "ಪುಣ್ಯಾನೀಕಂ ಪಡೆಗುಂ ಪಾಪನೀಕಂ ಪಡೆಗುಮೆ ಜಯಾಂಗನಾ ಸಂಗಮುಮಂ" (ಶಾಂತಿ ಪು. N-28).

ನಮ್ಮ ಗುಣ-ಧರ್ಮಗಳೇ ನಮ್ಮನ್ನು ರಕ್ಷಿಸುವ ಸಂಗಾತಿಗಳು, ಹಣವಲ್ಲ ಎಂಬುದಕ್ಕೆ ಉದಾಹರಣೆಗಳು:

"ನಿಲ್ವೊಡೆ ಗುಣಂ ನಿಲ್ಕುಂ ಪಣಂ ನಿಲ್ಕುಮೇ" (ಅಜಿಪು. I-91), "ಧರ್ಮಮೆ ತಲೆಗಾಯ್ಗುಂ" (ಅಜಿಪು. II-76), "ಎಸಗುವದರ್ತಿಯೊಳೆ ಜಸಮುಮಂ ಧರ್ಮಮುಮಂ" (ಅಜಿಪು. II-78), "ಅನುಭವಿಪುದು ತಾನೆ ತನ್ನಮುಂ ನೆಱಪಿದುದಂ" (ಅಜಿಪು. XI-42), "ಇಂದ್ರಜಾಲದ ಸಿರಿಗೇಕೆ ಮೆಟ್ಟಿಡುವಿರಿ" (ಸಾಹಭೀ. I-35), "ನಿಲ್ವುದು ಜಸಮಿತ್ತರ್ಗಿತ್ತ ಧನಮೇನದು ನಿಲ್ವುದು" (ಸಾಹಭೀ. I-35)".

ಪುಣ್ಯಪುರುಷರ ಹಿರಿಮೆ:

ಪುಣ್ಯಪುರುಷರನ್ನು ಯಾವ ಕೇಡೂ ಬಾಧಿಸದು ಎಂಬ ಜನಪದ ನಂಬಿಕೆಯನ್ನು ರನ್ನನು ಅತ್ತಿಮಬ್ಬೆಯ ಧಾರ್ಮಿಕತೆಯನ್ನು ಸಾರುವಲ್ಲಿ ನಾವು ಗುರುತಿಸಿಕೊಳ್ಳಬಹುದು:

> ಅಳುರದು ಕಿರ್ಚು ಮುಟ್ಟದು ವಿಷಾಹಿ ಮಹಾಸತಿಯಿರ್ದಮಂಡಲಂ
> ಬೆಳೆವುದು ಬೇಡಿದಂತೆ ಮೆಚ್ಚಿಕೊಳ್ಳುದೆನಿಪ್ಪ ಜಸಕ್ಕೆ ನೋಂತ ಭೂ
> ತಿಲಕ ಪವಿತ್ರೆಯಂ ಗುಣಪವಿತ್ರೆಯನಾ ಸತಿಯಂ ಮಹಾಸತೀ
> ತಿಲಕೆಯನತ್ತಿಮಬ್ಬರಸಿಯ ಪೆಸರ್ಗೊಳ್ವುದು ಪುಣ್ಯಕಾರಣಂ (ಅಜಿಪು. I-75)

ಈ ಪದ್ಯವು ಜನಪದ ನಂಬಿಕೆಯ ಮನೋಭೂಮಿಕೆಯದೇ ಆಗಿದೆ. ಪುಣ್ಯಾತ್ಮರ ಹೆಸರನ್ನು ಹೇಳುವುದೇ ಒಂದು ಪುಣ್ಯಕಾರಣವಾದುದು ಎಂಬುದು ಜನಪದರ ನಂಬಿಕೆ. ಅಲ್ಲದೆ ಪುಣ್ಯಪುರುಷರನ್ನು ಬೆಂಕಿಯಾಗಲಿ, ವಿಷಸರ್ಪವಾಗಲಿ ಬಾಧಿಸದೆಂದೂ ಅವರು ಬೇಡಿದಂತೆ ಮಳೆ ಬೆಳೆ ಬಂದು ಅವರಿರುವ ಊರು ಊರ್ಜಿತಗೊಳ್ಳುವುದೆಂಬುದು ಅವರ ಭಾವನೆ. ರನ್ನನು ಈ ಭಾವನೆಗಳನ್ನು ತಳೆದವನಾಗಿ ಜನಪದರಲ್ಲಿ ಜನಪದನಾಗಿದ್ದಾನೆ.

ಗಂಗಾಜಲವು ಪವಿತ್ರ ಎಂಬುದು ಜನಪದರ ನಂಬಿಕೆ. ಅತ್ತಿಮಬ್ಬೆಯ ಶುದ್ಧ ಚಾರಿತ್ರ್ಯವನ್ನು ವರ್ಣಿಸುವಾಗ ರನ್ನ ಗಂಗಾಜಲದಂತೆ ಆಕೆಯ ಚಾರಿತ್ರ್ಯವು ಪರಿಶುದ್ಧವಾದುದೆಂದು ಹೇಳಿದ್ದಾನೆ (ಅಜಿಪು. XII-6).

ಶಂತನು ಸತ್ಯವತಿಯನ್ನು ಕಂಡು ಮೋಹಿಸಿ ತನ್ನ ಪ್ರೀತಿಯನ್ನು ಪ್ರಮಾಣಿಸಿ ತೋರಿಸಲು 'ದಿವ್ಯವನ್ನು ಹಿಡಿಯುವ ಹಾಗೆ ಅವಳ ಕೈಯನ್ನು ಹಿಡಿದನು' ಎಂಬ ಮಾತು ಜಾನಪದೀಯತೆಯನ್ನು ಧ್ವನಿಸುತ್ತದೆ (ದಿಬ್ಯಂ ಬಿಡಿದಂತೆವೋಲ್- ವಿಕ್ರಮಾರ್ಜುನವಿಜಯ I-70). ತನ್ನ ಪ್ರಾಮಾಣಿಕತೆಯನ್ನು ತೋರಿಸುವುದಕ್ಕಾಗಿ ಕೈಯಲ್ಲಿ ಕಾದ ಕಬ್ಬಿಣ ಹಿಡಿಯುವುದು, ಬೆಂಕಿಯಮೇಲೆ ನಡೆಯುವುದೇ ಮೊದಲಾದ ಜನಪದ ಪ್ರಚಲಿತ ಪದ್ಧತಿಗಳನ್ನು ಗಮನಿಸಬಹುದು.

ಅಜಿತನಾಥಪುರಾಣದಲ್ಲಿ ಬರುವ ಗುಂಡುಮಬ್ಬೆಯ ಸಹಗಮನದ ವಿಚಾರವು ಜನಪದ ಪದ್ಧತಿಯ ಪ್ರಕಾರ ಗಮನಸೆಳೆಯುವುದಾಗಿದೆ.

ಸತಿ-ಸಹಗಮನ ಪದ್ಧತಿ ಒಂದು ಕಾಲದಲ್ಲಿ ಪ್ರಚಲಿತವಿದ್ದ ಧಾರ್ಮಿಕಾಚರಣೆ ಆಗಿತ್ತು. ಗಂಡನನ್ನು ಕಳೆದುಕೊಂಡ ಹೆಣ್ಣು ಗಂಡನ ಕಳೇಬರದೊಂದಿಗೆ ತಾನೂ

ಚಿತೆಯೇರಬೇಕು, ಅದೇ ಧರ್ಮ ಎಂಬ ನಂಬಿಕೆ ಜನಪದರಲ್ಲಿ ಬೆಳೆದುಬಂದಿದ್ದ ಕಾಲವೊಂದಿತ್ತು. ಕೆಲವೊಮ್ಮೆ ಇದು ಸ್ವ-ಇಚ್ಛೆಯಿಂದ ನೆರವೇರುತ್ತಿತ್ತು. ಇನ್ನು ಕೆಲವು ವೇಳೆ ಬಲಾತ್ಕಾರದಿಂದಲೂ ಅವಳನ್ನು ಚಿತೆ ಏರಿಸುತ್ತಿದ್ದುದುಂಟು. ಈ ಎರಡೂ ಸಂದರ್ಭಗಳಲ್ಲಿ ಅವಳನ್ನು 'ಮಹಾಸತಿ' ಎಂದು ಕರೆದು ಆ ಪದ್ಧತಿಯನ್ನು ವೈಭವೀಕರಿಸುತ್ತಿದ್ದರು. ಈ ಪದ್ಧತಿಯು ಜನಪದರಲ್ಲಿ ಇನ್ನೂ ಕೆಲವೆಡೆ ಬಲವತ್ತರವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿ ರೂಪಾಕನ್ವರ್ ಪ್ರಕರಣವು ನಮ್ಮ ಎದುರಿಗೆ ನಿಲ್ಲುತ್ತದೆ. ಈ ಪದ್ಧತಿಯು ರದ್ದಾಗಿರುವ ಇಂದಿನ ಆಧುನಿಕ ಯುಗದಲ್ಲಿಯೂ ಇದು ಬೆಳಕಿಗೆ ಬಂದಿರುವುದನ್ನು ನೋಡಿದರೆ, ಒಂದು ಕಾಲದಲ್ಲಿ ಈ ಪದ್ಧತಿಗೆ ಇದ್ದ ಮಾನ್ಯತೆ, ವೈಭವೀಕರಣ ಪ್ರಕಟವಾಗುತ್ತದೆ.

ರನ್ನ ಗುಂಡುಮಬ್ಬೆಯ ಸಹಗಮನವನ್ನು ಕುರಿತು ಅಜಿತಪುರಾಣದಲ್ಲಿ ಆಡಿರುವ ಮಾತುಗಳು ಆಶ್ಚರ್ಯಕ್ಕೆ ಎಡೆಮಾಡಿಕೊಡುತ್ತವೆ. ಏಕೆಂದರೆ ಜೈನಧರ್ಮವು ಇಂತಹ ಪದ್ಧತಿಗೆ ಮನ್ನಣೆ ನೀಡುವುದಿಲ್ಲ. ಅದು ದುರ್ಮರಣ; ಧರ್ಮಬಾಹಿರ. ಆದರೂ ಒಂದು ಧರ್ಮದ ತಾತ್ವಿಕತೆಯನ್ನು ಮೆಟ್ಟಿ ನಿಂತು ಹೇಗೆ ಜನಸಾಮಾನ್ಯರ ನಂಬಿಕೆ -ಪದ್ದತಿ-ಆಚರಣೆಗಳು ಬೆಳೆದು ಬರುತ್ತವೆ ಎಂಬುದಕ್ಕೆ ಗುಂಡುಮಬ್ಬೆಯು ಸತಿಯಾದುದು ಸಾಕ್ಷಿಯಾಗುತ್ತದೆ. ಗುಂಡುಮಬ್ಬೆಯಲ್ಲಿ ಅಂತಹ ಮನೋಭಾವ ಬೆಳೆದುಬಂದುದೂ ಅದೇ ಹಿನ್ನೆಲೆಯಲ್ಲಿ. ಆದರೆ ರನ್ನ ಈ ಸಂಗತಿಯನ್ನು ವೈಭವೀಕರಿಸಿ ನುಡಿದಿರುವ ಧ್ವನಿ ಆಶ್ಚರ್ಯ ತರುತ್ತದೆ. ಅವನು ಕೇವಲ ಚರಿತ್ರಕಾರನಂತೆ ಆ ಭಾಗವನ್ನು ಉಲ್ಲೇಖಿಸದೆ, ಅದನ್ನು 'ಶುಭ ಚರಿತ'ವೆಂದು ಹೊಗಳಿದ್ದಾನೆ. ಹೋಗಲಿ ಅದಾದರೂ ಗುಂಡುಮಬ್ಬೆಯಿಂದ ಹೇಳಿಸಿದ ಮಾತು. ಆದರೇ ರನ್ನನೇ ನೇರವಾಗಿ ಹೇಳಿರುವ ಮಾತುಗಳಲ್ಲಿಯೂ ಅದೇ ನಿಲುವು ಕಂಡುಬರುತ್ತದೆ. "ಅಂತು ಗುಂಡೆಲ್ಲಂ ಪೊಗೞೆ ಗುಂಡುಮಬ್ಬೆ ಮಹಾಸತೀ ಸಮುಚಿತಾಚಾರದೊಳಮಾಭರಣದೊಳ್ ನೆಗೞೆ" (ಅಜಿಪು. I-47 ವ) -ಎಂಬಲ್ಲಿ ರನ್ನನ ಧೋರಣೆ ಸ್ಪಷ್ಟ. ಅವನು ಬರೆಯುತ್ತಿರುವುದು ಧಾರ್ಮಿಕ ಕಾವ್ಯವಾದರೂ ಜನಸಾಮಾನ್ಯರ ನಂಬುಗೆ, ಆ ಹಿನ್ನೆಲೆಯಲ್ಲಿ ಬೆಳೆದು ಬಂದ ಆಚರಣೆ - ಪದ್ಧತಿಗಳ ಮಾನ್ಯತೆ ಇವುಗಳು ಕವಿಯ ಮನಸ್ಸಿನಲ್ಲಿ ಮುದ್ರೆಯೊತ್ತಿವೆ. "ಜಿನೋಕ್ತಿಯೆತ್ತ ಸಕಲ ಲೋಕೋಕ್ತಿಯೆತ್ತ" ಯಾವುದಕ್ಕೆ ಯಾವುದು ಸಂಬಂಧ? ಹಾಗೆ ಹೇಳಿ ಧರ್ಮಕಥೆಯನ್ನು ಪಾಪಕ್ಕೆ ಗುರಿಪಡಿಸುವುದೇ? ಎಂಬ ವಿಚಾರ ಅವನಲ್ಲಿ ಇದ್ದರೂ ಗುಂಡುಮಬ್ಬೆ

ಸಹಗಮನವನ್ನು ಮಾಡಿಕೊಂಡ ವಿಚಾರವನ್ನು ನಿರೂಪಿಸುವಾಗ ಆ ವಿಚಾರ ಅವನ ಮನಸ್ಸಿನಿಂದ ದೂರವಾಗಿಬಿಟ್ಟಿದೆ.

ಪಂಪ ಸಹಗಮನದ ವಿಚಾರವಾಗಿ ಹೇಳುವಾಗ ರನ್ನನಷ್ಟು ಉಗ್ಗಡಿಸಿ ಹೇಳದಿದ್ದರೂ ಅದರ ಹಿನ್ನೆಲೆಯಲ್ಲಿ ಕಂಡುಬರುವ ಪತಿಭಕ್ತಿ ಹಾಗೂ ದಿಟ್ಟತನಗಳ ಬಗೆಗೆ ಶ್ಲಾಘನೆಯ ನುಡಿಗಳನ್ನೇ ಆಡಿದ್ದಾನೆ. 'ಪಾಂಡು ಸತ್ತಾಗ ಮಾದ್ರಿಯು ತಾನು ಅರಸನ ಹಿಂದೆ ಹೋಗುವುದಾಗಿ ಹೇಳಿ ಮಕ್ಕಳನ್ನು ಕುಂತಿಗೆ ಒಪ್ಪಿಸಿದಳು. ಅವಳ ದಿಟ್ಟತನವನ್ನು 'ಪತಿಭಕ್ತಿಯನ್ನು ತಪೋವನದ ಮುನಿಗಳು ಕೊಂಡಾಡುತ್ತಿರಲು ಮಾದ್ರಿ ಸಹಗಮನ ಮಾಡಿದಳು' (ವಿಕ್ರ ವಿ. II-26 ವ) ಎಂದು ಹೇಳಿದ್ದಾನೆ. ಸಮಾಧಾನವೆಂದರೆ ಪಂಪ ಇಲ್ಲಿ ನೇರವಾಗಿ ಆ ವಿಷಯದ ಬಗೆಗೆ ಕೊಂಡಾಟ ನಡೆಸಿಲ್ಲ.

ತಲೆತಲಾಂತರದಿಂದ ಕೆಲವು ನಿರ್ದಿಷ್ಟ ವಿಷಯಗಳ ಮೇಲೆ ಜನಪದರು ಕೆಲವು ಒಪ್ಪಿದ ಅಂಶಗಳಿರುತ್ತವೆ. ಅವುಗಳಲ್ಲಿ ಕೆಲವನ್ನು ಈ ಹಿಂದೆ ಗಮನಿಸಿದ್ದೇವೆ. ಅಂತಹ ಇನ್ನು ಕೆಲವು ಸಂಗತಿಗಳನ್ನು ಮುಂದೆ ಗಮನಿಸಲಾಗಿದೆ:

**ವೃಕ್ಷ ದೋಹದಕ್ರಿಯೆ:**

ತರುಣಿಯರ ಸುಂದರವಾದ ಕಾಲಿನ ಒದೆತದಿಂದ ಅಶೋಕವೃಕ್ಷಗಳು ಹೂಬಿಟ್ಟವೆಂದು ಪಂಪ ಆದಿಪುರಾಣ ದಲ್ಲಿ ಹೇಳಿದ್ದಾನೆ (XI-128 ವ). ಪಂಪ ಹೇಳಿರುವ ಈ ಮಾತುಗಳು ಒಂದು ಕಾಲಕ್ಕೆ ಜನಪದ ನಂಬಿಕೆಯಾಗಿದ್ದಿರಬಹುದಾದ ಹಿನ್ನೆಲೆಯಿಂದ ಬಂದವುಗಳೆ? ಅಥವಾ ಇದು ಕವಿ ಕಲ್ಪಿತವೇ? ವೃಕ್ಷಗಳ ದೋಹದ ಕ್ರಿಯೆಯನ್ನು ಕುರಿತು ಸಂಸ್ಕೃತ ಕಾವ್ಯಗಳಲ್ಲಿ ಉದಾಹರಣೆಗಳು ದೊರಕುತ್ತವೆ. ಉದಾಹರಣೆಗೆ: ಕಾಳಿದಾಸನ ಮೇಘ ಸಂದೇಶದಲ್ಲಿಯೇ ಹತ್ತು ಬಗೆಗಳಲ್ಲಿ ವೃಕ್ಷದೋಹದ ಕ್ರಿಯೆಗಳನ್ನು ಆಯಾ ವೃಕ್ಷಗಳಿಗೆ ಹೊಂದಿಸಿ ಹೇಳಲಾಗಿದೆ. ಸ್ಪರ್ಶ, ಪದಾಘಾತ, ನರ್ತನ, ಆಲಿಂಗನ ಇತ್ಯಾದಿ ಕ್ರಿಯೆಗಳಿಂದ ಪ್ರಿಯಂಗು, ಅಶೋಕಾದಿ ವೃಕ್ಷಗಳು ಹೂಬಿಟ್ಟುವಂತೆ. ಇತ್ತೀಚಿನ ಕೆಲವು ಸಂಶೋಧನೆಗಳ ಪ್ರಕಾರ ಸಸ್ಯಗಳನ್ನು ಆತ್ಮೀಯವಾಗಿ ಮಾತನಾಡಿಸುವುದರಿಂದ, ಅವುಗಳಿಗೆ ಸಂಗೀತವನ್ನು ಕೇಳಿಸುವುದರಿಂದ ಅವು ಹುಲುಸಾಗಿ ಬೆಳೆಯುತ್ತವೆ ಎಂದು ಕಂಡುಬಂದಿದೆ. ಹಾಗಿದ್ದರೆ ಕವಿಗಳಲ್ಲಿ

ಕಂಡುಬರುವ ಕಾವ್ಯನಂಬಿಕೆಗಳು ಕೇವಲ ಕಾವ್ಯಸೌಂದರ್ಯಾಂಶಗಳಾಗಿರದೆ ಅವುಗಳಿಗೆ ವೈಜ್ಞಾನಿಕ ಹಿನ್ನೆಲೆಯು ಇದೆಯೇ? ಸಂಶೋಧನೆ ಮುಂದುವರಿದಂತೆ ಇದನ್ನು ದೃಢಪಡಿಸಿಕೊಳ್ಳಬೇಕು.

ಏಳು ತಲೆಮಾರಿನವರೆಗೆ ಒಳಿತಾಗಲಿ, ಕೆಡುಕಾಗಲಿ ಹರಿದುಬರುತ್ತದೆ ಎಂಬುದು ಜನಪದರ ನಂಬಿಕೆ. ಅದರಂತೆ "ಸಪ್ತಭಿರ್ಜಾಯತೇ ವಿದ್ಯಾ" (ಶಾಂತಿ ಪು. II-27) ಏಳು ತಲೆಗಳಿಂದ ವಿದ್ಯೆ ತಾನಾಗಿ ಬರುತ್ತದೆ ಎಂಬ ಸಂಸ್ಕೃತ ಸೂಕ್ತಿಯ ಮೂಲಕ ಅದು ಪ್ರಕಟಗೊಂಡಿದೆ.

**ಮದುವೆ :**

ಹಸೆಮಣೆಯ ಮೇಲೆ ಹಸಿರು ಚಪ್ಪರದಡಿಯಲ್ಲಿ ಅಗ್ನಿಸಾಕ್ಷಿಯಾಗಿ ಕೈಹಿಡಿಯುವುದರ ಪಾವಿತ್ರ್ಯತೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ. ಜನಪದದ ಮನೋಧರ್ಮ ಆ ಪಾವಿತ್ರ್ಯತೆಯನ್ನು ಎತ್ತಿಹಿಡಿಯುತ್ತದೆ. ಇಂತಹ ಒಂದು ಧ್ವನಿ ಸಾಹಸಭೀಮವಿಜಯದಲ್ಲಿ (III-38) ಕಂಡುಬರುತ್ತದೆ.

ಮದುವೆಗಾಗಿ ಹೆಣ್ಣನ್ನು ಕೇಳಿಕೊಂಡು ಗಂಡಿನ ಕಡೆಯವರು ಮುಂದಾಗಿ ಬರುವುದು ಅಥವಾ ಗಂಡನ್ನು ಕೇಳಿಕೊಂಡು ಹೆಣ್ಣಿನ ಕಡೆಯವರು ಮುಂದಾಗಿ ಬರುವುದು, ಮಾತುಕತೆ, ಜೋಯಿಸರಿಂದ ಶುಭಮುಹೂರ್ತ ಕಟ್ಟಿಸುವುದು ಇವೆಲ್ಲಾ ಜನಸಮುದಾಯದಲ್ಲಿ ಸಂಪ್ರದಾಯವಾಗಿ ಬೆಳೆದುಬಂದ ವಿವಾಹ ಪೂರ್ವ ವ್ಯವಹಾರಗಳು. ಶ್ರೀಮಂತನಿಂದ ಹಿಡಿದು ಶ್ರೀಸಾಮಾನ್ಯನವರೆಗೆ ಈ ಸಂಪ್ರದಾಯವು ಇಂದಿನವರೆಗೂ ಬೆಳೆದುಬಂದಿದೆ. ಈ ಸನ್ನಿವೇಶಗಳು ರತ್ನತ್ರಯರ ಕೃತಿಗಳಲ್ಲಿ ಕಂಡುಬರುತ್ತವೆ. ಉದಾ.ಗೆ: ವಜ್ರಬಾಹು ರಾಜನು ತನ್ನ ಪತ್ನಿ ಹಾಗೂ ಮಗ ವಜ್ರಜಂಘನ ಸಮೇತನಾಗಿ ಬಂದು ಶ್ರೀಮತಿಯನ್ನು ತನ್ನ ಮನೆದುಂಬಿಸಿಕೊಡುವಂತೆ ವಜ್ರದಂತನನ್ನು ಕೇಳುವ ಪ್ರಸಂಗದಲ್ಲಿ (ಆದಿ ಪು. 4ನೇ ಅಧ್ಯಾಯ), ನಾಭಿರಾಜನು, ಕಚ್ಛಮಹಕಚ್ಛರಾಜರ ತಂಗಿಯರಾದ ಯಶಸ್ವತೀ ಸುನಂದೆಯರನ್ನು ಮಗನಿಗಾಗಿ ಯಾಚಿಸಿದನು ಎಂಬಲ್ಲಿ (ಆದಿ ಪು. 8ನೇ ಅ) ಜ್ವಲನ ಜಟಿಯು ಪ್ರಜಾಪತಿ ಮಹಾರಾಜನ ಬಳಿಗೆ ಬಂದು ತನ್ನ ಮಗಳಾದ ಸ್ವಯಂಪ್ರಭೆಗೆ ತ್ರಿಪೃಷ್ಠನನ್ನು ಕೇಳಿದ ಸಂದರ್ಭ (ಶಾಂತಿ ಪು. V-32 ವ) ಇವುಗಳಲ್ಲಿ ಈ ಅಂಶವನ್ನು ಗಮನಿಸಬಹುದು. ಇಲ್ಲೆಲ್ಲಾ ಮದುವೆಯ ಸಡಗರ, ಅಲಂಕಾರ,

ವಧೂವರರನ್ನು ಹಸೆಗೆ ತರುವುದು, ಕೈಧಾರೆ ಎರೆಯುವುದು ಇತ್ಯಾದಿಯಾದ ಜಾನಪದೀಯ ವಾತಾವರಣವು ಕಂಡುಬರುತ್ತದೆ. ಹಾಗೆಯೇ ಮದುವೆಯಲ್ಲಿ 'ತಲೆಬಳುವಳಿ' ಕೊಡುತ್ತಿದ್ದ ಪದ್ಧತಿಯ ಉಲ್ಲೇಖವೂ ಒಂದೆಡೆ ದೊರೆಯುತ್ತದೆ (ವಿಕ್ರವಿ. IX-95 ವ).

**ಮಂಗಳಸೂಚಕ ಆಚರಣೆಗಳು:**

ಯುದ್ಧಕ್ಕೆ ರಾಜರು ಹೊರಡುವಾಗಿನ ಶುಭ ಹಾರೈಕೆ: ಸಾರಣೆ-ತೋರಣ ಇತ್ಯಾದಿಗಳಿಂದ ಸಂಭ್ರಮದ ಸ್ವಾಗತ:

ರಾಜರು ಯುದ್ಧಕ್ಕೆ ಹೊರಡುವಾಗ ಪುರದ ಮುತ್ತೈದೆಯರು ಸೇಸೆಯನ್ನು ಇಕ್ಕಿ ಅರಳು ಭತ್ತವನ್ನು ತಲೆಯ ಮೇಲೆ ಎರಚುತ್ತಿದ್ದ ಸಂಪ್ರದಾಯ ಇದ್ದಂತೆ ಕಂಡುಬರುತ್ತದೆ. ದಮಿತಾರಿಯು ಯುದ್ಧಕ್ಕೆ ಹೊರಟಾಗ ಪುರಸ್ತ್ರೀಯರು ಹಾಗೆ ಮಾಡುವ ಉಲ್ಲೇಖವು ಶಾಂತಿಪುರಾಣದಲ್ಲಿ ದೊರೆಯುತ್ತದೆ (ಪುರಂಧ್ರೀ ಜನಮಿಕ್ಕುವ ಸೇಸೆಯುಮಂ ಲಾಜಾವರ್ಷಮುಮನಾಂತು ಬರೆವರೆ - ಶಾಂತಿಪುರಾಣ III-112 ವ).

ದ್ರುಪದನ ನಗರದಿಂದ ಬಂದ ಪಾಂಡವರನ್ನು ಜನರು ಪಂಚಗವ್ಯದಿಂದ ಶುಚಿಮಾಡಿ, ಗುಡಿ-ತೋರಣಗಳನ್ನೂ ಚಪ್ಪರಗಳನ್ನೂ ಕಟ್ಟಿ ಬರಮಾಡಿಕೊಂಡರು (ವಿಕ್ರವಿ. IV-5 ವ). ಹಬ್ಬ - ಹರಿದಿನಗಳಲ್ಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ಇಂತಹ ವಾತಾವರಣವನ್ನು ಜನಪದರು ಇಂದಿಗೂ ಒಡಮೂಡಿಸುವುದುಂಟು.

ಪಾಂಡವರು ವಾರಣಾವತಕ್ಕೆ ಬಂದ ಸಂದರ್ಭದಲ್ಲಿ ಪುರವು ಅವರನ್ನು ಕಸ್ತೂರಿ ಮಿಶ್ರಿತವಾದ ಸೆಗಣಿ ನೀರು ಚೆಲ್ಲಿ ಮುತ್ತಿನ ರಂಗವಲ್ಲಿಯನ್ನಿಕ್ಕಿ ಸ್ವಾಗತಿಸಿತು (ವಿಕ್ರವಿ. III-2). ಗೋರೋಚನ, ಅಕ್ಷತೆ, ಗರಿಕೆ, ಮಾತುಳಂಗ, ಕನ್ನಡಿ, ಪೂರ್ಣಕಳಶ, ಬತ್ತದ ತೆನೆ ಇವುಗಳನ್ನು ಹಿಡಿದ ಸ್ತ್ರೀಯರು ಪಾಂಡವರನ್ನು ಸ್ವಾಗತಿಸಿದರು (ವಿಕ್ರವಿ. III-2 ವ). ಪೂರ್ಣ ಕಳಶ, ಕನ್ನಡಿ ಇವು ಮಂಗಳಕರವಾದವುಗಳು. ಮದುವೆ - ಮುಂಜಿಗಳಲ್ಲಲ್ಲದೆ ಇತರ ವಿಶೇಷ ಸಂದರ್ಭಗಳಲ್ಲಿ ಇಂತಹ ಸನ್ನಿವೇಶವನ್ನು ರೂಪಿಸುವ ರೂಢಿ ಜನಪದರಲ್ಲಿ ಉಂಟು.

**ಮಗುವಿನ ಜನನ ಸಂಬಂಧಿ ಆಚರಣೆ :**

'ಪುರುಡು' ಆಚರಿಸುವ ಪದ್ಧತಿ ಜನಪದರಲ್ಲಿ ಕಂಡುಬರುತ್ತದೆ. ಜನನ ಸಂಬಂಧವಾದ, ಸಾವಿನ ಸಂಬಂಧವಾದ ಇಂತಹ ಆಚರಣೆಗಳು ಈಗಲೂ ಕಂಡುಬರುತ್ತವೆ. ಅದರ ಸೂಚನೆ ವಿಕ್ರಮಾರ್ಜುನವಿಜಯದಲ್ಲಿ ಒಂದೆಡೆ ದೊರೆಯುತ್ತದೆ. ಸೂತನಿಗೆ ಗಂಗೆಯಲ್ಲಿ ತೇಲಿಬಿಟ್ಟಿದ್ದ ಕರ್ಣ ದೊರೆತನು. ಆ ಮಗುವನ್ನು ಎತ್ತಿಕೊಂಡು ಸೂತನು ಮನೆಗೆ ಬಂದು ತನ್ನ ಮಡದಿ ರಾಧೆಯ ತೊಡೆಯ ಮೇಲೆ ಮಲಗಿಸಲು ಆಕೆ ಸುತನ ಸೂತಕವನ್ನು ಕೊಂಡಾಡಿದಳಂತೆ (ವಿಕ್ರವಿ. Iನೇ ಆ). ಕರ್ಣ ತಾನು ಹೆತ್ತ ಮಗನಲ್ಲದಿದ್ದರೂ ಸ್ವಂತ ಮಗುವು ಹುಟ್ಟಿದರೆ ಆಚರಿಸುವ ಸೂತಕಾಚರಣೆಯನ್ನು ರಾಧೆ ಮಾಡಿದಳು ಎಂಬಲ್ಲಿ ಕರ್ಣನನ್ನು ರಾಧೆಯು ಪರಿಗಣಿಸಿದ ರೀತಿ ಧ್ವನಿತವಾಗುತ್ತದೆಯಲ್ಲದೆ ಸೂತಕಾಚರಣೆಯೆಂಬ ಜನಪದ ಆಚರಣೆಯ ಬಗೆಗೂ ಅದು ಸೂಚನೆಯನ್ನು ನೀಡುತ್ತದೆ.

**ಮದ್ದು-ಮಾಟ:** ತಮಗೆ ಆಗದವರಿಗೆ ಮದ್ದು ಇಡುವುದು, ಮಾಟ ಮಾಡಿಸುವುದು, ಈ ಮೂಲಕ ಅವರಿಗೆ ಕೇಡನ್ನು ಬಯಸುವುದು ಈ ಒಂದು ತಾಮಸ ಪ್ರವೃ ತ್ತಿಯು ಕೆಲವರಲ್ಲಿ ಕಂಡುಬರುತ್ತದೆ. ಶಾಂತಿಪುರಾಣದಲ್ಲಿ ಒಂದೆಡೆ ಮದ್ದಿಟ್ಟು ಶಕ್ತಿಗುಂದಿಸುವ ಸೂಚನೆಯು ಉಪಮಾಲಂಕಾರದ ಮೂಲಕ ಕಂಡುಬರುತ್ತದೆ (IV-23). ದಮಿತಾರಿಯ ಕಡೆಯ ಚಿತ್ರಾನೀಕನನ್ನು ಕೆಳಗೆ ಬೀಳಿಸಿದ್ದು ದಮಿತಾರಿಯ ಬಲತೋಳು ಮುರಿವಂತೆಯೂ ಅಂಬರಚರ ಶ್ರೀಕಾಂತೆಗೆ ಇಕ್ಕುಮದ್ದಿಟ್ಟಂತೆಯೂ ಆಯಿತಂತೆ.

"ಕನಕನ ಬೇಳ್ವೆ ಕನಕನಿಗೇ ತಗುಲಿತು" - ಎಂಬ ನ್ಯಾಯೋಕ್ತಿಯಲ್ಲಿಯೂ (ವಿಕ್ರವಿ. VIII-44) ಮಾಟ-ಮಂತ್ರದ ಹಿನ್ನೆಲೆ ಇದೆ. ದುರ್ಯೋಧನನ ಆಜ್ಞೆಯಂತೆ, ಪಾಂಡವರಿಗೆ ಮಾಟಮಾಡಲು ಕನಕಸ್ವಾಮಿ ಎಂಬ ಪುರೋಹಿತನು ಯಜ್ಞ ಮಾಡಿದನು. ಅದರಿಂದ ಓರ್ವ ಉಗ್ರದೇವತೆಯು ಹೊರಬಂದಳು. ಅವಳಿಗೆ ಪಾಂಡವರನ್ನು ಕೊಲ್ಲಲು ಆದೇಶ ನೀಡಲಾಯಿತು. ಆದರೆ ಯಮಧರ್ಮನು ಉಪಾಯಾಂತರದಿಂದ ಅವಳು ಕನಕಸ್ವಾಮಿಯನ್ನೇ ತಿನ್ನುವಂತೆ ಮಾಡಿಬಿಟ್ಟನು. ನಿಷ್ಠಾವಂತರಿಗೆ, ಧರ್ಮವಂತರಿಗೆ ಮದ್ದು-ಮಾಟಗಳಿಂದ ಹಾನಿ ತಟ್ಟದು ಎಂಬ ನಂಬಿಕೆಯೂ ಜನಪದರಲ್ಲಿ ಇದೆ. ಕೆಲವೊಮ್ಮೆ ಅದನ್ನು ಮಾಡಿಸಿದವರಿಗೇ ಅದು

ತಟ್ಟುತ್ತದೆ ಎಂಬುದನ್ನೂ ಅವರು ನಂಬುತ್ತಾರೆ. ಅಂತಹದ್ದೇ ಒಂದು ಅಭಿಪ್ರಾಯ ಈ ನ್ಯಾಯೋಕ್ತಿಯಲ್ಲಿ ಕಂಡುಬರುತ್ತದೆ.

**ತಾಂಬೂಲ:**

ಜನಪದರಲ್ಲಿ ತಾಂಬೂಲಕ್ಕೆ ಒಂದು ವಿಶೇಷವಾದ ಸ್ಥಾನವಿದೆ. ತಾಂಬೂಲವನ್ನು ಮೆಲ್ಲುವುದರಲ್ಲಿ ಅವರಿಗೆ ವಿಶೇಷ ಆದರ. ಅತಿಥಿಗಳ ಸತ್ಕಾರದಲ್ಲಿ ಅವರದು ವಿಶೇಷ ಪಾತ್ರ. 'ತಾಂಬೂಲ ಮಿಲ್ಲದ ವದನಂ ಒಪ್ಪುಗುಮೇ?' ಎಂಬುದು ಅವರ ಅಭಿಪ್ರಾಯ. ತಾಂಬೂಲ ಕೇವಲ ಚಟಕ್ಕಾಗಿ ಸೇವಿಸುವುದಲ್ಲ, ಅದರ ಹಿನ್ನೆಲೆಯಲ್ಲಿ ಜನಪದರ ಒಂದು ಸಂಸ್ಕೃತಿಯೇ ಅಡಗಿದೆ.

ತಾಂಬೂಲವು ಅನ್ಯೋನ್ಯ ಪ್ರೀತಿಯನ್ನು ವ್ಯಕ್ತಪಡಿಸುವುದಕ್ಕೆ ಮಾಧ್ಯಮ. ಅದು ಪತಿ-ಪತ್ನಿಯರಲ್ಲಿಯೇ ಸೀಮಿತವಾದುದಲ್ಲ. ತಂದೆ-ತಾಯಿ ಇತರ ಆಪ್ತರಲ್ಲಿಯೂ ಕೂಡ ಪ್ರೀತಿಯನ್ನು ವ್ಯಕ್ತಪಡಿಸುವ ಪ್ರತೀಕ.

ಉದಾ.ಗೆ: ಶ್ರೀಮತಿ ಜಾತಿಸ್ಮರಣೆಯನ್ನು ಪಡೆದು, ಲಲಿತಾಂಗನನ್ನು ನೆನೆದು ಮೌನಿಯಾಗಿ ಕಳೆಗುಂದಿದಳು. ಪಂಡಿತೆ ಆಕೆಯನ್ನು ನಾನಾ ಬಗೆಯಲ್ಲಿ ಪ್ರಶ್ನಿಸುವ ಸಂದರ್ಭದಲ್ಲಿ 'ಅನ್ಯೋನ್ಯ ಪ್ರೀತಿಯಿಂದ ತಾಂಬೂಲವನ್ನು ತೆಗೆದುಕೊಳ್ಳಲು ಮರೆತಿರುವೆಯಲ್ಲಾ "ಬಾಯ್ವಾಯೊಳಾವಟ್ಕಱಿಂದೊದವಿಂ ತಂಬುಲಮಂ ಕೊಳಲ್ ಮಱೆದು ನೀನಿರ್ದಂದವಮೇಂ (ಆದಿಪು. III-25)?" - ಎಂದು ಕೇಳಿದಳು.

ಅತಿಥಿಸತ್ಕಾರದಲ್ಲಿ ಇದು ಇರಲೇಬೇಕು. ಉದಾ.ಗೆ: ಶ್ರೀಮತಿಯನ್ನು ತನ್ನ ಮಗನಿಗಾಗಿ ಕೇಳಲು ವಜ್ರಬಾಹುವು, ವಜ್ರದಂತ ಚಕ್ರವರ್ತಿಯ ಬಳಿಗೆ ಬಂದಾಗ, ವಜ್ರದಂತನು ಅವನಿಗೆ ಸ್ನಾನ, ಊಟ, ಹೊಸ ಬಟ್ಟೆ, ಸುಗಂಧವಸ್ತು ಮೊದಲಾದವುಗಳಿಂದಲೇ ಅಲ್ಲದೆ ತಾಂಬೂಲವನ್ನು ಕೊಟ್ಟು ಸತ್ಕರಿಸಿದನು (ಆದಿಪು. IV-25ವ).

ಅಪರಾಜಿತನ ಕೋಶಾಧ್ಯಕ್ಷನು ದಮಿತಾರಿಯ ದೂತನ ಬಿಡಾರಕ್ಕೆ ಹೋದಾಗ ದೂತನು ಕೋಶಾಧ್ಯಕ್ಷನನ್ನು ಕುಳ್ಳಿರಿಸಿ ಕರ್ಪೂರದ ಹಳಕುಗಳೊಡನೆ ಬೆರೆತ ತಾಂಬೂಲವನ್ನು ನೀಡಿದನು "(ಕರ್ಪೂರವಾರಿ ಪರಿಮಿಶ್ರಿತ ತಾಂಬೂಲದಾನ ಸಮೇತಂ ಸಂಭಾಷಿಸುತ್ತುಮಿರೆ - ಶಾಂತಿಪು. II-70 ವ)".

ಅರ್ಜುನನು ಚಿತ್ರಾಂಗದನಿಂದ ದುರ್ಯೋಧನ ಮತ್ತು ದುಶ್ಶಾಸನರನ್ನು ಬಿಡಿಸಿ ತಂದಾಗ, ಧರ್ಮರಾಯನು ಬಹಳ ಸಂತೋಷಗೊಂಡನು. ಆ ಸಂತೋಷವನ್ನು ವ್ಯಕ್ತಪಡಿಸಲು ಅರ್ಜುನನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಬಾಯಿಂದ ಬಾಯಿಗೆ ತಂಬೂಲವನ್ನು ನೀಡಿದನು (ಸಾಹಸಾಭರಣನ ಸಾಹಸಮನಳವಲ್ಲದೆ ಪೊಗೞ್ದು ತೊಡೆಯನೇಱಿಸಿಕೊಂಡು ಬಾಯೊಳ್ (ಬಾಯ್ವಾಯೊಳ್) ತಂಬುಲಂ ಗೊಟ್ಟಂ ವಿಕ್ರವಿ.VII-38 ವ).

ಕರ್ಣ ತಮ್ಮ ಅಣ್ಣ ಎಂದು ಮೊದಲೇ ಗೊತ್ತಿದ್ದರೆ, 'ಬಾಯತಂಬುಲದೊಳಂ' 'ಮಡಗೂಟಿಓಳ್'-ತಾವು ಸಂತೋಷಪಟ್ಟು ಕರ್ಣನೊಂದಿಗೆ ಸುಖವಾಗಿ-ರುತ್ತಿದ್ದೆವಲ್ಲಾ ಎಂದು ಪಾಂಡವರು ಕರ್ಣನ ಅವಸಾನಕ್ಕಾಗಿ ದುಃಖಿಸಿದರು (ವಿಕ್ರ ವಿ.).

ಯುದ್ಧೋತ್ಸವದಲ್ಲಿಯೂ ಸಹ ತಾಂಬೂಲಕ್ಕೆ ಸ್ಥಾನವುಂಟು. ಕುರುಕ್ಷೇತ್ರದ ಯುದ್ಧ ಪ್ರಾರಂಭವಾದಾಗ ಪರಸ್ಪರ ಕೊಡುತ್ತಿರುವ ಕರ್ಪೂರ ವೀಳೆಯಗಳಿಂದ ಇಡೀ ಪಡೆಗೆ ಸಂತೋಷವುಂಟುಮಾಡುತ್ತ ನಾಯಕರು ಮುನ್ನಡೆದರು (ಕುಡುತಿರ್ಪ ಕಪ್ಪುರದ ಬಂಬಲ್ದಂಬುಲಂ ರಾಗಮಂ ಪಡೆಗೆಲಂ ಪಡೆವನ್ನೆಗಂ ನಡೆದರಂದೆತ್ತಂ ಕೆಲರ್ ನಾಯಕರ್ -ವಿಕ್ರವಿ. IX-104).

ಈ ಮೇಲಿನ ಕೆಲವು ಉದಾಹರಣೆಗಳು 'ತಾಂಬೂಲ'ದ ಬಗೆಗೆ ಜನರು ತೋರುವ ಒಲವು ವ್ಯಕ್ತವಾಗಿದೆ. ಶ್ರೀಸಾಮಾನ್ಯರಿಂದ ಹಿಡಿದು ಸಿರಿವಂತರವರೆಗೆ, ಗ್ರಾಮ ಪ್ರದೇಶದಿಂದ ಹಿಡಿದು ನಗರದವರೆಗೆ ತಾಂಬೂಲವು ಇಂದಿಗೂ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

**ಅನ್ನದ ಋಣ:** ಉಪ್ಪಿಟ್ಟವನನ್ನು ಮುಪ್ಪಿನ ತನಕ ನೆನೆಯುವ ಅನ್ನದ ಋಣ ಜಾನಪದರ ನೀತಿಸೂತ್ರ. ಆ ಭಾವನೆ ನಮ್ಮ ಕವಿಗಳಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಪಂಪನು ತನಗೆ ಅನ್ನವಿಟ್ಟ ಧಣಿಯ ಖ್ಯಾತಿಯನ್ನು ಕಾವ್ಯದಲ್ಲಿ ಶಾಶ್ವತವಾಗಿ ನಿಲ್ಲಿಸಿ 'ಜೋಳದ ಪಾಟಿ'ಗಾಗಿ ದುಡಿದವನು (ವಿಕ್ರವಿ. XIV-50). ಕಾವ್ಯಗಳಲ್ಲಿ ಅಲ್ಲಲ್ಲಿ ಕವಿಗಳು ಈ ಋಣಭಾರವನ್ನು ಇಳಿಸಿಕೊಳ್ಳುವುದರ ಬಗೆಗೆ ಆಡಿದ್ದಾರೆ.

**ಆಟಗಳು, ಒಡವೆ - ವಸ್ತು ಇತ್ಯಾದಿ:**

'ಗುಳ್ಳೆಗೊಟ್ಟೆ', 'ಉಳಿಸೆಂಡು', 'ಪೊಡೆಸೆಂಡು', 'ಮರಗೆರಸಿ' - (ವಿಕ್ರವಿ. ೩.೦) ಮೊದಲಾದ ಆಟಗಳ ಹೆಸರುಗಳು ಕಂಡುಬರುತ್ತವೆ. ಇವು ಜನಪದರಲ್ಲಿ ಪ್ರಚಲಿತವಿದ್ದ ಆಟಗಳೇ ಆಗಿರಬೇಕು.

ಜನಪದ ವಸ್ತುವಿಷಯಗಳಿಗೆ ಸೇರ್ಪಡೆಯಾಗುವ ಒಡವೆ - ವಸ್ತ್ರ, ಆಯುಧ-ಸಲಕರಣೆ ಮೊದಲಾದವುಗಳ ಉಲ್ಲೇಖವೂ ಕಂಡುಬರುತ್ತದೆ. ಉದಾ.ಗೆ: ಶಸ್ತ್ರಾಸ್ತ್ರ: 'ಕವಲಂಬು', 'ಮೊನೆಯಂಬು', 'ಕೆಲ್ಲಂಬು' (ವಿಕ್ರವಿ. XIII-39), 'ಬಾಳ್', 'ಕಕ್ಕಡೆ', 'ಪಂಚರ', 'ಮಾಳಜಿಗೆ' (ವಿಕ್ರವಿ. X-76), ಆಭರಣ: 'ಅರಳೆಲೆ', ಕಟಿಸೂತ್ರ (ವಿಕ್ರವಿ. XI-4), ವಾದ್ಯ: 'ಮೃದಂಗ', 'ಶಂಖ', 'ಪಟಹ' (ವಿಕ್ರವಿ. X-15), ಬೇಟೆ: 'ಪಂದಿವೇಂಟೆ'; 'ಕಿಱುವೇಂಟೆ', 'ಪೆರ್ವೇಂಟೆ' (ವಿಕ್ರವಿ. V-46 ವ).

ಈ ಮೇಲಿನ ಉಲ್ಲೇಖಗಳೇ ಅಲ್ಲದೆ ಜನಪದ ವೈದ್ಯವಾಗಿ ಕಂಡುಬರುವ ವಿಷಯವೂ ಇಲ್ಲಿ ಕಂಡುಬರುತ್ತದೆ. ಕತ್ತಿಗಳ, ಕಕ್ಕಡೆಗಳ ಚೂರುಗಳನ್ನು ಅಯಸ್ಕಾಂತವನ್ನು ತೋರಿಸಿ ತೆಗೆಯುತ್ತಿದ್ದ ಉಲ್ಲೇಖವು ವಿಕ್ರಮಾರ್ಜುನ ವಿಜಯದಲ್ಲಿ ದೊರೆಯುತ್ತದೆ (X-76).

**ಮುಕ್ತಾಯ:**

ಈ ಮೇಲಿನ ಅಂಶಗಳನ್ನೆಲ್ಲಾ ಗಮನಿಸಿದರೆ ಓರ್ವ ಕವಿ ಶಿಷ್ಟಕವಿ ಎನಿಸಿದರೂ ಆತ ಏಕಾಏಕಿ ಜಾನಪದರಿಂದ ಪ್ರತ್ಯೇಕಗೊಂಡು ನಿಲ್ಲಲಾರ ಎಂಬ ಅಂಶವು ಸ್ಪಷ್ಟವಾಗುತ್ತದೆ. ಜಾನಪದೀಯ ಸಂಸ್ಕಾರಗಳು ಆತನ ವಿಚಾರಗಳಲ್ಲಿ ಹರಳುಗೊಂಡು ಅವು ಆತನ ಕೃತಿಗಳಲ್ಲಿ ಒಂದಲ್ಲ ಒಂದು ರೀತಿ ಎಡೆ ಪಡೆದುಕೊಳ್ಳುತ್ತವೆ. ಪರಂಪರಾನುಗತವಾಗಿ ಬಂದ ಕಥೆ, ಆಶಯ ಇವುಗಳಿಗೇ ಅಲ್ಲದೆ, ತನ್ನ ಸುತ್ತಲಿನ ಜನಪದ ಅಂಶಗಳಾದ ನಂಬಿಕೆ, ಆಚಾರ-ವಿಚಾರಗಳಿಗೆ ಕವಿ ತನಗರಿವಿಲ್ಲದಂತೆಯೇ ಋಣಿಯಾಗಬೇಕಾಗುತ್ತದೆ. ಕವಿಯಲ್ಲಿ ಸಂಸ್ಕಾರಗೊಂಡು ಬಂದ ಜಾನಪದ ಪ್ರಕ್ರಿಯೆಯು ಸಹಜವಾಗಿಯೇ ಆತನ ಕೃತಿಯಲ್ಲಿ ಪ್ರಕಟಗೊಳ್ಳುತ್ತದೆ; ಕೃತಿ ಜೀವಂತವಾಗುತ್ತದೆ.

ಮಾರ್ಗಸಾಹಿತ್ಯದ ಜೊತೆ ಜೊತೆಯಲ್ಲಿಯೇ ಜನಪದ ಪ್ರಕ್ರಿಯೆಗಳನ್ನು ತಮ್ಮದಾಗಿಸಿಕೊಂಡಿರುವ ಕವಿರತ್ನತ್ರಯರ ಪ್ರತಿಭಾಶಕ್ತಿ ಶ್ಲಾಘನೀಯವಾದುದು.

### ಅಡಿ ಟಿಪ್ಪಣಿ

೧. ಕನ್ನಡ ವಿಶ್ವಕೋಶ, ಸಂ. ೮, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೫, ಎಚ್.ದೊರೆಸ್ವಾಮಿ, ಪು. ೪೫.

೨. ಜೀ.ಶಂ. ಪರಮಶಿವಯ್ಯ, 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು', ಪ್ರಸಾರಾಂಗ, ಮೈ.ವಿ.ವಿ. ೧೯೭೯, ಪು. ೫.

೩. R.S. Boggs, Standard dictionary of Folklore, Mythology & Legend, Vol II, P. 1142.

೪. Smith Thomson, 'The Folk Tale', Newyork, 1951, p. 415.

೫. ಸಂಶೋಧನೆ, (ಸಂ.) ಲಕ್ಷ್ಮಣ್ ತೆಲಗಾವಿ, ಡಾ. ಎಂ. ಚಿದಾನಂದಮೂರ್ತಿ ಅಭಿನಂದನ ಸಮಿತಿ, 'ರಾಗಿಣಿ', ಸರ್ವಿಸ್‌ರಸ್ತೆ, ವಿಜಯನಗರ ೨ನೇ ಹಂತ, ಬೆಂಗಳೂರು ೫೬೦೦೪೦, ೧೯೯೧.

೬. P. Thomas, Epics, Myths & Legends of India. P-VI.

೭. ಅದೇ, ಪು. IX.

೮. ಡಾ. ಎಂ. ಚಿದಾನಂದಮೂರ್ತಿ, ಗ್ರಾಮೀಣ, ಬಾಪ್ಕೊ ಪ್ರಕಾಶನ, ಬೆಂಗಳೂರು, ೧೯೭೭, ಪು. ೨೨೪.

೯. ಡಾ. ಶಿವರಾಮ ಕಾರಂತ, ಜಾನಪದ ಗೀತೆಗಳು, ಪ್ರಸಾರಾಂಗ, ಮೈ.ವಿ.ವಿ.ನಿ. ಪು. ೬೫.

೧೦. ಕೆ.ಆರ್. ಸಂಧ್ಯಾರೆಡ್ಡಿ, 'ಕನ್ನಡ ಜನಪದ ಕಥೆಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೮೨.

೧೧. ನೋಡಿ: ಕೆ.ಆರ್. ಸಂಧ್ಯಾರೆಡ್ಡಿ, 'ಕನ್ನಡ ಜನಪದ ಕಥೆಗಳು', ಅನುಬಂಧ, ಜನಪದ ಕಥಾಶಯಗಳು, ಕ್ರ್ಮ ೧೧೦-೧೯೯, ಪು.೪೫೬).

೧೨. ವಿವರಗಳಿಗೆ ನೋಡಿ: ಡಾ. ಎಂ.ಎ. ಜಯಚಂದ್ರ, 'ಪ್ರಾಚೀನ ಕನ್ನಡ ಜೈನ ಸಾಹಿತ್ಯದಲ್ಲಿ, ಜಾನಪದ ಕಥೆಗಳು - ಒಂದು ಅಧ್ಯಯನ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪, ಪುಟ. ೩೬.

೧೩. ಸನ್ಮತಿ ಮಾಸಪತ್ರಿಕೆ, ಡಿಸೆಂಬರ್, ೧೯೭೭, ಹಂ.ಪ. ನಾಗರಾಜಯ್ಯ, ಎಂ.ಎ. ಜಯಚಂದ್ರ, ಅದೇ ಪು. ೪೦, ಪೊನ್ನ ಮತ್ತು ಜಾನಪದ.

೧೪. ಎಂ.ಎ. ಜಯಚಂದ್ರ, ಅದೇ. ಪು. ೧೩೯.

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಇದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿಯನ್ನು ಒದಗಿಸಿರುವುದನ್ನು ಗುರುತಿಸಬಹುದಾಗಿದೆ. ಪಂಪ, ರನ್ನ, ನಾಗವರ್ಮ, ನಯಸೇನ, ಬಂಧುವರ್ಮ, ಶಿವಕೋಟ್ಯಾಚಾರ್ಯ, ಬ್ರಹ್ಮಶಿವ, ಮುಂತಾದ ಎಲ್ಲಾ ಪ್ರಾಚೀನ ಕವಿಗಳಲ್ಲಿ, ವಚನ ಕೀರ್ತನೆ ರಗಳೆಗಳಲ್ಲಿ; ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ; ಆಧುನಿಕ ಕತೆ, ಕಾದಂಬರಿ, ನಾಟಕ, ಕವಿತೆಗಳಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಈ ಜಾನಪದ ಅಂಶಗಳು ಜೀವಸತ್ವಗಳಾಗಿರುವುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದಾಗಿದೆ.

ಸಾಹಿತ್ಯ ಹಿಡಿ ಮಂದಿಗಲ್ಲ, ಬಹುಮಂದಿಗೆ ಮತ್ತು ಬಹುಮಂದಿಯ ಜೀವನ ಸಾಕ್ಷಾತ್ಕಾರಕ್ಕೆ ಎಂಬ ಪ್ರಧಾನ ಕಾಳಜಿಯನ್ನು ವಚನಕಾರರು ಅನನ್ಯವಾಗಿ ತಮ್ಮ ವಚನಗಳಲ್ಲಿ ಪುನರವತಾರ ಮಾಡಿಸಿದ ಕಾರಣದಿಂದಾಗಿ ಸಹಜವಾಗಿ ವಚನ ಸಾಹಿತ್ಯ ಮತ್ತು ಅದರ ಜಾಡನ್ನೇ ಹಿಡಿದ ರಗಳೆ, ತ್ರಿಪದಿ ಸಾಹಿತ್ಯಗಳು ತಮ್ಮ ಸಾಹಿತ್ಯದ ಕೇಂದ್ರ, ನೆಲೆಗಳನ್ನಾಗಿ ಜನರ ಭಾಷೆ, ಅನುಭವ ಮತ್ತು ಆಶಯಗಳನ್ನು ಆಶ್ರಯಿಸಿದವು. ಹಾಗೆಯೇ ರಾಜರನ್ನು ರಾಜಾಸ್ಥಾನವನ್ನು ಧಿಕ್ಕರಿಸಿ ಉದ್ದೇಶಪೂರ್ವಕವಾಗಿ ಜನದೆಡೆ ಕಣ್ಣು ತೆರೆದ ಕವಿಗಳು ಪುರಾಣ ಲೋಕಕ್ಕಿಂತ ವಿಶಿಷ್ಟವಾದ ಭಿನ್ನವಾದ ಮತ್ತು ಜೀವಂತವಾದ ಹೊಸ ಅನುಭವ ಲೋಕವನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೀಗಾಗಿ ಸಾಹಿತ್ಯದ ವಸ್ತುವಿನಲ್ಲಿ, ಭಾಷೆಯಲ್ಲಿ, ಛಂದಸ್ಸಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ಆವರಣ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಜಾನಪದ ಆಶಯಗಳನ್ನು ಸಹಜವಾಗಿ ತುಂಬಿಕೊಂಡು ಈ ಸಾಹಿತ್ಯವನ್ನು ಜಡ್ಡು ಕಟ್ಟಿದ ರಾಜಾಸ್ಥಾನ ಸಾಹಿತ್ಯದ ಸಂಕೋಲೆಗಳಿಂದ ಹೊರಗೆಳೆದು ಜನರ ನಡುವೆ ತಂದವು.

ನಮ್ಮ ಸಾವಿರ ವರ್ಷಕ್ಕೂ ಹೆಚ್ಚುಕಾಲ ಬೆಳೆದು ಬಂದಿರುವ ಕನ್ನಡದ ಶಿಷ್ಟ ಸಾಹಿತ್ಯ ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಅತ್ಯಂತ ಫಲಪ್ರದವೆಂದು ಭಾವಿಸಲಾಗಿದೆ. ಆದ್ದರಿಂದ ಅಕಾಡೆಮಿ 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ವಿಶಿಷ್ಟ ಮಾಲಿಕೆಯನ್ನು ಆರಂಭಿಸಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇತ್ತೀಚಿನ ಸಾಹಿತ್ಯವನ್ನು ಜಾನಪದೀಯ ದೃಷ್ಟಿಯಿಂದ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವೊಂದನ್ನು ಮಾಡುತ್ತಿದೆ. ಅದರ ಫಲವೇ ಈಗ ಬೆಳಕು ಕಾಣುತ್ತಿರುವ ಹನ್ನೆರಡು ಪುಸ್ತಕಗಳು.

ಡಾ. ಎಚ್. ಜೆ. ಲಕ್ಕಪ್ಪಗೌಡ